prajavani.net prajavani
ಗುರುವಾರ, ಜನವರಿ 15, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 15 | ಪುಟ 20
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಬಸವ ಸಂಕ್ರಾಂತಿ
ರಾಯಚೂರಿನಲ್ಲಿ ಮಕರ ಸಂಕ್ರಮಣದ ದಿನ ಸಿಂಗಾರಗೊಂಡಿದ್ದ ಕೋಲೆ ಬಸವ ಮಾಲೀಕನ ಜತೆ ಸಾಗಿತು




ಸಂಕ್ರಾಂತಿ ಹಬ್ಬದ ಶುಭಾಶಯಗಳು

ಸೆನ್ಸೆಕ್ಸ್ 83,382 | ನಿಫ್ಟಿ 25,665 | $/₹ 90.34 | ಚಿನ್ನ (Std. 10g) ₹1,47,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,96,800 (ಬೆಂಗಳೂರು)

22ರಿಂದ ಜಂಟಿ ಅಧಿವೇಶನ

ಪ್ರಜಾವಾಣಿ ವಾರ್ತೆ



ಎಚ್.ಕೆ. ಪಾಟೀಲ

ಬೆಂಗಳೂರು: ವಿಧಾನ ಮಂಡಲದ ಜಂಟಿ ಅಧಿವೇಶನವನ್ನು ಇದೇ 22ರಿಂದ 31ರವರೆಗೆ ನಡೆಸಲು ಹಾಗೂ ಕೇಂದ್ರ ಸರ್ಕಾರ ಜಾರಿಗೆ ತಂದಿರುವ 'ವಿಬಿ ಜಿ ರಾಮ್ ಜಿ' ಕಾಯ್ದೆಯ ಕುರಿತು ಸದನದಲ್ಲಿ ವಿಶೇಷ ಚರ್ಚೆ ನಡೆಸಿ ನಿರ್ಣಯ ತೆಗೆದುಕೊಳ್ಳಲು ಸರ್ಕಾರ ತೀರ್ಮಾನಿಸಿದೆ.

ಮಂಗಳವಾರ ನಡೆದ ತುರ್ತು ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಅಧಿವೇಶನದ ಮೊದಲ ದಿನ ಬೆಳಿಗ್ಗೆ 11 ಗಂಟೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ' ಎಂದರು.

6

ಏಪ್ರಿಲ್‌ಗೆ ಮತ್ತೆ ವಿದ್ಯುತ್ ಬರೆ

₹4,900 ಕೋಟಿ ಆದಾಯ ಖೋತಾ: ಕೆಇಆರ್‌ಸಿ ಮೊರೆ ಹೋದ ಎಸ್ಕಾಂಗಳು

• ಎ.ಎಂ.ಸುರೇಶ

ಬೆಂಗಳೂರು: ಐದು ವಿದ್ಯುತ್ ಸರಬರಾಜು ಕಂಪನಿಗಳ ಆದಾಯದಲ್ಲಿ ಖೋತಾ ಆಗಿದ್ದು, ಇದನ್ನು ಸರಿದೂಗಿಸಲು ಏಪ್ರಿಲ್‌ನಿಂದಲೇ ವಿದ್ಯುತ್ ದರ ಏರಿಸುವ ತಯಾರಿ ನಡೆದಿದೆ.

ವಿದ್ಯುತ್ ಸರಬರಾಜು ಕಂಪನಿಗಳು(ಎಸ್ಕಾಂ) 2024–25ನೇ ಸಾಲಿನ ವಾರ್ಷಿಕ ಕಾರ್ಯಕ್ಷಮತೆ ವರದಿಯನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಸಲ್ಲಿಸಿವೆ. ಎಸ್ಕಾಂಗಳ ಆದಾಯದಲ್ಲಿ ಸುಮಾರು ₹4,900 ಕೋಟಿ ಖೋತಾ ಆಗಿರುವುದನ್ನು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.

ಕಳೆದ ವರ್ಷದ ಮಾರ್ಚ್‌ನಲ್ಲಿ ದರ ಪರಿಷ್ಕರಣೆ ಮಾಡಿದಾಗ ಕೆಇಆರ್‌ಸಿ ಅಂದಾಜು ಮಾಡಿದ್ದ ಲೆಕ್ಕಾಚಾರಕ್ಕಿಂತ ವೆಚ್ಚ ಹೆಚ್ಚಾಗಿದ್ದರೆ, ಆದಾಯದಲ್ಲಿ ಖೋತಾ ಆಗಿದೆ. ಇದರ ನಡುವೆ ಸಮತೋಲನ ಕಾಪಾಡಲು ದರ ಪರಿಷ್ಕರಣೆ ಮಾಡುವ ಅಗತ್ಯವಿದೆ ಎಂದು ಎಸ್ಕಾಂಗಳು ಕೆಇಆರ್‌ಸಿಗೆ ಸಲ್ಲಿಸಿರುವ ವರದಿಯಲ್ಲಿ ಉಲ್ಲೇಖಿಸಿವೆ. ಕಂಪನಿಗಳು ಸಲ್ಲಿಸಿರುವ ಪ್ರಸ್ತಾವದ ಬಗ್ಗೆ ಆಯೋಗವು ಪರಿಶೀಲನೆ ನಡೆಸಿ ದರ ಹೆಚ್ಚಳದ ಆದೇಶ ಹೊರಡಿಸಲಿದೆ.

ಯಾವ, ಯಾವ ಬಾಬ್ತಿನಲ್ಲಿ ನಿಗದಿಗಿಂತ ಕಡಿಮೆ ಆದಾಯ ಸಂಗ್ರಹವಾಗಿದೆ. ಯಾವುದಕ್ಕೆ ನಿಗದಿಗಿಂತ ಅಧಿಕ ವೆಚ್ಚವಾಗಿದೆ ಎಂಬ ವಿವರಗಳು ವರದಿಯಲ್ಲಿವೆ. ಅದರ ಪ್ರಕಾರ ವಿದ್ಯುತ್ ಖರೀದಿ, ಬಡ್ಡಿ ಪಾವತಿ ಮತ್ತು ಹಣಕಾಸು ವೆಚ್ಚ, ಕಾರ್ಯಾಚರಣೆ ಮತ್ತು ನಿರ್ವಹಣೆ ಇತ್ಯಾದಿಗಳಿಗೆ ಕೆಇಆರ್‌ಸಿ ಅಂದಾಜಿಸಿದ್ದಕ್ಕಿಂತ ಅಧಿಕ ವೆಚ್ಚವಾಗಿದೆ ಎಂದು ತೋರಿಸಲಾಗಿದೆ.

ಆಯೋಗಕ್ಕೆ ಸಲ್ಲಿಸಿರುವ ಮಾಹಿತಿ ಪ್ರಕಾರ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ (ಬೆಸ್ಕಾಂ) ಅತಿ ಹೆಚ್ಚು, ಅಂದರೆ ₹2,802.82 ಕೋಟಿ ಖೋತಾ ಆಗಿದೆ. ಉಳಿದೆಲ್ಲ ಎಸ್ಕಾಂಗಳ ಆದಾಯದಲ್ಲೂ ಎರಡು ಸಾವಿರ ಕೋಟಿ ರೂಪಾಯಿಗೂ ಅಧಿಕ ಖೋತಾ ಆಗಿದೆ. ದರ ಪರಿಷ್ಕರಣೆ ಮಾಡದಿದ್ದರೆ ಕಂಪನಿಗಳ ನಿರ್ವಹಣೆ ಕಷ್ಟವಾಗಲಿದೆ. ಆರ್ಥಿಕವಾಗಿ ಸಂಕಷ್ಟವನ್ನು ಎದುರಿಸಬೇಕಾಗುತ್ತದೆ ಎಂದು ವಿವರಿಸಲಾಗಿದೆ.

ಮರು ಪರಿಶೀಲನಾ ಅರ್ಜಿ: 2025ರ ಮಾರ್ಚ್‌ನಲ್ಲಿ ದರ ಪರಿಷ್ಕರಣೆ ಮಾಡಿ ಹೊರಡಿಸಿರುವ ಆದೇಶವನ್ನು ಮರುಪರಿಶೀಲಿಸಬೇಕು ಎಂದು ಕೋರಿ ಎಸ್ಕಾಂಗಳು ಕೆಇಆರ್‌ಸಿಗೆ ಪ್ರತ್ಯೇಕ ಅರ್ಜಿಯನ್ನು ಈಗಾಗಲೇ ಸಲ್ಲಿಸಿವೆ. ಇದನ್ನು ವಿಚಾರಣೆಗೆ ಅಂಗೀಕರಿಸಿದ್ದು, ಸದ್ಯದಲ್ಲೇ ಸಾರ್ವಜನಿಕವಾಗಿ ಅಹವಾಲುಗಳನ್ನು ಆಲಿಸಿ, ನಿರ್ಧಾರ ಪ್ರಕಟಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

12

ಮುಖ್ಯಾಂಶಗಳು

- ಆಯೋಗಕ್ಕೆ ವಾರ್ಷಿಕ ಕಾರ್ಯಕ್ಷಮತೆ ವರದಿ ಸಲ್ಲಿಕೆ
- ಆಯೋಗದಿಂದ ಎರಡು ಪ್ರತ್ಯೇಕ ವಿಷಯಗಳ ಅರ್ಜಿ ವಿಚಾರಣೆ
- ಕೈಗಾರಿಕೆ, ಕಾರ್ಖಾನೆಗಳಿಗೆ ಹೊರೆಯಾಗುವ ಸಾಧ್ಯತೆ



ಕಂಪನಿವಾರು ಆದಾಯ ಖೋತಾ (₹ ಕೋಟಿಗಳಲ್ಲಿ)

ಬೆಸ್ಕಾಂ	ಚೆಸ್ಕಾಂ	ಜೆಸ್ಕಾಂ	ಹೆಸ್ಕಾಂ	ಮೆಸ್ಕಾಂ (ಅಂದಾಜು)
2802.82	528.12	457.13	604.49	480

3 ವರ್ಷಕ್ಕೆ ಅನ್ವಯ: ಆದೇಶದ ಕತೆ ಏನು?

ಬಹುವಾರ್ಷಿಕ ದರ ಪದ್ಧತಿ ಕಳೆದ ವರ್ಷದಿಂದ ಜಾರಿಗೆ ಬಂದಿದ್ದು, 2028ರವರೆಗೆ ದರ ನಿಗದಿಪಡಿಸಿ ಕೆಇಆರ್‌ಸಿ ಆದೇಶಿಸಿತ್ತು.

ಅದರ ಪ್ರಕಾರ 2025–26, 2026–27 ಮತ್ತು 2027–2028ಕ್ಕೆ ಅನ್ವಯವಾಗುವಂತೆ ಪ್ರತ್ಯೇಕವಾಗಿ ದರ ನಿಗದಿ ಮಾಡಿ 2025ರಲ್ಲೇ ಆದೇಶ ಹೊರಡಿಸಲಾಗಿದೆ. ಕೆಇಆರ್‌ಸಿಯು ಮೂರು ವರ್ಷಗಳಿಗೆ ಅಂದಾಜು ಮಾಡಿದಕ್ಕಿಂತ ಹೆಚ್ಚಿನ ವೆಚ್ಚವಾಗುತ್ತಿದೆ. ಇದನ್ನು ಸರಿದೂಗಿಸಿಕೊಡಬೇಕು ಎಂಬುದು ಎಸ್ಕಾಂಗಳ ಬೇಡಿಕೆ.

ಏನನ್ನೂ ವಶಕ್ಕೆ ಪಡೆದಿಲ್ಲ– ಇ.ಡಿ

ಕೋಲ್ಕತ್ತ (ಪಿಟಿಐ): ರಾಜಕೀಯ ಸಲಹೆಗಾರ ಸಂಸ್ಥೆ 'ಐ–ಪ್ಯಾಕ್' ಕಚೇರಿ ಮತ್ತು ಅದರ ನಿರ್ದೇಶಕ ಪ್ರತೀಕ್ ಜೈನ್ ಅವರ ನಿವಾಸದ ಮೇಲೆ ಕಳೆದ ವಾರ ನಡೆದ ದಾಳಿಯಲ್ಲಿ ಯಾವುದೇ ದಾಖಲೆಯನ್ನು ವಶಕ್ಕೆ ಪಡೆದುಕೊಂಡಿಲ್ಲ ಎಂದು ಇ.ಡಿ ತಿಳಿಸಿದೆ.

9



ಚಿನಕುರುಳಿ

ಪ್ರಕಾಶ್ ಶೆಟ್ಟಿ



ಬೀದರ್: ಕತ್ತು ಸೀಳಿದ ಮಾಂಜಾ, ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ



ಬೀದರ್: ಬೈಕ್ ಮೇಲೆ ತೆರಳುವಾಗ ಗಾಳಿಪಟದ ಮಾಂಜಾ (ದಾರ) ಕುತ್ತಿಗೆಗೆ ಸುತ್ತಿಕೊಂಡು ಸೀಳಿದ್ದರಿಂದ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಘಟನೆ ಚಿಟಗುಪ್ಪ ತಾಲ್ಲೂಕಿನ ತಾಳಮಡಗಿ ಸೇತುವೆ ಬಳಿಯಲ್ಲಿ ಬುಧವಾರ ನಡೆದಿದೆ.

ಬೀದರ್ ತಾಲ್ಲೂಕಿನ ಬಂಬುಳಗಿ ಗ್ರಾಮದ ಸಂಜುಕುಮಾರ ಗುಂಡಪ್ಪ ಹೊಸಮನಿ (49) ಮೃತ ವ್ಯಕ್ತಿ. ಮೃತರಿಗೆ ಪತ್ನಿ, ಪುತ್ರ ಹಾಗೂ ಮೂವರು ಪುತ್ರಿಯರಿದ್ದಾರೆ.

'ಹುಮನಾಬಾದ್ ಪಟ್ಟಣದ ವಸತಿ ಶಾಲೆಯಲ್ಲಿ ಓದುತ್ತಿರುವ ಮಗಳನ್ನು ಸಂಕ್ರಾಂತಿ ಹಬ್ಬದ ರಜೆ ಇರುವುದರಿಂದ ಕರೆತರಲು ಸಂಜುಕುಮಾರ ಅವರು ಬೈಕ್ ಮೇಲೆ ತೆರಳುತ್ತಿದ್ದರು. ಆಗ ಮಾಂಜಾ ಕುತ್ತಿಗೆಗೆ ಸಿಲುಕಿ, ದುರಂತ ಸಂಭವಿಸಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ತಿಳಿಸಿದ್ದಾರೆ.

9

'ಕಲ್ಟ್' ಫ್ಲೆಕ್ಸ್ ತೆರವು ಪೌರಾಯುಕ್ತೆಗೆ ಧಮ್ಕಿ

ಪ್ರಜಾವಾಣಿ ವಾರ್ತೆ



ರಾಜೀವ್ ಗೌಡ



ಅಮೃತಾ ಗೌಡ

ಚಿಕ್ಕಬಳ್ಳಾಪುರ: ಸಚಿವ ಜಮೀರ್ ಅಹಮದ್ ಖಾನ್ ಪುತ್ರ ಝೈದ್ ಖಾನ್ ನಟಿಸಿರುವ 'ಕಲ್ಟ್' ಸಿನಿಮಾದ ಫ್ಲೆಕ್ಸ್ ತೆರವುಗೊಳಿಸಿದ ಶಿಡ್ಲಘಟ್ಟ ನಗರಸಭೆ ಪೌರಾಯುಕ್ತೆ ಜಿ. ಅಮೃತಾ ಗೌಡ ಅವರಿಗೆ ಸ್ಥಳೀಯ ಕಾಂಗ್ರೆಸ್ ಮುಖಂಡ ಹಾಗೂ ಕೆಪಿಸಿಸಿ ಸಂಯೋಜಕ ರಾಜೀವ್ ಗೌಡ ದೂರವಾಣಿಯಲ್ಲಿ ಬೆದರಿಕೆ ಹಾಕಿದ್ದಾರೆ.

ಇಬ್ಬರ ನಡುವಿನ ದೂರವಾಣಿ ಸಂಭಾಷಣೆಯ ಆಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬೆನ್ನಲ್ಲೇ ರಾಜಕೀಯ ಹಾಗೂ ಅಧಿಕಾರಿಗಳ ವಲಯದಲ್ಲಿ ಭಾರಿ ಆಕ್ರೋಶ ವ್ಯಕ್ತವಾಗಿದೆ. ಕಾಂಗ್ರೆಸ್ ಮುಖಂಡನ ವಿರುದ್ಧ ಪೌರಾಯುಕ್ತೆ, ಜೆಡಿಎಸ್ ಮತ್ತು ಬಿಜೆಪಿ ಮುಖಂಡರು ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

8





ಹವಾಮಾನ ಮುನ್ಸೂಚನೆ: ನಗರದಲ್ಲಿ ಚಳಿಯ ಅನುಭವ ಆಗಲಿದೆ. ಮುಂಜಾವಿನಲ್ಲಿ ಮಂಜು ಕವಿದ ವಾತಾವರಣ ಇರಲಿದೆ.

ಬಾಣಂತಿಯರ ಊಟಕ್ಕೂ ಕತ್ತರಿ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದ ವೈದ್ಯರನ್ನು ಬೇರೆಡೆಗೆ ಸ್ಥಳಾಂತರಿಸಲು ಮುಂದಾಗಿದ್ದ ಸರ್ಕಾರ ಇದೀಗ ಬಾಣಂತಿಯರಿಗೆ ಊಟವನ್ನೂ ನೀಡುತ್ತಿಲ್ಲ ಎಂಬುದು ಮಾನವ ಹಕ್ಕುಗಳ ಆಯೋಗದ ಸದಸ್ಯರು ಭೇಟಿ ನೀಡಿದಾಗ ಬಹಿರಂಗವಾಯಿತು.

ಕೆಂಗೇರಿ ಕೋಟೆ ಸಮುದಾಯ ಆರೋಗ್ಯ ಕೇಂದ್ರದ ಶಿಶು ತಜ್ಞರನ್ನು ಸರ್ಕಾರ ಏಕಾಏಕಿ ವರ್ಗಾವಣೆ



ಮಾನವ ಹಕ್ಕುಗಳ ಆಯೋಗದ ಡಿವೈಎಸ್‌ಪಿ ಸುಧೀರ್ ಎಂ. ಹೆಗ್ಡೆ ರೋಗಿಗಳು ಹಾಗೂ ಸಾರ್ವಜನಿಕರಿಂದ ಮಾಹಿತಿ ಪಡೆದರು

ಮಾಡಿದ್ದು, ಕೆಂಗೇರಿ ಸುತ್ತಮುತ್ತಲಿನ ಗ್ರಾಮಗಳ ಗರ್ಭಿಣಿಯರಿಗೆ ತುರ್ತು ಪರಿಸ್ಥಿತಿಯಲ್ಲಿ ತೊಂದರೆಯಾಗುತ್ತಿದೆ ಎಂದು ಜಯಪ್ರಕಾಶ್ ನಾರಾಯಣ ವಿಚಾರ ವೇದಿಕೆ ವತಿಯಿಂದ ದೂರು ನೀಡಲಾಗಿತ್ತು.

ಈ ಕಾರಣದಿಂದ ಮಾನವ ಹಕ್ಕುಗಳ ಆಯೋಗದ ಡಿವೈಎಸ್ಪಿ ಸುಧೀರ್ ಎಂ.ಹೆಗ್ಡೆ ಅವರು ಕೆಂಗೇರಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಹಿಂದೆ ಎನ್‌ಜಿಒ ಮೂಲಕ ಊಟದ ವ್ಯವಸ್ಥೆ ಮಾಡಲಾಗುತ್ತಿತ್ತು. ಸರ್ಕಾರದಿಂದ ಊಟದ ಬಿಲ್ ಪಾವತಿ ಆಗದ ಕಾರಣ ಊಟದ ವ್ಯವಸ್ಥೆ ಸ್ಥಗಿತಗೊಂಡಿದೆ ಎಂದು ವೈದ್ಯಾಧಿಕಾರಿ ಕೆ.ಟಿ.ವೆಂಕಟೇಶ್ ತಿಳಿಸಿದ್ದಾರೆ.

ಸರ್ಕಾರದ ನಿಯಮಗಳ ಪ್ರಕಾರ ಗರಿಷ್ಠ 5 ದಿನ ಬಾಣಂತಿಯರಿಗೆ ಊಟದ ವ್ಯವಸ್ಥೆ ಕಲ್ಪಿಸಬೇಕಿದೆ. ಬಾಣಂತಿಯರು ಮನೆಯಿಂದಲೇ ಊಟವನ್ನು ತರಿಸಿ ಕೊಳ್ಳಬೇಕಾದ ಸ್ಥಿತಿ ನಿರ್ಮಾಣವಾಗಿದೆ ಎಂದು ವೇದಿಕೆ ಅಧ್ಯಕ್ಷ ಬಿ.ಎಂ. ಶಿವಕುಮಾರ್ ಹೇಳಿದರು.

ಡಿವೈಎಸ್‌ಪಿ ಕೆಂಡಾಮಂಡಲ: ಆಡಳಿತ ವೈದ್ಯಾಧಿಕಾರಿ ಡಾ.ಕೆ.ಟಿ. ವೆಂಕಟೇಶ್ ಅವರು ಮಾಹಿತಿ ಕೊಡಲು ನಿರಾಕರಿಸಿದ ಸಂದರ್ಭದಲ್ಲಿ ಅವರನ್ನು ತರಾಟೆಗೆ ತೆಗೆದುಕೊಂಡ ಡಿವೈಎಸ್ಪಿ ಸುಧೀರ್ ಹೆಗ್ಡೆ, 'ಆಯೋಗದ ಅಧಿಕಾರಿಗೆ ಮಾಹಿತಿ ನೀಡುವುದು ಕಾನೂನಿನ ಅನ್ವಯ ನಿಮ್ಮ ಜವಾಬ್ದಾರಿ. ಮಾಹಿತಿ ನಿರಾಕರಿಸಿದರೆ ಪ್ರಕರಣ ದಾಖಲು ಮಾಡಬಹುದಾಗಿದೆ' ಎಂದು ತರಾಟೆಗೆ ತೆಗೆದುಕೊಂಡರು.

'ದೂರಿಗೆ ಸಂಬಂಧಿಸಿದಂತೆ ವೈದ್ಯಾಧಿಕಾರಿ, ರೋಗಿಗಳು ಹಾಗೂ ಸ್ಥಳೀಯರಿಂದ ಆಡಿಯೊ, ವಿಡಿಯೊ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲಾಗಿದೆ. ತ್ರಿಸದಸ್ಯ ಪೀಠದ ಮೂಲಕ ನೋಟಿಸ್ ಜಾರಿ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

'ಸಮುದಾಯ ಆಸ್ಪತ್ರೆಗೆ ಹೆರಿಗೆಗಾಗಿ ಬರುವವರಿಗೆ ಖಾಸಗಿ ಆಸ್ಪತ್ರೆಗೆ ಹೋಗುವಂತೆ ಹೇಳುವ ಮೂಲಕ 30ಕ್ಕಿಂತ ಕಡಿಮೆ ಹೆರಿಗೆ ನಡೆಸಲಾಗುತ್ತಿದೆ ಎಂದು ಬಿಂಬಿಸುವ ಕೆಲಸವಾಗುತ್ತಿದೆ. ಸರ್ಕಾರ ಸಮುದಾಯ ಆಸ್ಪತ್ರೆಗೆ ಹೆಚ್ಚಿನ ಮೂಲಭೂತ ಸೌಕರ್ಯ ಕಲ್ಪಿಸಿ ಬಡವರು, ಮಧ್ಯಮ ವರ್ಗದವರಿಗೆ ಉತ್ತಮ ಚಿಕಿತ್ಸೆ ದೊರೆಯುವಂತೆ ನೋಡಿಕೊಳ್ಳಬೇಕು' ಎಂದು ಕೆಂಗೇರಿ ಕೋಟೆ ನಿವಾಸಿ ಆನಂದ್ ಒತ್ತಾಯಿಸಿದರು.

ಎನ್.ಆರ್.ರಮೇಶ್‌ರವರ ಸಮಾಜಮುಖಿ ಜನ್ಮದಿನಾಚರಣೆ



ಬೆಂಗಳೂರು: ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಮಾಜಿ ಅಧ್ಯಕ್ಷರು ಎನ್.ಆರ್. ರಮೇಶ್‌ರವರ ಜನ್ಮದಿನವನ್ನು ಎನ್‌ಆರ್‌ಆರ್ ಯುವ ಬ್ರಿಗೇಡ್‌ನಿಂದ ಸಮಾಜಮುಖಿ ಕಾರ್ಯಕ್ರಮಗಳಿಂದ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ 20ಸಾವಿರಕ್ಕೂ ಅಧಿಕ ಅಭಿಮಾನಿಗಳು ಹಾಜರಿದ್ದು, ಶುಭಕೋರಿದರು.

ಕಾರ್ಯಕ್ರಮದ ಭಾಗವಾಗಿ ನೂರಾರು ಜನರಿಗೆ ಉಚಿತ ಕಣ್ಣಿನ ಶಸ್ತ್ರಚಿಕಿತ್ಸೆ, ಕನ್ನಡಕ ವಿತರಣೆ, ರಕ್ತದಾನ ಶಿಬಿರ ಮತ್ತು ಕ್ಯಾನ್ಸರ್ ತಪಾಸಣಾ ಶಿಬಿರಗಳನ್ನು ಆಯೋಜಿಸುವ ಮೂಲಕ ಸಾರ್ವಜನಿಕರ ಆರೋಗ್ಯಕ್ಕೆ ಒತ್ತು ನೀಡಲಾಯಿತು. ಜತೆಗೆ, ಯಡಿಯೂರು ವಾರ್ಡ್ ಸುತ್ತಮುತ್ತಲಿನ 10ಕ್ಕೂ ಹೆಚ್ಚು ಶಾಲೆಗಳ 500ಕ್ಕೂ ಹೆಚ್ಚು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಕಳೆದ 5 ವರ್ಷಗಳ ಪ್ರಶ್ನೋತ್ತರ ಪತ್ರಿಕೆಗಳ ಹೊತ್ತಿಗೆಗಳನ್ನು ವಿತರಿಸಲಾಯಿತು. 500ವಿದ್ಯಾರ್ಥಿಗಳಿಗೆ ನೋಟ್‌ಬುಕ್, ಬ್ಯಾಗ್ ಹಾಗೂ ಪ್ರಕಾಶನಗರದ ಸರ್ಕಾರಿ ಶಾಲೆಯ 300ವಿದ್ಯಾರ್ಥಿಗಳಿಗೆ ಶೂಗಳನ್ನು ವಿತರಿಸಲಾಯಿತು. ಇದರೊಂದಿಗೆ, ವಿವಿಧ ಆಸ್ಪತ್ರೆಗಳಲ್ಲಿನ 500ಕ್ಕೂ ಹೆಚ್ಚು ರೋಗಿಗಳಿಗೆ ಮತ್ತು ಬಡವರಿಗೆ ಉಚಿತವಾಗಿ ಕಂಬಳಿಗಳನ್ನು ನೀಡಲಾಯಿತು. ಜತೆಗೆ, ಜನ್ಮದಿನದ ಅಂಗವಾಗಿ ರಾಜ್ಯಮಟ್ಟದ ವಾಲೀಬಾಲ್ ಪಂದ್ಯಾವಳಿಗಳನ್ನು ಆಯೋಜಿಸಲಾಗಿತ್ತು. ಜನ್ಮದಿನದ ಮುನ್ನಾ ದಿನವಾದ ಜ.13ರಂದು ತ್ಯಾಗರಾಜನಗರ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ಸುಮಾರು 3 ಕಿ.ಮೀ ಉದ್ದದ ಬೃಹತ್ ಮೆರವಣಿಗೆಯನ್ನು ನಡೆಸಲಾಯಿತು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಅಂಚೆ ಕಚೇರಿ ಪುನರಾರಂಭ ತೇಜಸ್ವಿ ಸೂರ್ಯ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಸವನಗುಡಿಯ ಅಶೋಕ ನಗರ ಅಂಚೆ ಕಚೇರಿಯನ್ನು ಪುನರಾರಂಭಿಸುವುದಾಗಿ ಸಂಸದ ತೇಜಸ್ವಿ ಸೂರ್ಯ ಭರವಸೆ ನೀಡಿದರು.

ಶಾಸಕ ರವಿಸುಬ್ರಮಣ್ಯ ಹಾಗೂ ಮಾಜಿ ಮೇಯರ್ ಕಟ್ಟೆ ಸತ್ಯನಾರಾಯಣ ನೇತೃತ್ವದಲ್ಲಿ ಬಂದ್ ಆಗಿರುವ ಅಶೋಕ ನಗರ ಅಂಚೆ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಲಾಯಿತು. ಸ್ಥಳಕ್ಕೆ ಆಗಮಿಸಿದ ತೇಜಸ್ವಿ ಅವರು ಪ್ರತಿಭಟನಕಾರರಿಂದ ಮನವಿ ಪತ್ರ ಸ್ವೀಕರಿಸಿ ಮಾತನಾಡಿದರು. 'ಸ್ಥಳೀಯರ ಮನವಿಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ವಿಷಯನ್ನು ಕೇಂದ್ರ ಸಚಿವರು ಹಾಗೂ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಇತ್ಯರ್ಥಗೊಳಿಸಲಾಗುವುದು' ಎಂದು ಹೇಳಿದರು.

ಅಂಚೆ ಇಲಾಖೆ ಅಧಿಕಾರಿಗಳು ಮತ್ತು ಬಸವನಗುಡಿಯ ನಾಗರಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.


EXCHANGE BONANZA
UPTO ₹25,000
ವರೆಗೂ ಹಳೆಯ ಎಲೆಕ್ಟ್ರಾನಿಕ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು ಎಕ್ಸ್‌ಚೇಂಜ್ ಮೇಲೆ
MASSIVE DISCOUNTS
UPTO 70% OFF
ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
Sakkath SANKRANTHI Sale
ಮಳಿಗೆಗಳು 10 AM - 10 PM ತೆರೆದಿರುತ್ತದೆ
CASH BACK BONANZA
UPTO 20% ಕ್ಯಾಶ್ ಬ್ಯಾಕ್*
FINANCE BONANZA
1 ಇ.ಎಮ್.ಐ ಉಚಿತ*
ಫೈನಾನ್ಸ್ ಬೊನಾಂಜಾ
Upto ₹15,000 ಕ್ಯಾಶ್ ಬ್ಯಾಕ್*
INSTANT LOAN APPROVAL
UPTO ₹4,00,000*
HDFC BANK
We understand your world
10% OFF
INSTANT CASH BACK ON CC & DC EMI*
MIN TXN ₹17,000
MAX CAP ₹2,500
*T&C
ASSURED GIFTS ON ALL LG PRODUCTS*
BT SPEAKER
INDUCTION COOKER
STEAM IRON
KETTLE
DRY IRON
24 HOURS EXPRESS DELIVERY*
UNMATCHED AFTER SALES SERVICE
SAMSUNG 100 CLASS NEO ಕ್ಯೂಎಲ್ಇಡಿ SMART TV 100QN80F
10% CASH BACK
ಇ.ಎಮ್.ಐ ₹6,990
SONY 75 4K ULTRA HD SMART ಎಲ್ಇಡಿ K-75S30
10% CASH BACK
ಇ.ಎಮ್.ಐ ₹7,500
Haier 65 4K ULTRA HD SMART GOOGLE TV WITH HANDS FREE VOICE CONTROL
10% CASH BACK
ಇ.ಎಮ್.ಐ ₹2,994
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
LG 65 4K ಓಎಲ್ಇಡಿ 65C56LA
20% CASH BACK
ಇ.ಎಮ್.ಐ ₹6,999
Panasonic 55 4K UHD ಎಲ್ಇಡಿ
10% CASH BACK
ಇ.ಎಮ್.ಐ ₹2,722
vivo V60E 5G 8+256
10% CASH BACK
SPECIAL PRICE ₹30,600*
ಇ.ಎಮ್.ಐ ₹2,550
Redmi NOTE 14/NOTE 14 Pro 5G
10% CASH BACK
STARTS FROM ₹16,499*
ಇ.ಎಮ್.ಐ ₹1,375
SAMSUNG S25 12+256
₹3000 CASH BACK
SPECIAL PRICE ₹78,000*
ಇ.ಎಮ್.ಐ ₹6,750
iPhone 17 17 256
10% CASH BACK
SPECIAL PRICE ₹81,500*
ಇ.ಎಮ್.ಐ ₹6,792
realme 15 5G 8+128
10% CASH BACK
SPECIAL PRICE ₹25,300*
ಇ.ಎಮ್.ಐ ₹2,108
oppo A6X 5G 4+128
10% CASH BACK
SPECIAL PRICE ₹12,790*
ಇ.ಎಮ್.ಐ ₹1,066
hp 15S
10% CASH BACK
• 13TH GEN i3
• 12GB RAM, 512 GB SSD
• 15.6 FHD
• WIN 11 MSO 24
OFFER PRICE ₹42,990
ಇ.ಎಮ್.ಐ ₹3,583
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
DELL INS15
10% CASH BACK
• CORE i3
• 16GB RAM,512 GB SSD
• 15.6" FHD
• WIN 11 MSO 24
OFFER PRICE ₹43,490
ಇ.ಎಮ್.ಐ ₹3,624
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
DELL 3530
10% CASH BACK
• 13TH GEN i5
• 16GB RAM
• 512GB SSD
• 15.6 FHD
• WIN 11 MSO 24
OFFER PRICE ₹52,990
ಇ.ಎಮ್.ಐ ₹4,416
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
Lenovo SLIM 3
10% CASH BACK
• 13TH GEN i7-13620H
• 16GB,512GB SSD
• 15.3" WUXGA
• WIN 11 MSO 24
OFFER PRICE ₹67,990
ಇ.ಎಮ್.ಐ ₹5,666
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
Lenovo LOQ
10% CASH BACK
• RYZEN 5 7235HS
• 24GB, 512GB SSD
• RTX 3050 6GB
• 15.6 FHD
• WIN 11 MSO 24
OFFER PRICE ₹69,990
ಇ.ಎಮ್.ಐ ₹5,833
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
SAMSUNG 653ಲಿ ಸೈಡ್ ಬೈ ಸೈಡ್ RS76CB81A333HL
10% CASH BACK
ಇ.ಎಮ್.ಐ ₹4,990
Godrej 600LTRS TOUGHENED GLASS DOOR ಸೈಡ್ ಬೈ ಸೈಡ್ REFRIGERATOR
10% CASH BACK
ಇ.ಎಮ್.ಐ ₹2,525
DAIKIN 2.02 TON 3 STAR INVERTER SPLIT AC
10% CASH BACK
ಇ.ಎಮ್.ಐ ₹5,499
BOSCH 9 ಕೆಜಿ ಫ್ರಂಟ್ ಲೋಡಿಂಗ್ ವಾಷಿಂಗ್ ಮಷೀನ್
10% CASH BACK
ಇ.ಎಮ್.ಐ ₹3,741
Whirlpool 7.5 ಕೆಜಿ ಟಾಪ್ ಲೋಡಿಂಗ್ ವಾಷಿಂಗ್ ಮಷೀನ್
10% CASH BACK
ಇ.ಎಮ್.ಐ ₹1,583
LG 14 PLACE SETTIN FREESTANDING DISHWASHER DFB532FP
20% CASH BACK
EMI ₹4,875
IFB 25ಲೀ ಕನ್‌ವೆಕ್ಷನ್ ಮೈಕ್ರೋವೇವ್
EMI ₹1,053
OFFER VALID TILL STOCK LAST | OFFER VALID TILL STOCK LAST
GEYSER UPTO 60% OFF
MIXER GRINDER UPTO 63% OFF
CHIMNEY UPTO 50% OFF
WATER PURIFIER UPTO 53% OFF
LG SOUND BAR SC9S 3.1.3CH, 400W, DOLBY ATMOS, DTS:X, AI SOUND PRO
5% CASH BACK
OFFER PRICE ₹29,990
ಇ.ಎಮ್.ಐ ₹2,499
MRP ₹89,990
GIRIAS THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬಿಡದಿ 8792565415 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಭಾರ್ತಿಯಾ ಮಾಲ್ 9036289560 | ಬೊಮ್ಮನಹಳ್ಳಿ 9035499022 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಳವಳ್ಳಿ 8792553793 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸರ್ಜಾಪುರ 95911 03536 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633
STORE LOCATOR
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರ್ಯಾಂಡ್‌ಗಳು ಮತ್ತು ಮಾದರಿಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 EMI ರಿಯಾಯಿತಿ. 3 EMI ಅನ್ನು ಕ್ಲಿಯರ್ ಮಾಡಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / BFL ವ್ಯಾಲೆಟ್‌ಗೆ ಜಮಾ ಮಾಡಲಾಗುತ್ತದೆ. ರೂ.15000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ ಮತ್ತು ಆಯ್ದ REF ಮತ್ತು AC ಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಉತ್ತಮ ಕೆಲಸದ ಸ್ಥಿತಿಯಲ್ಲಿರಲು MRP ಮತ್ತು ಉತ್ಪನ್ನದ ಮೇಲೆ ವಿನಿಮಯ ಕೊಡುಗೆ ಮಾನ್ಯವಾಗಿರುತ್ತದೆ. ಟಿವಿ, AC ಮತ್ತು ಡಿಶ್‌ವಾಶರ್‌ಗಳ ಮೇಲೆ ಜಿಎಸ್‌ಟಿ ಕಡಿಮೆಯಾಗಿದೆ.
180 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA
www.roundtableindia.org www.ladiescircleindia.org


ನಿಮ್ಮ ಖರ್ಚಿನಲ್ಲಿ ಸ್ವಲ್ಪವಾದರೂ ಕಡಿತ ಮಾಡಿ. ಅದು ಅರ್ಥಪೂರ್ಣವಾದ ಮೊತ್ತ ಒಗ್ಗೂಡಿಸಲು ನೆರವಾಗುತ್ತದೆ
ಸೂಜ್ ಓರ್ಮನ್, ಹಣಕಾಸು ಸಲಹೆಗಾರ

ದುಡ್ಡಿನಂಥಾ ಮಾತು

2026ರಲ್ಲಿ ಹೂಡಿಕೆಗೆ ಎಲ್ಲಿದೆ ಅವಕಾಶ?

2025ರ ಕ್ಯಾಲೆಂಡರ್ ವರ್ಷದಲ್ಲಿ ಷೇರುಪೇಟೆ ನೀಡಿದ ಗಳಿಕೆಗಿಂತಲೂ ಚಿನ್ನ ಮತ್ತು ಬೆಳ್ಳಿಯು ಹೂಡಿಕೆದಾರರಿಗೆ ಹೆಚ್ಚಿನ ಲಾಭ ನೀಡಿವೆ. ಹೊಸ ವರ್ಷದಲ್ಲಿ ಹೂಡಿಕೆದಾರರಿಗೆ ಎಲ್ಲಿ ಹೆಚ್ಚಿನ ಅವಕಾಶಗಳು ಸಿಗಬಹುದು, ಅವರು ಯಾವ ಬಗೆಯಲ್ಲಿ ಎಚ್ಚರಿಕೆ ವಹಿಸಬೇಕು ಎಂಬ ಬಗ್ಗೆ ಈ ಬರಹ ವಿವರಿಸಿದೆ

• ವಸಂತಜಿ.ಹೆಗಡೆ



2025ನೇ ಇಸವಿಯು ಹೂಡಿಕೆದಾರರಿಗೆ ಮಿಶ್ರಫಲಗಳ ವರ್ಷವಾಗಿತ್ತು. ಈಕ್ವಿಟಿ, ಸಾಲಪತ್ರ ಹಾಗೂ ಚಿನ್ನದ ಮೇಲಿನ ಹೂಡಿಕೆಗಳು ಬೇರೆ ಬೇರೆ ಪ್ರಮಾಣದಲ್ಲಿ ಲಾಭ ತಂದುಕೊಟ್ಟವು. ಬಡ್ಡಿಯನ್ನು ನೆಚ್ಚಿಕೊಂಡಿರುವ, ರಿಸ್ಕ್ ತೆಗೆದುಕೊಳ್ಳಲು ಬಯಸದ ಹೂಡಿಕೆದಾರರು ಠೇವಣಿಗಳ ಮೇಲಿನ ಬಡ್ಡಿ ದರವನ್ನು ಬ್ಯಾಂಕುಗಳು ತಗ್ಗಿಸುವುದನ್ನು ಗಮನಿಸುತ್ತ ಕುಳಿತರು. ಈಕ್ವಿಟಿಗಳ ಮೇಲಿನ ಹೂಡಿಕೆದಾರರಿಗೆ 2025ನೆಯ ಇಸವಿಯು ಸಪ್ಪೆಯಾಗಿತ್ತು. ಆದರೆ 2026ರಲ್ಲಿ ಏನಾಗಬಹುದು? ಬೇರೆ ಬೇರೆ ಹೂಡಿಕೆ ಆಯ್ಕೆಗಳು ಹಾಗೂ ಅವುಗಳಿಂದ ಸಿಗಬಹುದಾದ ಲಾಭದ ಮೇಲೆ ಗಮನಹರಿಸೋಣ.

ಷೇರುಗಳು: 2025ರಲ್ಲಿ ಬಿಎಸ್‌ಇ ಸೆನ್ಸೆಕ್ಸ್ ಶೇ 8.55ರಷ್ಟು ಗಳಿಕೆ ತಂದುಕೊಟ್ಟಿದೆ. ವರ್ಷದ ಆರಂಭದಲ್ಲಿ 78,507ರ ಮಟ್ಟದಲ್ಲಿ ಇದ್ದ ಸೆನ್ಸೆಕ್ಸ್ ವರ್ಷದ ಕೊನೆಯಲ್ಲಿ 85,220ಕ್ಕೆ ತಲುಪಿತು. ಎನ್‌ಎಸ್‌ಸಿ ನಿಫ್ಟಿ–50 ಸೂಚ್ಯಂಕವು ತುಸು ಉತ್ತಮ ಮಟ್ಟದ, ಅಂದರೆ ಶೇ 10.05ರಷ್ಟು ಗಳಿಕೆ ನೀಡಿದೆ. ಸ್ಮಾಲ್‌ಕ್ಯಾಪ್ ವರ್ಗದ ಷೇರುಗಳಲ್ಲಿ ಹೂಡಿಕೆ ಮಾಡಿದವರ ಅದೃಷ್ಟ ಚೆನ್ನಾಗಿರಲಿಲ್ಲ. ನಿಫ್ಟಿ ಸ್ಮಾಲ್‌ಕ್ಯಾಪ್ ಸೂಚ್ಯಂಕವು ಶೇ 8ರಷ್ಟು ಕುಸಿದಿದೆ. ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಆದ ಮೊತ್ತವು ವರ್ಷದ ಅವಧಿಯಲ್ಲಿ ₹67 ಲಕ್ಷ ಕೋಟಿಯಿಂದ ₹81 ಲಕ್ಷ ಕೋಟಿಗೆ ಏರಿಕೆ ಕಂಡಿದೆ, ಶೇ 21ರಷ್ಟು ಬೆಳವಣಿಗೆ ಸಾಧಿಸಿದೆ. ದೇಶದ ಕಾರ್ಪೊರೇಟ್ ಕಂಪನಿಗಳು ಐಪಿಒ ಮೂಲಕ ದಾಖಲೆಯ ₹1.75 ಲಕ್ಷ ಕೋಟಿ ಸಂಗ್ರಹಿಸಿವೆ.



ಆದರೆ ಹಲವು ಐಪಿಒ ಪ್ರಕ್ರಿಯೆಗಳು, ಪ್ರವರ್ತಕರು ತಮ್ಮ ಹೂಡಿಕೆ ಹಣವನ್ನು ಕಂಪನಿಯಿಂದ ಹಿಂದಕ್ಕೆ ಪಡೆಯಲು ಬಳಕೆ ಆಗಿದ್ದುದು ಕಳವಳಕಾರಿ ಸಂಗತಿಯಾಗಿತ್ತು. ಕೆಲವು ಐಪಿಒ ಪ್ರಕ್ರಿಯೆಗಳ ಮೂಲಕ ಮಾತ್ರ ಪ್ರವರ್ತಕರು ತಮ್ಮ ಉದ್ಯಮದ ವಿಸ್ತರಣೆಗಾಗಿ ಹೊಸದಾಗಿ ಬಂಡವಾಳ ಸಂಗ್ರಹಿಸಿದರು. ಐಪಿಒ ಸಂದರ್ಭದಲ್ಲಿ ಹೂಡಿಕೆ ಮಾಡುವ ಮೊದಲು ಸಣ್ಣ ಹೂಡಿಕೆದಾರರು ಸಾಕಷ್ಟು ಅಧ್ಯಯನ ನಡೆಸಬೇಕು ಎಂಬುದನ್ನು ಇದು ಹೇಳುತ್ತದೆ. ಹಣಕಾಸಿನ ಗುರಿಯನ್ನು ತಲುಪುವ ಉದ್ದೇಶದಿಂದ ಹೂಡಿಕೆ ಮಾಡುವವರು ತಮ್ಮ ಹೂಡಿಕೆಗಳನ್ನು ಎಸ್‌ಐಪಿ ವಿಧಾನದಲ್ಲಿ ಮುಂದುವರಿಸಬೇಕು. ಅವರು ಮ್ಯೂಚುವಲ್ ಫಂಡ್‌ಗಳ ಮೂಲಕ ಷೇರುಗಳಲ್ಲಿ ಹೂಡಿಕೆಯನ್ನು ನಿಲ್ಲಿಸಬಾರದು.

ಸಾಲಪತ್ರಗಳಲ್ಲಿ ಹೂಡಿಕೆ: ಸಾಲಪತ್ರ ಆಧಾರಿತ ಮ್ಯೂಚುವಲ್ ಫಂಡ್‌ಗಳಿಗೆ 2025 ಸಾಧಾರಣ ವರ್ಷವಾಗಿತ್ತು. ಸಾಲಪತ್ರ ಆಧಾರಿತ ಮ್ಯೂಚುವಲ್ ಫಂಡ್‌ಗಳ ಪೈಕಿ ಹೆಚ್ಚಿನವು ಬ್ಯಾಂಕ್ ಎಫ್.ಡಿ.ಗಳಿಗಿಂತ ಹೆಚ್ಚು ಉತ್ತಮವಾದ ಗಳಿಕೆ ನೀಡಿದವು. ಬ್ಯಾಂಕ್ ಬಡ್ಡಿ ದರ ಕೂಡ ಇದೇ ಅವಧಿಯಲ್ಲಿ ಇಳಿಕೆ ಆಯಿತು ಎಂಬುದು ಇಲ್ಲಿ ಉಲ್ಲೇಖಾರ್ಹ. ಬಡ್ಡಿ ದರ ಹಾಗೂ ಸಾಲಪತ್ರದ ಬೆಲೆ ನಡುವೆ ಸಂಬಂಧವಿದೆ. ಬಡ್ಡಿ ದರ ಇಳಿಕೆಯಾದಾಗ, ಸಾಲಪತ್ರಗಳ ಬೆಲೆ ಹೆಚ್ಚುತ್ತದೆ. ಆದರೆ 2025ರಲ್ಲಿ ರೆಪೊ ದರವನ್ನು ಆರ್‌ಬಿಐ ಶೇ 1.25ರಷ್ಟು ಇಳಿಸಿದರೂ, 10 ವರ್ಷ ಅವಧಿಯ ಸರ್ಕಾರಿ ಸಾಲಪತ್ರದ (ಜಿ–ಸೆಕ್) ಗಳಿಕೆಯು ಶೇ 0.20ರಷ್ಟು ಮಾತ್ರ ಇಳಿದಿದ್ದು ಆಶ್ಚರ್ಯದ ಸಂಗತಿಯಾಗಿತ್ತು. 10 ವರ್ಷಗಳ ಅವಧಿಯ ಸರ್ಕಾರಿ ಸಾಲಪತ್ರದ ಗಳಿಕೆ (yield) ವರ್ಷದುದ್ದಕ್ಕೂ ಶೇ 6.50ರ ಮಟ್ಟದಲ್ಲಿತ್ತು.

ಬಡ್ಡಿ ದರ ಹಾಗೂ ಸಾಲಪತ್ರಗಳ ಬೆಲೆಯ ನಡುವಿನ ಸಂಬಂಧವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ ಎನ್ನುವ ಹೂಡಿಕೆದಾರರು ಡೈನಾಮಿಕ್ ಬಾಂಡ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದು ಒಳಿತು.



ಹಾಗೆ ಮಾಡಿದಾಗ ಆ ಫಂಡ್ ನಿರ್ವಾಹಕ, ಹಣವನ್ನು ಪರಿಣಾಮಕಾರಿಯಾಗಿ ವಿನಿಯೋಗಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಾನೆ.

ಆರ್‌ಬಿಐ ರೆಪೊ ದರವನ್ನು ಹಂತ ಹಂತವಾಗಿ ತಗ್ಗಿಸಿತು. ಇದರ ಪರಿಣಾಮವಾಗಿ ಹಲವು ಠೇವಣಿಗಳ ಮೇಲಿನ ಬಡ್ಡಿ ದರವು ಇಳಿಯಿತು. ಹೀಗಿದ್ದರೂ ಕೇಂದ್ರ ಸರ್ಕಾರವು ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರವನ್ನು ಇಳಿಕೆ ಮಾಡದೆ, ಯಥಾಸ್ಥಿತಿಯಲ್ಲಿ ಮುಂದುವರಿಸಿಕೊಂಡು ಬಂದಿರುವುದು ಬಡ್ಡಿ ಆದಾಯವನ್ನು ನೆಚ್ಚಿಕೊಂಡಿರುವ ಸಾಂಪ್ರದಾಯಿಕ ಹೂಡಿಕೆದಾರರಿಗೆ ಬಹಳ ಸಮಾಧಾನ ತಂದ ಸಂಗತಿ.

ಹಿರಿಯ ನಾಗರಿಕರು ₹30 ಲಕ್ಷದವರೆಗೆ ‘ಹಿರಿಯ ನಾಗರಿಕರ ಉಳಿತಾಯ ಯೋಜನೆ’ಗಳಲ್ಲಿ ಹೂಡಿಕೆ ಮಾಡಬಹುದು. ಇಲ್ಲಿ ಅವರಿಗೆ ಐದು ವರ್ಷಗಳ ಅವಧಿಗೆ ವಾರ್ಷಿಕ ಶೇ 8.2ರಷ್ಟು ಬಡ್ಡಿ ಸಿಗುತ್ತದೆ. ಇದು ಅತಿಹೆಚ್ಚಿನ ಮಟ್ಟದ ಬಡ್ಡಿ ದರಗಳಲ್ಲಿ ಒಂದು. ಬೇಕೆಂದಾಗಲೆಲ್ಲ ಹಣ ಹಿಂಪಡೆಯುವ ಸೌಲಭ್ಯ ಇರಬೇಕಾಗಿಲ್ಲ, ಹೂಡಿಕೆ ಮಾಡಿದ ಹಣಕ್ಕೆ ಸುರಕ್ಷತೆ ಇರಬೇಕು ಎಂದು ಹೇಳುವವರು ಏಳು ವರ್ಷಗಳ ಅವಧಿಯ ಆರ್‌ಬಿಐ ಫ್ಲೋಟಿಂಗ್ ರೇಟ್ ಬಾಂಡ್‌ಗಳಲ್ಲಿ ಹಣ ತೊಡಗಿಸಬಹುದು. ಇಲ್ಲಿ ವಾರ್ಷಿಕ ಶೇ 8.05ರಷ್ಟು ಬಡ್ಡಿ ಸಿಗುತ್ತಿದೆ. ಅಲ್ಲದೆ, ಹೂಡಿಕೆಗೆ ಇಲ್ಲಿ ಗರಿಷ್ಠ ಮಿತಿ ಇಲ್ಲ. ಇದರಲ್ಲಿ ತೊಡಗಿಸುವ ಹಣಕ್ಕೆ ಎನ್‌ಎಸ್‌ಸಿಯಲ್ಲಿ ಸಿಗುವ ಬಡ್ಡಿಗಿಂತ ಹೆಚ್ಚುವರಿಯಾಗಿ ಶೇ 0.35ರಷ್ಟು ಬಡ್ಡಿ ಸಿಗುತ್ತದೆ.

ಇತರರು ಪಿಪಿಎಫ್ ಮತ್ತು ಎನ್‌ಎಸ್‌ಸಿಯಲ್ಲಿ ಹೂಡಿಕೆ ಮಾಡುವುದು ಹೆಚ್ಚು ಸೂಕ್ತವಾಗಬಹುದು. ಪಿಪಿಎಫ್ ಹೂಡಿಕೆಗಳಿಗೆ ಈಗ ಶೇ 7.1ರಷ್ಟು ಬಡ್ಡಿ ಇದೆ. ಎನ್‌ಎಸ್‌ಸಿ ಹೂಡಿಕೆಗಳಿಗೆ ಶೇ 7.7ರಷ್ಟು ಬಡ್ಡಿ ಇದೆ.

ಚಿನ್ನ ಮತ್ತು ಬೆಳ್ಳಿ: ಹೂಡಿಕೆದಾರರು ತಮ್ಮ ಒಟ್ಟು ಹೂಡಿಕೆ ಮೊತ್ತದಲ್ಲಿ ಶೇ 10ರಷ್ಟನ್ನು ಅಥವಾ ಗರಿಷ್ಠ ಶೇ 15ರಷ್ಟನ್ನು ಮಾತ್ರ ಚಿನ್ನ ಹಾಗೂ ಬೆಳ್ಳಿಯಲ್ಲಿ ತೊಡಗಿಸಬೇಕು ಎಂಬುದು ತಜ್ಞರು ಹಿಂದಿನಿಂದಲೂ ನೀಡುತ್ತಿರುವ ಸಲಹೆ. ಆದರೆ 2025ರಲ್ಲಿ ಮಾರುಕಟ್ಟೆಯು ಈ ಸಲಹೆಗೆ ಸವಾಲು ಎಸೆಯಿತು. ಈ ಎರಡೂ ಅಮೂಲ್ಯ ಲೋಹಗಳ ಬೆಲೆಯು ಭಾರಿ ಪ್ರಮಾಣದಲ್ಲಿ ಏರಿಕೆ ಕಂಡಿದೆ. ಬೆಂಗಳೂರಿನಲ್ಲಿ 2025ರ ಜನವರಿ 1ರಂದು ₹80,440 ಇದ್ದ ಚಿನ್ನದ (24 ಕ್ಯಾರಟ್ ಪರಿಶುದ್ಧತೆ 10 ಗ್ರಾಂ ಚಿನ್ನ) ಬೆಲೆಯು ಡಿಸೆಂಬರ್ 31ರ ಹೊತ್ತಿಗೆ ₹1,39,950ಕ್ಕೆ ತಲುಪಿ ಶೇ 73.98ರಷ್ಟು ಜಿಗಿತ ಕಂಡಿತು. ಜಗತ್ತಿನ ಎಲ್ಲೆಡೆ ಕೇಂದ್ರೀಯ ಬ್ಯಾಂಕ್‌ಗಳು ಚಿನ್ನವನ್ನು ಖರೀದಿಸುತ್ತಿದ್ದವು. ವರ್ಷದುದ್ದಕ್ಕೂ ಅವುಗಳ ಖರೀದಿ ಉತ್ಸಾಹ ಕಡಿಮೆ ಆದಂತೆ ಕಾಣಲಿಲ್ಲ.

ಚಿನ್ನಕ್ಕೆ ಹೋಲಿಕೆ ಮಾಡಿದರೆ ಬೆಳ್ಳಿಯ ಬೆಲೆಯು ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಜಾಸ್ತಿ ಆಯಿತು. 2025ರ ಆರಂಭದಲ್ಲಿ ಬೆಂಗಳೂರಿನಲ್ಲಿ ₹91,000 ಇದ್ದ ಬೆಳ್ಳಿಯ (1 ಕೆ.ಜಿ. ಬೆಳ್ಳಿ) ಬೆಲೆಯು ವರ್ಷದ ಅಂತ್ಯದ ಹೊತ್ತಿಗೆ ₹2,46,200ಕ್ಕೆ ತಲುಪಿ ಶೇ 170.54ರಷ್ಟು ಲಾಭ ತಂದುಕೊಟ್ಟಿದೆ. ಕೈಗಾರಿಕೆಗಳಿಂದ ಬೆಳ್ಳಿಗೆ ಭಾರಿ ಬೇಡಿಕೆ ಬಂದಿರುವುದು, ಸೌರವಿದ್ಯುತ್ ಉತ್ಪಾದನೆಯಲ್ಲಿ ಹೆಚ್ಚಳ, ವಿದ್ಯುತ್ ಚಾಲಿತ ವಾಹನಗಳಲ್ಲಿ ಮತ್ತು ದತ್ತಾಂಶ ಕೇಂದ್ರಗಳಲ್ಲಿ ಬೆಳ್ಳಿಯ ಬಳಕೆ ಜಾಸ್ತಿ ಆಗಿರುವುದು ಬೆಲೆ ಇಷ್ಟು ಹೆಚ್ಚಳ ಆಗಲು ಕಾರಣಗಳಾಗಿವೆ.

ಬಡ್ಡಿ ದರ ಇಳಿಕೆಯ ನಿರೀಕ್ಷೆ, ಜಾಗತಿಕ ಮಟ್ಟದಲ್ಲಿ ಬಿಕ್ಕಟ್ಟುಗಳು ಹೆಚ್ಚಾಗುತ್ತಿರುವುದರ ಹಿನ್ನೆಲೆಯಲ್ಲಿ ಹೊಸ ವರ್ಷದಲ್ಲಿ ಕೂಡ ಈ ಎರಡೂ ಲೋಹಗಳ ಬೆಲೆಯು ಹೆಚ್ಚಳವಾಗುವ ಸಾಧ್ಯತೆ ಇದೆ. ಆದರೆ 2025ರಲ್ಲಿ ನೀಡಿದ್ದಂತಹ ಲಾಭದ ಪ್ರಮಾಣವನ್ನು ಇವು 2026ರಲ್ಲಿಯೂ ನೀಡುತ್ತವೆ ಎಂಬ ಖಾತರಿ ಇಲ್ಲ. ಹೀಗಾಗಿ ಹೂಡಿಕೆದಾರರು ತಮ್ಮ ಪೋರ್ಟ್‌ಫೋಲಿಯೊದಲ್ಲಿ ಪೂರ್ಣ ಬದಲಾವಣೆ ತಂದು, ಈ ಲೋಹಗಳಿಗೆ ಹೆಚ್ಚಿನ ಹಣ ಹಂಚಿಕೆ ಮಾಡುವುದಕ್ಕಿಂತಲೂ ಹಣವನ್ನು ವಿವಿಧ ಆಸ್ತಿ ವರ್ಗಗಳಲ್ಲಿ, ವಿವಿಧ ಹಣಕಾಸಿನ ಉತ್ಪನ್ನಗಳಲ್ಲಿ ಯಥೋಚಿತವಾಗಿ ಹಂಚಿಕೆ ಮಾಡುವುದನ್ನು ಮುಂದುವರಿಸಬೇಕು.




ಬಿಟ್‌ಕಾಯಿನ್ ಹೂಡಿಕೆ: 2025ರಲ್ಲಿ ಬಿಟ್‌ಕಾಯಿನ್ ಹೂಡಿಕೆದಾರರಿಗೆ ಹೆಚ್ಚು ಲಾಭ ಸಿಗಲಿಲ್ಲ. ಜನವರಿಯಲ್ಲಿ 92 ಸಾವಿರ ಡಾಲರ್ ಇದ್ದ ಬಿಟ್‌ಕಾಯಿನ್ ಬೆಲೆಯು 1.21 ಲಕ್ಷ ಡಾಲರ್‌ವರೆಗೆ ಏರಿಕೆ ಆಗಿತ್ತು. ನಂತರದಲ್ಲಿ ಅದು ಕುಸಿಯಿತು. ಈಗ ಅದರ ಬೆಲೆಯು 89 ಸಾವಿರ ಡಾಲರ್ ಮಟ್ಟದಲ್ಲಿದೆ. ಈಚಿನ ದಿನಗಳಲ್ಲಿ ಕೆಲವು ಸಾಂಸ್ಥಿಕ ಹೂಡಿಕೆದಾರರು ದೊಡ್ಡ ಮಟ್ಟದಲ್ಲಿ ಬಿಟ್‌ಕಾಯಿನ್‌ನಲ್ಲಿ ಹೂಡಿಕೆ ಮಾಡುತ್ತಿರುವ ಕಾರಣದಿಂದಾಗಿ ಇದರಲ್ಲಿ ಮತ್ತೆ ಕೆಲವರು ಆಸಕ್ತಿ ತಾಳುತ್ತಿದ್ದಾರೆ. ಬಿಟ್‌ಕಾಯಿನ್ ಮೇಲಿನ ಹೂಡಿಕೆಯು 2026ರಲ್ಲಿ ಉತ್ತಮ ಲಾಭ ತಂದುಕೊಡಬಹುದು. ಆದರೆ ಇಲ್ಲಿ ಒಂದು ಎಚ್ಚರಿಕೆಯ ಮಾತನ್ನು ಹೇಳಬೇಕು. ಷೇರುಗಳ ನಿಜವಾದ ಮೌಲ್ಯವನ್ನು ಕಂಪನಿಯ ಹಣಕಾಸಿನ ಸ್ಥಿತಿ, ಬೇರೆ ಬೇರೆ ಮಾನದಂಡಗಳನ್ನು ಆಧರಿಸಿ ಲೆಕ್ಕಹಾಕಬಹುದು. ಆದರೆ ಬಿಟ್‌ಕಾಯಿನ್‌ಗಳ ನಿಜವಾದ ಮೌಲ್ಯವನ್ನು ಲೆಕ್ಕಹಾಕುವುದು ಬಹಳ ಕಷ್ಟ. ಈಗಿನ ಹಂತದಲ್ಲಿ ಬಿಟ್‌ಕಾಯಿನ್‌ಗಳು ದುಬಾರಿಯೇ ಅಥವಾ ಅವು ನಿಜವಾದ ಮೌಲ್ಯಕ್ಕಿಂತ ಕಡಿಮೆ ಬೆಲೆಗೆ ಸಿಗುತ್ತಿವೆಯೇ ಎಂಬುದನ್ನು ಅರಿಯುವುದು ಆಗದ ಕೆಲಸ.

ಲೇಖಕ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್‌ನಲ್ಲಿ ಪ್ರಾಧ್ಯಾಪಕ ಹಾಗೂ ಪ್ರಮಾಣೀಕೃತ ಹಣಕಾಸು ಸಲಹೆಗಾರ (ಸಿಎಫ್‌ಎ)

❖

ಚಿನ್ನದ ಬೆಲೆ ಏರಿದೆ ಇಟಿಎಫ್ ಹೂಡಿಕೆ ಹೆಚ್ಚಿದೆ

ಚಿನ್ನದ ಬೆಲೆಯು ಕಳೆದ ಒಂದು ವರ್ಷದಿಂದ ನಾಗಾಲೋಟದಲ್ಲಿ ಏರಿಕೆ ಕಾಣುತ್ತಿದೆ. ಈ ಅವಧಿಯಲ್ಲಿ ಚಿನ್ನದ ಇಟಿಎಫ್‌ಗಳಲ್ಲಿ ಆಗಿರುವ ಹೂಡಿಕೆಯ ಮೊತ್ತವು ಭಾರಿ ಪ್ರಮಾಣದಲ್ಲಿ ಜಾಸ್ತಿ ಆಗಿದೆ.



(ಮಾಹಿತಿ: ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ)

ಕೆನರಾ ಎಚ್‌ಎಸ್‌ಬಿಸಿ ಲೈಫ್ ಇನ್ಶೂರೆನ್ಸ್

ಬ್ರೋಕರೇಜ್ ಮಾತು

ಕೆನರಾ ಎಚ್‌ಎಸ್‌ಬಿಸಿ ಲೈಫ್ ಇನ್ಶೂರೆನ್ಸ್ ಕಂಪನಿಯ ಷೇರಿನ ಬೆಲೆ ₹180 ಆಗಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ವಿಮಾ ಉದ್ಯಮದ ಸಂಯುಕ್ತ ವಾರ್ಷಿಕ ಬೆಳವಣಿಗೆ ದರ (ಸಿಎಜಿಆರ್) ಶೇ 12ರಷ್ಟಿದೆ. ಕಂಪನಿಯ ಮಾರುಕಟ್ಟೆ ಪಾಲು ಶೇ 9ರಿಂದ ಶೇ 12ರಷ್ಟು ಇದೆ. ವಿಮಾ ಉತ್ಪನ್ನಗಳಲ್ಲಿನ ವೈವಿಧ್ಯ ಇದಕ್ಕೆ ನೆರವಾಗಿದೆ.

ಕೆನರಾ ಬ್ಯಾಂಕ್ 12 ಕೋಟಿ ಗ್ರಾಹಕರನ್ನು ಹೊಂದಿದ್ದು, ಶೇ 1.7ರಷ್ಟು ಗ್ರಾಹಕರಿಗೆ ಮಾತ್ರ ವಿಮೆ ಮಾರಾಟ ಮಾಡಿದೆ. ಪ್ರತಿ ಬ್ಯಾಂಕ್ ಶಾಖೆಯ ವಿಮೆ ವಿಚಾರದಲ್ಲಿ ಉತ್ಪಾದಕತೆ ಕಡಿಮೆ ಇದೆ. ಇವೆಲ್ಲ ವಹಿವಾಟಿನ ಬೆಳವಣಿಗೆಗೆ ಸುದೀರ್ಘ ಅವಕಾಶ ಕಲ್ಪಿಸುತ್ತಿವೆ ಎಂದು ಮೋತಿಲಾಲ್ ಓಸ್ವಾಲ್ ವಿವರಿಸಿದೆ. 2024–25ರಿಂದ 2027–28ರ ಆರ್ಥಿಕ ವರ್ಷದವರೆಗೆ ಹೊಸ ವ್ಯಾಪಾರದ ಮೌಲ್ಯದ ಸಂಯುಕ್ತ ವಾರ್ಷಿಕ ಬೆಳವಣಿಗೆ ದರವು (ಸಿಎಜಿಆರ್) ಶೇ 23ರಷ್ಟಿರುವ ನಿರೀಕ್ಷೆ ಇದೆ ಎಂದು ತಿಳಿಸಿದೆ. ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಕೆನರಾ ಎಚ್‌ಎಸ್‌ಬಿಸಿ ಲೈಫ್ ಇನ್ಶೂರೆನ್ಸ್ ಷೇರಿನ ಬೆಲೆ ₹142.40 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಇಂಗ್ಲಿಷ್

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಶಂಕರನಾರಾಯಣ್ ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ — Biology

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

SECOND LANGUAGE- ENGLISH
ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

IV. Answer the following questions

1. How do you say that Dr. B. R. Ambedkar was a voracious reader throughout his life ?

Ans. : Ambedkar was a voracious reader. His hunger for books was never satisfied. What is remarkable is that he bought books by sacrificing other needs. The author cites two instances to show what an avid reader Ambedkar was in New York, where he was a student, he is said to have bought 2000 old books. Later, when he went to London for the Second Round Table Conference he bought so many books that they had to be sent to India in 32 boxes. If others would have thought of bringing home attractive foreign goods, Ambedkar's interest was solely in books.

2. "If you want to get on in life, you have to read a lot" — What were the impacts of reading books on Satish ?

Ans:- Satish came to know of another world through them where reading adult books exposed him to a harsh world, making his comfortable life seem small, leading to introspection and a deeper understanding of reality beyond his immediate surroundings, contrasting with his father's view that art was a poor career. Reading broadened his mind, but also initially made him feel melancholic, ultimately shaping his artistic vision and resilience against societal expectations, as books provided knowledge and motivation, despite the difficult lessons about the outside world.

OR

What do we learn from Sathish Gujral's life?

Ans:- Satish Gujral was the good example for the disabled could also achieve the best. Disability was no barrier to Success. He was given more inspiration to those who were want to achieve success in life.

3. How is pursuit of science an exciting adventure?

Ans:- Yes, everybody could agree that pursuit of Science is really an exciting adventure. When compare to other types of adventures like Sports, Art, Music, Whatever may be the field, Science need determination, perseverance and hard work. In all the fields especially in science field the major reward comes from the discovery itself.

4. Why do the tea cups circle und the poet like planets around the Sun?

Ans:- Earth has gravitational force but in space there is absence of gravitational pull, due to this the tea cup or whatever may be the object, it would revolve round like the planets around the Sun.

5. Why does Roma consider Baleshwar's action to be amazing?

Ans:- Roma considered Baleshwar's action to be amazing because the way she was rescued by him. According to Roma it was astonishing because a stranger would jump off a train and risk his life for her. She was also a stranger to him.

6. How does inspector Patil help Mohan and his family?

Ans:- Patil, the sub-inspector of police was the friend of teacher. So he wanted to help them. He came and explained the situation, it was safer side if they handed over (gave) that machine to him. They may escape from arresting. Amma believed him and handed over that machine to police officer before the other police came.

OR

How did Dicky Dolma feel after scaling Mt. Everest?

Ans:- Dicky Dolma climbed Mt. Everest on May 10, 1993 and she was the youngest woman in the world to have achieved the awesome feat o sca1ing he world's highest peak. The view from above is something extraordinary not able to describe fully in words. It was much more breath - taking that she could ever have imagined. The entire National and State awards that she had been bestowed were nothing compared to the experiences of seeing that view.

7. How can you say that Hanif was a talented young man.

Ans:- The life for Hanif was always ekdam bindas. He sketched very well, made beautiful cards out of waste materials, read books and loved playing the drums. As a young man he was so talented and had very much interest in life.

OR

What qualities of Wangjia do you like?

Ans:- We like Wangjia the most in the story. He was so young to take such a risk. We like his selfless hard work. He did a great task for the benefit of his people: He faced many hardships during his task. He didn't care his life also. To work for others is really a good job, everyone will appreciate his work.

8. What were the opinions of the Buddha and Avvai regarding the caste divisions?

Ans: Buddha never believed caste divisions. Fie only believed In the divisions between noble and ignoble and wholesome and unwholesome. According to Tamil poetess. there are only two castes In the world namely. the charitable who give and are superior and the misers who do not and are, therefore Inferior.

REVISION : MODEL QUESTIONS

15). A type of Natural selection in which more individuals acquire mean character value is called
a) Stabilizing selection
b) Disruptive selection
c) Directional selection
d) Dominant selection
Ans:- (a) Stabilizing selection

16) Drug called "Heroin is synthesized by
a) Methylation of Morphine
b) Demethylation of Morphine
c) Acetylation of Morphine
d) Deacytalation of Morphine
Ans:- (c) Acetylation of Morphine

17) The fungus not used in the production of any Industrial product is
a) Penicillium b) Aspergillus
c) Trichoderma polysporum
d) Glomus
Ans:- (c) Trichoderma polysporum

18) Significance of Insertional inactivation method in Recombinant DNA technology is to
a) Introduce the recombinants
b) Isolate gene of Interest
c) Select the recombinants
d) Select the gene of interest
Ans:-(c) Select the recombinants

19) Which of the following organisms are studied by Cornell's in his elegant field experiments to study competition
a) Warbler species
b) Chathamalus and Balanus
c) Cucko and Crow
d) Cattle egret and grazing cattle
Ans:- (b) Chathamalus and Balanus

20) The correct sequence in the process of decomposition is
a) Humification----Leaching----Catabolism----Mineralisation ----Fragmentation
b) Catabolism----Leaching----Fragmentation----Humification---- Mineralisation
c) Leaching----Fragmentation ----Catabolism----Humification---- Mineralisation
d) Fragmentation ----Leaching----Catabolism----Humification----Mineralisation
Ans:- (d) Fragmentation----Leaching----Catabolism----Humification----Mineralisation

21) Western Ghats have a greater diversity of
a) Amphibians b) Reptiles
c) Aves d) Mammals
Ans:- (a) Amphibians

II. Fill in the blanks by choosing the appropriate word/Words from those given below: (Commensalism, Alveoli, Ammensalism, Panspermia, Codominance, Perisperm)

1). The residual, persistent nucellus is called------
Ans:- **Perisperm**

2) The cells of -----------secrete milk in the mammary glands.
Ans:- **Alveoli,**

3) AB blood group inheritance is an example for ------------
Ans:- **Codominance**


4) --------- is the theory that proposes that units of life called spores were transferred to different planets including earth
Ans:- **Panspermia**

5) A population interaction in which one species is harmed and the other species is unaffected is ---------
Ans:- **Ammensalism**

II. Answer the following questions

1) Draw a neat and labelled diagram of the Graafian follicle.

Ans:- Graafian follicle



2) Name the technique involved in separation and isolation of DNA fragment. Which dye is used tostain get totheDNA visible under UV light?

Ans:- (a) GelElectrophoresis
(b) Ethidium bromide

3). Plant cells are totipotent. Why?

Ans:- Plants are totipotent because each living cell retains the complete genetic information and the inherent ability to revert from a specialized state (dedifferentiation) back to a stem-cell-like state

4) Define polymerase chain reaction.

Ans:- Polymerase chain reaction is a technique of amplifying a DNA fragment into 1000s of copies within a short time in vitro.

5) What is test cross? Mention its significance.

Ans:- Test cross is a cross between an individual of unknown dominant genotype is crossed with the recessive parent to find out the homozygosity or heterozygosity. It is also used to test whether segregation of alleles takes place or not.




ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಯುಜಿ ಸಿಇಟಿ - 2026



ಪ್ರಿಯ ವಿದ್ಯಾರ್ಥಿಗಳೇ ಮತ್ತು ಪೋಷಕರೇ

ಇಂಜಿನಿಯರಿಂಗ್, ಕೃಷಿವಿಜ್ಞಾನ, ಪಶುಸಂಗೋಪನೆ, ಫಾರ್ಮಸಿ, ಬಿಎಸ್‌ಸಿ (ನರ್ಸಿಂಗ್) ಮುಂತಾದ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಪ್ರಾಧಿಕಾರವು ನಡೆಸುವ ಸಿಇಟಿ-2026ಕ್ಕೆ ಅಭ್ಯರ್ಥಿಯು ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕಾಗುತ್ತದೆ. ಸಿಇಟಿ-2026ರ ಅರ್ಜಿಯು "APPLICATION-CUM-VERIFICATION" MODULE ಆಗಿರು ವುದರಿಂದ ಅಭ್ಯರ್ಥಿಗಳ SATS ಮತ್ತು RD ಸಂಖ್ಯೆಯನ್ನು ಆಧರಿಸಿ ವ್ಯಾಸಂಗ ಮತ್ತು ಜಾತಿ ಮೀಸಲಾತಿ ವಿವರಗಳನ್ನು ವೆಬ್‌ಸರ್ವೀಸ್ ಮೂಲಕ ಪಡೆಯಲಾಗುವುದು.

ಆದ ಕಾರಣ ಅರ್ಜಿ ಸಲ್ಲಿಸುವ ವಿಧಾನ, ಅರ್ಹತಾ ಕಂಡಿಕೆ ಷರತ್ತುಗಳು, ವಿವಿಧ ಪ್ರಮಾಣ ಪತ್ರಗಳ ಮಾದರಿಗಳು, ಇತ್ಯಾದಿಗಳ ಸಂಕ್ಷಿಪ್ತ ಮಾಹಿತಿಗಳನ್ನೊಳಗೊಂಡ "ಸಿಇಟಿ ದಿಕ್ಸೂಚಿ" ಮಾಹಿತಿ ಪುಸ್ತಕವನ್ನು ಅಭ್ಯರ್ಥಿಗಳಿಗೆ ಆಯಾ ಕಾಲೇಜಿನಲ್ಲಿಯೇ ಒದಗಿಸಲಾಗುವುದು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಹಾಗೂ ಕೆಇಎ ಅಧ್ಯಕ್ಷರಾದ ಡಾ.ಎಂ.ಸಿ.ಸುಧಾಕರ ಮತ್ತು ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಹಾಗೂ ಕೆಇಎ ಸಹ ಅಧ್ಯಕ್ಷರಾದ ಡಾ.ಶರಣ ಪ್ರಕಾಶ ಪಾಟೀಲ ಅವರು 2026ನೇ ಸಾಲಿನ ಸಾಲಿನ ಸಿಇಟಿ ದಿಕ್ಸೂಚಿ ಬಿಡುಗಡೆ ಮಾಡಿದರು.

ಅರ್ಜಿ ಸಲ್ಲಿಸಲು ಏನೇನು ದಾಖಲೆ ಬೇಕಾಗಬಹುದು?

ಕಡ್ಡಾಯ ದಾಖಲೆಗಳು ಎಲ್ಲಾ ಅಭ್ಯರ್ಥಿಗಳಿಗೆ
- ಎಸ್‌ಎಸ್‌ಎಲ್ ಸಿ / 10ನೇ ತರಗತಿ ಅಂಕಪಟ್ಟಿ
- ಆಧಾರ್ ಕಾರ್ಡ್ ಮತ್ತು ಪ್ರಮಾಣ ಪತ್ರಗಳು
- ಜೆಪಿಜಿ ಫಾರ್ಮಾಟ್ ನಲ್ಲಿ ವಿದ್ಯಾರ್ಥಿಯ ಫೋಟೋ < 50 ಕೆಬಿ.
- ಜೆಪಿಜಿ ಫಾರ್ಮಾಟ್ ನಲ್ಲಿ ವಿದ್ಯಾರ್ಥಿಯ ಸಹಿ < 50 ಕೆಬಿ
- ವಿದ್ಯಾರ್ಥಿಯ ಮೊಬೈಲ್ ಸಂಖ್ಯೆ (ವಾಟ್ಸಪ್ ಇರುವ) & ಇ-ಮೇಲ್ ನೋಂದಣಿ

ವಿಶೇಷ ಸೂಚನೆ: ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಆಧಾರ್ ಕಾರ್ಡ್ ಹಾಗೂ RD ಪ್ರಮಾಣ ಪತ್ರಗಳಲ್ಲಿ ಇರುವ ಹೆಸರು ಒಂದೇ ರೀತಿಯಲ್ಲಿ ಇರಬೇಕು. ಒಂದು ವೇಳೆ ವ್ಯತ್ಯಾಸ ಇದ್ದರೆ ಕೂಡಲೇ ಎಸ್ ಎಸ್ ಎಲ್ ಸಿ ಅಂಕಪಟ್ಟಿಯಲ್ಲಿ ಇರುವ ಹಾಗೆ ಆಧಾರ್ ಕಾರ್ಡ್ ಮತ್ತು RD ಪ್ರಮಾಣ ಪತ್ರಗಳನ್ನು ಸರಿಪಡಿಸಿಕೊಳ್ಳಿ.

ಅನ್ವಯಿಸುವುದಾದರೆ ಈ ಕೆಳಗಿನ ದಾಖಲೆಗಳು ಬೇಕು
(ಪ್ರಮಾಣಪತ್ರಗಳು ಅಭ್ಯರ್ಥಿಯ ಹೆಸರಿನಲ್ಲಿ ಮಾತ್ರ ಇರಬೇಕು)

ಪರಿಶಿಷ್ಟ ಜಾತಿ ಅಭ್ಯರ್ಥಿಗಳು, RD ಸಂಖ್ಯೆ ಇರುವ ಒಳ ಮೀಸಲಾತಿ ವಿವರಗಳನ್ನು ಒಳಗೊಂಡ (ಪ್ರವರ್ಗ-ಎ / ಪ್ರವರ್ಗ-ಬಿ / ಪ್ರವರ್ಗ-ಸಿ) ಜಾತಿ ಪ್ರಮಾಣ ಪತ್ರ.	1ರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿರುವ ವ್ಯಾಸಂಗ ಪ್ರಮಾಣ ಪತ್ರ
RD ಸಂಖ್ಯೆ ಇರುವ ಜಾತಿ ಪ್ರಮಾಣ ಪತ್ರ, ST ಹಾಗೂ ಪ್ರವರ್ಗ-1ರ ವಿದ್ಯಾರ್ಥಿ ಗಳಿಗೆ.	1ರಿಂದ 10ನೇ ತರಗತಿವರೆಗೆ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಓದಿರುವ ವ್ಯಾಸಂಗ ಪ್ರಮಾಣ ಪತ್ರ
ಎಸ್‌ಸಿ, ಎಸ್‌ಟಿ, ಪ್ರವರ್ಗ-1 ಅಭ್ಯರ್ಥಿಗಳು ಆರ್‌ಡಿ ಸಂಖ್ಯೆಯೊಂದಿಗೆ ಆದಾಯ ಪ್ರಮಾಣಪತ್ರವನ್ನು ಪ್ರತ್ಯೇಕವಾಗಿ ಪಡೆಯಬೇಕಾಗುತ್ತದೆ. 1.ಎಸ್‌ಸಿ / ಎಸ್‌ಟಿ ಅಭ್ಯರ್ಥಿಗಳು - ವಾರ್ಷಿಕ ಆದಾಯ ರೂ.10.00 ಲಕ್ಷದವರೆಗೆ ಇದ್ದರೆ ಶುಲ್ಕ ವಿನಾಯಿತಿ. 2.ಪ್ರವರ್ಗ-1 ಅಭ್ಯರ್ಥಿಗಳು - ವಾರ್ಷಿಕ ಆದಾಯ ರೂ.2.5 ಲಕ್ಷದವರೆಗೆ ಇದ್ದರೆ ಭಾಗಶಃ ಶುಲ್ಕ ವಿನಾಯಿತಿ.	RD ಸಂಖ್ಯೆ ಇರುವ NCLC ಪ್ರಮಾಣ ಪತ್ರ (ಗ್ರಾಮೀಣ ಪ್ರದೇಶದ ವ್ಯಾಸಂಗ ಮೀಸಲು ಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ) **ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳಿಗೆ** ಭಾಷಾ ಅಲ್ಪಸಂಖ್ಯಾತರ ವ್ಯಾಸಂಗ ಪ್ರಮಾಣ ಪತ್ರ, (ತುಳು, ತಮಿಳು, ತೆಲುಗು, ಕೊಡವ ಮಾತೃಭಾಷೆ). 1ರಿಂದ 12ನೇ ತರಗತಿವರೆಗೆ ಒಟ್ಟು 10 ವರ್ಷ ಕರ್ನಾಟಕದಲ್ಲಿ ಓದಿರಬೇಕು. (10 ಅಥವಾ 12ನೇ ತರಗತಿಯನ್ನು ಕರ್ನಾಟಕದಲ್ಲಿ ಕಡ್ಡಾಯ ಓದಿರಬೇಕು)
ಜಾತಿ / ಜಾತಿ ಆದಾಯ ಪ್ರಮಾಣಪತ್ರ (ಆದಾಯ ಮತ್ತು ಜಾತಿ ಪ್ರಮಾಣಪತ್ರ) - ಆರ್‌ಡಿ ಸಂಖ್ಯೆಯೊಂದಿಗೆ (2A, 2B, 3A, 3B ವಿದ್ಯಾರ್ಥಿಗಳಿಗೆ)	ಧಾರ್ಮಿಕ ಅಲ್ಪಸಂಖ್ಯಾತ ಪ್ರಮಾಣ ಪತ್ರ (ಮುಸ್ಲಿಂ, ಕ್ರಿಶ್ಚಿಯನ್ ಧಾರ್ಮಿಕ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ)
RD ಸಂಖ್ಯೆ ಇರುವ 371(ಜೆ) ಕಲ್ಯಾಣ ಕರ್ನಾಟಕ ಪ್ರಮಾಣ ಪತ್ರ	

ಹೆಚ್.ಪ್ರಸನ್ನ, ಐಎಎಸ್
ಕಾರ್ಯನಿರ್ವಾಹಕ ನಿರ್ದೇಶಕರು, ಕೆಇಎ.

@KEA_KARNATAKA | KEA Vikasana | keaugcet25@gmail.com | https://cetonline.karnataka.gov.in/kea/ | 080-23 460 460 (10 Lines - From 8.00 am to 8.00 pm)

ಪ್ರಜಾವಾಣಿ ನೋಡಿಯೊ
ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ತೇಜಸ್ವಿ ವಿಸ್ಮಯ ಲೋಕ ಅನಾವರಣ

ಲಾಲ್‌ಬಾಗ್: ಗಣರಾಜ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ಆಯೋಜಿಸಿರುವ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಸ್ಯಕಾಶಿ' ಲಾಲ್‌ಬಾಗ್‌ನ ಗಾಜಿನ ಮನೆಯೊಳಗೆ ಬಣ್ಣ ಬಣ್ಣದ ಹೂವುಗಳ ಮಧ್ಯದಲ್ಲಿ ತಲೆ ಎತ್ತಿರುವ ಬೃಹತ್ ಬೆಟ್ಟ, ಅದರ ಮೇಲೆ ತೇಜಸ್ವಿ ಅವರ ಪುತ್ಥಳಿ, ಧುಮ್ಮಿಕ್ಕುತ್ತಿರುವ ಕೃತಕ ಜಲಪಾತ, ಪುಷ್ಪಗಳಲ್ಲಿ ಅರಳಿರುವ 'ನಿರುತ್ತರ'ದ ಮನೆ, ಅದರ ಮುಂಭಾಗದಲ್ಲಿ ತೇಜಸ್ವಿ ಮತ್ತು ರಾಜೇಶ್ವರಿ ದಂಪತಿ ಕುಳಿತಿರುವ ಪ್ರತಿಮೆಗಳು ನೋಡಗರ ಕಣ್ಮನ ಸೆಳೆಯುತ್ತಿವೆ.

ತೋಟಗಾರಿಕೆ ಇಲಾಖೆಯಿಂದ ಲಾಲ್‌ಬಾಗ್‌ನಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ 'ತೇಜಸ್ವಿ ವಿಸ್ಮಯ' ವಿಷಯ ಆಧಾರಿತ 219ನೇ ಫಲಪುಷ್ಪ ಪ್ರದರ್ಶನಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬುಧವಾರ ಚಾಲನೆ ನೀಡಿದರು. ಪ್ರದರ್ಶನವು ಜ.26ರವರೆಗೆ ನಡೆಯಲಿದೆ.

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಬದುಕು–ಬರಹವನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ತೇಜಸ್ವಿ ಅವರ ಅಭಿವ್ಯಕ್ತಿಯ ಪರಿಸರದ ಕಾಡು, ಹೊಳೆ, ಪ್ರಾಣಿ–ಪಕ್ಷಿ–ಕೀಟದ ಮಾದರಿಗಳು ಗಮನ ಸೆಳೆಯುತ್ತಿವೆ. ಗಾಜಿನ ಮನೆಯ ಹಿಂಭಾಗದಲ್ಲಿ ಕೃತಕ ಕಾಡಿನ ಮಧ್ಯದಲ್ಲಿ ಕರ್ವಾಲೊ ಕಾದಂಬರಿ ಪಾತ್ರಗಳಾದ 'ಕಿವಿ' ನಾಯಿ, ಕರಿಯಪ್ಪ, ಮಂದಣ್ಣ, ಹಾರುವ ಓತಿ, ಮಿಡತೆ, ಜೇನುಹುಳುಗಳು ಪ್ರೇಕ್ಷಕರನ್ನು ಕೈಬೀಸಿ ಕರೆಯುತ್ತಿವೆ.

ಗಾಜಿನ ಮನೆಯ ಕೇಂದ್ರ ಭಾಗದ ಬಲಬದಿಯಲ್ಲಿ ತೇಜಸ್ವಿ ಅವರ ಬಹುಮುಖಿ ವ್ಯಕ್ತಿತ್ವವನ್ನು ಬಿಂಬಿಸುವ ವ್ಯಂಗ್ಯಚಿತ್ರದ ಪ್ರತಿಮೆ ಇದೆ. ಅದರ ಸುತ್ತಲೂ ಜೋಡಿಸಿರುವ ಪುಷ್ಪಗಳ ಮಧ್ಯೆ ತೇಜಸ್ವಿ ಅವರ ಆಯ್ದ 12 ಕೃತಿಗಳ ಮಾದರಿ, ಪಾತ್ರ–ಸನ್ನಿವೇಶಗಳನ್ನು ಆಧರಿಸಿದ ವ್ಯಂಗ್ಯಚಿತ್ರಗಳನ್ನು ಪ್ರದರ್ಶಿಸಲಾಗಿದೆ.

ಅನನ್ಯ ಫಲಗಳ ಪ್ರದರ್ಶನ: ಗಾಜಿನ ಮನೆಯ ಎಡ ಭಾಗದಲ್ಲಿ ಬಿಳಿಗಿರಿ ರಂಗನಬೆಟ್ಟ, ವಿವಿಧ ಸಸ್ಯಶಾಸ್ತ್ರೀಯ ತೋಟಗಳು, ಮಂಗಳೂರು, ಊಟಿ ಸೇರಿದಂತೆ ದೇಶ-ವಿದೇಶಗಳ ಕಾಡಿನಲ್ಲಿ ಬೆಳೆಯುವ ಅಪರೂಪದ ಫಲಗಳನ್ನು ಸಂಗ್ರಹಿಸಿ ಪ್ರದರ್ಶಿಸಲಾಗಿದೆ.

ಗಾಜಿನ ಮನೆಯ ಕೇಂದ್ರ ಭಾಗದ ಎಡ ಬದಿಯಲ್ಲಿ ಕುವೆಂಪು ರೂಪಿಸಿದ ಮಂತ್ರ ಮಾಂಗಲ್ಯ ಪದ್ಧತಿಯಲ್ಲಿ ಮೊಟ್ಟ ಮೊದಲಿಗೆ ಮದುವೆಯಾಗಿ, ನಾಡಿನಲ್ಲಿ ವೈಚಾರಿಕ ಕ್ರಾಂತಿಗೆ ನಾಂದಿ ಹಾಡಿದ ತೇಜಸ್ವಿ–ರಾಜೇಶ್ವರಿ ಅವರ ಸರಳ ಮದುವೆ ಸನ್ನಿವೇಶವನ್ನು ವರ್ಟಿಕಲ್ ಮಾದರಿ ಗಾರ್ಡನ್‌ನಲ್ಲಿ ರೂಪಿಸಲಾಗಿದೆ.





'ತೇಜಸ್ವಿ ವಿಸ್ಮಯ'ದಲ್ಲಿ ತೇಜಸ್ವಿ

ಫಲಪುಷ್ಪ ಪ್ರದರ್ಶನದಲ್ಲಿ ತೇಜಸ್ವಿ ಅವರ ಕುಟುಂಬದ ಸದಸ್ಯರು ಪಾಲ್ಗೊಂಡಿದ್ದರು
ಚಿತ್ರಗಳು: ಪುಷ್ಕರ್ ವಿ.

> **ಬೆಂಗಳೂರು ಉತ್ತರ ಭಾಗದಲ್ಲಿ ಅರಣ್ಯ ಇಲಾಖೆಯ ಜಾಗದಲ್ಲಿ ಬಸವಣ್ಣನವರ ಹೆಸರಿನಲ್ಲಿ ಲಾಲ್‌ಬಾಗ್ ಮಾದರಿಯ ಉದ್ಯಾನ ನಿರ್ಮಿಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಇದರ ಜೊತೆಗೆ ಬೆಂಗಳೂರಿನ ದಕ್ಷಿಣ ಭಾಗದಲ್ಲೂ ಇದೇ ಮಾದರಿ ಉದ್ಯಾನ ನಿರ್ಮಿಸಲಾಗುವುದು**
> **ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ

> **ತೇಜಸ್ವಿ ಅವರನ್ನು ಬಿಂಬಿಸುವ ಪ್ರತಿಮೆಗಳು ಆಕರ್ಷಕವಾಗಿವೆ. ಇಲ್ಲಿ ಪ್ರದರ್ಶಿಸಿರುವ ತೇಜಸ್ವಿ ಬರಹಗಳನ್ನು ಒಮ್ಮೆ ವೀಕ್ಷಿಸಿದರೂ ಸಾಕು ಅವರ ಬಗ್ಗೆ ತಿಳಿದುಕೊಳ್ಳಬಹುದು. ನಮ್ಮ ತಾಯಿ ಇದನ್ನು ವೀಕ್ಷಿಸಿದ್ದರೆ ಖುಷಿ ಪಡುತ್ತಿದ್ದರು**
> **ಈಶಾನ್ಯೆ ಕೆ.ಪಿ.,** ತೇಜಸ್ವಿ ಪುತ್ರಿ

> **ಫಲಪುಷ್ಪ ಪ್ರದರ್ಶನದಲ್ಲಿ ತೇಜಸ್ವಿ ಅವರನ್ನು ತೋರಿಸಿರುವ ರೀತಿ ಅದ್ಭುತವಾಗಿದೆ. ನಾವು ತೇಜಸ್ವಿ ಅವರನ್ನು ಕಳೆದುಕೊಂಡು 20 ವರ್ಷಗಳಾದರೂ ಜನರು ಇಂದಿಗೂ ಅವರನ್ನು ಸಂಭ್ರಮಿಸುತ್ತಿರುವುದು ಹೆಮ್ಮೆಯ ಸಂಗತಿ**
> **ಸುಶ್ಮಿತಾ ಕೆ.ಪಿ.,** ತೇಜಸ್ವಿ ಪುತ್ರಿ

ಅಪರಾಧ ಸುದ್ದಿಗಳು

₹1.21 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಸಿಸಿಬಿ ಹಾಗೂ ವಿವೇಕನಗರ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ, ವಿದೇಶಿ ಪೆಡ್ಲರ್ ಸೇರಿದಂತೆ ನಾಲ್ವರನ್ನು ಬಂಧಿಸಿದ್ದಾರೆ. ಆರೋಪಿಗಳಿಂದ ₹1.21 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿಕೊಳ್ಳುವಲ್ಲಿ ಪೊಲೀಸರು ಯಶಸ್ವಿ ಆಗಿದ್ದಾರೆ.

ಕೆ.ಆರ್. ಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿ, ನೈಜೀರಿಯಾದ ನದುದಿ(25) ಎಂಬಾತನನ್ನು ಬಂಧಿಸಿದ್ದಾರೆ. ಆರೋಪಿಯಿಂದ ₹50.1 ಲಕ್ಷ ಮೌಲ್ಯದ 101 ಗ್ರಾಂ ಕೊಕೇನ್, ಮೊಬೈಲ್ ಫೋನ್ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ.

ಬೇಗೂರು ನಿವಾಸಿ ಆಕಾಶ್ ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಆರೋಪಿಯಿಂದ ₹48 ಲಕ್ಷ ಮೌಲ್ಯದ 481 ಗ್ರಾಂ ಹೈಡ್ರೊಗಾಂಜಾ ವಶಕ್ಕೆ ಪಡೆದುಕೊಳ್ಳಲಾಗಿದೆ.

ವಿವೇಕನಗರ ಠಾಣೆಯ ಪೊಲೀಸರು ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಬಂಧಿಸಿದ್ದಾರೆ. ಬಂಧಿತರಿಂದ ₹21 ಲಕ್ಷ ಮೌಲ್ಯದ 21 ಕೆ.ಜಿ. ಗಾಂಜಾ ಜಪ್ತಿ ಮಾಡಿದ್ದಾರೆ.

ಕಾಲೇಜು ವಿದ್ಯಾರ್ಥಿಗಳು, ಪೇಯಿಂಗ್ ಗೆಸ್ಟ್‌ನಲ್ಲಿ ನೆಲಸಿದ್ದವರಿಗೆ ಡ್ರಗ್ಸ್ ಪೂರೈಸು-ತ್ತಿದ್ದರು. ವನ್ನಾರ್‌ಪೇಟೆ ರಸ್ತೆ, ಬೇಗೂರಿನ ಜೆಇಐಎಸ್ ಲೇಔಟ್ ಹಾಗೂ ಕೆ.ಆರ್. ಪುರ ಬಸ್ ತಂಗುದಾಣದ ಬಳಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಮೂಲಗಳು ಹೇಳಿವೆ.



ನದುದಿ



ಆಕಾಶ್

ಹಳೆ ದ್ವೇಷ: ರೌಡಿ ಕೊಲೆ

ಬೆಂಗಳೂರು: ಹಳೆ ದ್ವೇಷದ ಕಾರಣಕ್ಕೆ ರೌಡಿ ಸೈಯದ್ ಶಬ್ಬೀರ್ (30) ಅವರನ್ನು ದುಷ್ಕರ್ಮಿಗಳ ತಂಡವು ಬಂಡೇಪಾಳ್ಯ ಬಳಿಯ ಮಂಗಮ್ಮನಪಾಳ್ಯದಲ್ಲಿ ಮಾರಕಾಸ್ತ್ರ-ಗಳಿಂದ ಕೊಚ್ಚಿ ಕೊಲೆ ಮಾಡಿ ಪರಾರಿಯಾಗಿದೆ.

ಸೈಯದ್ ಶಬ್ಬೀರ್ ಅವರು ಗುಜರಿ ವ್ಯಾಪಾರ ಮಾಡುತ್ತಿದ್ದರು. ಆರೋಪಿಗಳ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ. ಶೀಘ್ರದಲ್ಲೇ ಬಂಧಿಸುತ್ತೇವೆ ಎಂದು ಪೊಲೀಸರು ಹೇಳಿದರು.

ಸೈಯದ್ ವಿರುದ್ಧ ಕೋರಮಂಗಲ, ಪರಪ್ಪನ ಅಗ್ರಹಾರ, ಕೋಣನಕುಂಟೆ, ಬಂಡೇಪಾಳ್ಯ ಹಾಗೂ ಆಗುಂಬೆ, ಸಾಗರ, ಹಿರೀಸಾವೆ, ಚನ್ನರಾಯಪಟ್ಟಣ ಸೇರಿದಂತೆ ಹಲವು ಠಾಣೆಗಳಲ್ಲಿ 15ಕ್ಕೂ ಹೆಚ್ಚು ಅಪರಾಧ ಪ್ರಕರಣಗಳು ದಾಖಲಾಗಿದ್ದವು.

ಶಬ್ಬೀರ್ ಸೋಮವಾರ ರಾತ್ರಿ ಸ್ನೇಹಿತರೊಂದಿಗೆ ಆಟೊದಲ್ಲಿ ಮಂಗಮ್ಮನಪಾಳ್ಯಕ್ಕೆ ತೆರಳುತ್ತಿದ್ದರು. ಆಗ ದುಷ್ಕರ್ಮಿಗಳ ತಂಡವು ಆಟೊ ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿತು ಎಂದು ಪೊಲೀಸರು ಹೇಳಿದರು. ಕೆಲವು ತಿಂಗಳ ಹಿಂದೆ ಸೊಹೇಲ್ ಎಂಬುವವರ ಮೇಲೆ ಶಬ್ಬೀರ್ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರು. ಹಲ್ಲೆಯಲ್ಲಿ ಸೊಹೇಲ್ ಅವರ ಕೈ ಬೆರಳುಗಳು ತುಂಡಾಗಿದ್ದವು. ಇದಕ್ಕೆ ಪ್ರತೀಕಾರವಾಗಿ ಸೊಹೇಲ್, ತನ್ನ ಸಹಚರರ ಜತೆಗೆ ಸೇರಿಕೊಂಡು ಕೃತ್ಯ ಎಸಗಿದ್ದಾರೆ ಎಂದು ಶಂಕಿಸಲಾಗಿದೆ.



ಸೈಯದ್ ಶಬ್ಬೀರ್

ಪತ್ನಿಗೆ ಹಲ್ಲೆ: ಪತಿ ಬಂಧನ

ಬೆಂಗಳೂರು: ಪತ್ನಿಯ ಮೇಲೆ ಹಲ್ಲೆ ಮಾಡಿ ಜಾತಿ ನಿಂದನೆ ಮಾಡಿದ್ದ ಆರೋಪದಡಿ ಪತಿಯನ್ನು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) ನಗರ ಪಶ್ಚಿಮ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಜೆಡ್ರೆಲಾ ಜಾಕೂಬ್ ಬಂಧಿತ ಆರೋಪಿ. ಜಾಕೂಬ್ ಆಂಧ್ರಪ್ರದೇಶದ ನೆಲ್ಲೂರಿನವರು. ಎರಡು ವರ್ಷಗಳ ಹಿಂದೆ ದೂರುದಾರೆಯನ್ನು ಪ್ರೀತಿಸಿ ವಿವಾಹವಾಗಿ-ದ್ದರು. ದಂಪತಿಗೆ 11 ತಿಂಗಳ ಮಗುವಿದೆ. ಇಬ್ಬರೂ ಉತ್ತಮವಾಗಿ ಜೀವನ ನಡೆಸುತ್ತಿದ್ದರು. ವೃತ್ತಿಗಾಗಿ ಕೆಲವು ತಿಂಗಳ ಹಿಂದೆ ಬೆಂಗಳೂರಿಗೆ ಬಂದಿದ್ದ ಆರೋಪಿಗೆ ಯುವತಿಯ ಪರಿಚಯವಾಗಿತ್ತು. ಅದಾದ ಮೇಲೆ ಪತ್ನಿಯನ್ನು ಕಡೆಗಣಿಸಿದ್ದರು ಎಂದು ಪೊಲೀಸರು ತಿಳಿಸಿದರು.

ನಗರಕ್ಕೆ ಬಂದ ಆರೋಪಿಯು ಭೋಪಾಲ್‌ನ ಮಹಿಳೆಯನ್ನು ಪ್ರೀತಿಸಿದ್ದರು. ಈ ಮಹಿಳೆಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದಾರೆ. ಬಿಟಿಎಂ ಲೇಔಟ್‌ನಲ್ಲಿ ಇರುವ ಮನೆಯಲ್ಲಿ ಆರೋಪಿ ವಾಸ್ತವ್ಯ ಹೂಡಿದ್ದರು. ಅದನ್ನು ಅರಿತ ಆರೋಪಿಯನ್ನು ಪತ್ನಿ ಪ್ರಶ್ನಿಸಿದಾಗ ಹಲ್ಲೆ ಮಾಡಿ, ಜಾತಿ ನಿಂದನೆ ಮಾಡಿದ್ದರು ಎಂದು ಮೂಲಗಳು ಹೇಳಿವೆ.



ಧರ್ಮರಕ್ಷಣೆಗಾಗಿ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವ

ಸನಾತನ ಧರ್ಮ ರಕ್ಷಣೆಯೊಂದಿಗೆ ಗ್ರಾಮೀಣ ಸೊಗಡನ್ನು ಇಂದಿನ ಪೀಳಿಗೆಗೆ ಉಳಿಸುವ ನಿಟ್ಟಿನಲ್ಲಿ ಬೆಂಗಳೂರಿನ ಕೆಂಗೇರಿ ಹೋಬಳಿಯ ಸೋಂಪುರದ ಚನ್ನಯ್ಯನಪಾಳ್ಯದ ಶ್ರೀ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಅತ್ಯಂತ ಸಂಭ್ರಮದಿಂದ ಅದ್ದೂರಿ ಕಡಲೆಕಾಯಿ ಪರಿಷೆ ನಡೆಯುತ್ತಿದೆ. ಜತೆಗೆ, ಶ್ರೀಬಸವೇಶ್ವರ ರಥೋತ್ಸವ ಸಹ ಆಯೋಜನೆ ಮಾಡಲಾಗಿದೆ. ಈ ಧರ್ಮರಕ್ಷಣೆಯ ಕಾಯಕವನ್ನು ಬಿಜೆಪಿ ರಾಜ್ಯ ರೈತಮೋರ್ಚಾದ ಉಪಾಧ್ಯಕ್ಷರಾದ ಎಂ.ರುದ್ರೇಶ್ ಸಂಘಟಿಸುತ್ತಿದ್ದು, ಮಾದರಿ ಹೆಜ್ಜೆಯಾಗಿದೆ.

ಬೆಂಗಳೂರು: 'ದೇಶ, ಭಾಷೆ, ಹಿಂದುತ್ವ, ಸಂಸ್ಕೃತಿ, ರೈತರು, ನಂಬಿದರ ರಕ್ಷಣೆಗೆ ಸದಾ ಸಿದ್ಧರಿರಬೇಕೆನ್ನುವ ಬಿಎಸ್.ಯಡಿಯೂರಪ್ಪನವರ ಮಾತುಗಳೇ ನನ್ನೆಲ್ಲಾ ಕೆಲಸಗಳಿಗೆ ಸ್ಫೂರ್ತಿಯೆಂದು ಹೆಮ್ಮೆಯಿಂದ ಹೇಳುವ ಬಿಜೆಪಿ ರಾಜ್ಯ ರೈತಮೋರ್ಚಾ ಉಪಾಧ್ಯಕ್ಷ ಎಂ.ರುದ್ರೇಶ್, ಪ್ರಸ್ತುತ ಸೋಂಪುರದಲ್ಲಿ ಲಕ್ಷಾಂತರ ಜನರು ಭಾಗಿಯಾಗುವ ಶ್ರೀಬಸವೇಶ್ವರಸ್ವಾಮಿ ರಥೋತ್ಸವ ಮತ್ತು ಕಡಲೆಕಾಯಿ ಪರಿಷೆಯನ್ನು ಸಂಘಟಿಸುತ್ತಿದ್ದಾರೆ.

2006ರಿಂದ ಆರಂಭವಾದ ಈ ಪರಿಷೆಗೆ ತನ್ನದೇ ಆದ ಮಹತ್ವ, ಹಿನ್ನೆಲೆಯಿದ್ದು ಕಾಲಕ್ರಮೇಣ ಹೆಚ್ಚು ಖ್ಯಾತಿ ಪಡೆದುಕೊಂಡಿದೆ. ಧರ್ಮರಕ್ಷಣೆಯೊಂದಿಗೆ ಗ್ರಾಮೀಣ ಸೊಗಡು ಇಂದಿನ ಪೀಳಿಗೆಗೆ ತಲುಪಬೇಕೆನ್ನುವ ಸಾಮಾಜಿಕ ಕಾಳಜಿಯೊಂದಿಗೆ ಈ ಕಾರ್ಯಕ್ರಮ ವ್ಯವಸ್ಥೆ ಮಾಡಲಾಗುತ್ತಿದ್ದು, ಸೋಂಪುರ, ವರಾಹಸಂದ್ರ ಸೇರಿದಂತೆ ಕೆಂಗೇರಿ ಸುತ್ತಲಿನ 60ಹಳ್ಳಿಗಳ ಜನ ಅತ್ಯಂತ ಸಂಭ್ರಮದಿಂದ ಈ ಹಬ್ಬವನ್ನು ಆಚರಿಸುತ್ತಿದ್ದಾರೆ.

ಧರ್ಮ ಉಳಿದರೆ ಸಮಾಜ

ಸಮಾಜ ಸುಸ್ಥಿತಿಯಲ್ಲಿರಬೇಕಾದರೆ ಧರ್ಮ ಪಾಲನೆ ಪೂರಕವಾಗಿರಬೇಕು. ಹೀಗಾಗಿ, ಸನಾತನ ಧರ್ಮದ ಪದ್ಧತಿ, ಸಂಪ್ರದಾಯಗಳು, ಆಚರಣೆಗಳು ಜೀವಂತವಾಗಿ ಉಳಿಯುವಂತಾಗಬೇಕು. ವಿಶೇಷವಾಗಿ, ಹಬ್ಬ,ಹರಿದಿನಗಳು, ದೈವಸಂಕಲ್ಪ ನಿರಂತರವಾಗಿ ನಡೆಯಬೇಕು. ಹೀಗಾಗಿ, ಶ್ರೀಬಸವೇಶ್ವರ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಮಾತ್ರವಲ್ಲದೇ ಪ್ರತಿ ವರ್ಷ ನಿರಂತರವಾಗಿ ರಥೋತ್ಸವ, ಕಡಲೆಕಾಯಿ ಪರಿಷೆ ಆಯೋಜಿಸಲಾಗುತ್ತಿದೆ. ಪ್ರತಿ ವರ್ಷ ಒಂದೊಂದು ಆಕರ್ಷಕ ಕಾರ್ಯಕ್ರಮದೊಂದಿಗೆ ವಿಶೇಷ ಪೂಜಾಕಾರ್ಯಗಳನ್ನು ಸಂಘಟಿಸಲಾಗುತ್ತಿದೆ. ಎಂ.ರುದ್ರೇಶ್‌ರವರು ಈ ಭಾಗದ ಜನನಾಯಕರಾಗಿ ಗುರುತಿಸಿಕೊಂಡಿದ್ದು, ಧರ್ಮರಕ್ಷಣೆಯ ಭಾಗವಾಗಿ ಈಗಾಗಲೇ ಅನೇಕ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಶ್ರಮಿಸಿದ್ದಾರೆ. ವರಾಹಸಂದ್ರದ ಶ್ರೀಬಸವೇಶ್ವರ ದೇವಸ್ಥಾನ, ಸೋಂಪುರದಲ್ಲಿ ಮುನೇಶ್ವರ ದೇವಸ್ಥಾನ, ಹೊನ್ನಪ್ಪನ ದೇವಸ್ಥಾನ, ಹೊನಗಳ್ಳಿ ಬೀರೇಶ್ವರ ದೇವಸ್ಥಾನ, ಚೆನ್ನವೀರಯ್ಯನಪಾಳ್ಯದ ನಂಜುಂಡೇಶ್ವರ ದೇವಸ್ಥಾನ, ಕೊಡಿಗೇಹಳ್ಳಿಯ ಮದನಘಟ್ಟಮ್ಮ ದೇವಸ್ಥಾನ ಸೇರಿದಂತೆ 20ಕ್ಕೂ ಹೆಚ್ಚು ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಮುಂದಾಳತ್ವ ವಹಿಸಿದ್ದಾರೆ.

ಪ್ರಸ್ತುತಿ
ಪಿ.ವಿ.
ಬ್ರ್ಯಾಂಡ್
ಸ್ಪಾಟ್


ಧರ್ಮರಕ್ಷಣೆ ಕಾಯಕ

ನೈಸ್ ರಸ್ತೆಯ ಭೂಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟು ಮೂಲೆಗುಂಪು ಸೇರುತ್ತಿದ್ದ ಪುರಾತನ ಶ್ರೀಬಸವೇಶ್ವರ ಸ್ವಾಮಿ ದೇವಸ್ಥಾನ ರಕ್ಷಣೆಯಿಂದ ಹಿಡಿದು, ಇಂದು ಲಕ್ಷಾಂತರ ಜನರ ಆರಾಧ್ಯ ದೈವವೆಂದು ಕರೆಸಿಕೊಳ್ಳುವ ಮಟ್ಟಕ್ಕೆ ಬರುವವರೆಗೆ ಎಂ.ರುದ್ರೇಶ್‌ರವರ ಪಾತ್ರ ಪ್ರಮುಖವಾಗಿ ಗುರುತಿಸಿಕೊಳ್ಳುತ್ತದೆ. 2003ರ ಬಳಿಕ ನೈಸ್ ಭೂಸ್ವಾಧೀನಕ್ಕೆ ಒಳಪಟ್ಟು, ಮೂಲೆಗುಂಪಾಗಿ ಸೇರಿದ್ದ ದೇವಸ್ಥಾನದ ಉಳಿವಿಗೆ ಎಂ.ರುದ್ರೇಶ್‌ರವರು ನೈಸ್ ಕಂಪನಿಯೊಂದಿಗೆ ಸಾಕಷ್ಟು ಚರ್ಚೆ ನಡೆಸಿದ್ದರು. ಧರ್ಮರಕ್ಷಣೆಯ ಕಾಯಕದ ಭಾಗವಾದ ದೇವಸ್ಥಾನಗಳ ರಕ್ಷಣೆಗೆ ಟೊಂಕ ಕಟ್ಟಿ ನಿಂತರು. ಇದರ ಫಲವಾಗಿ ನೈಸ್ ಕಂಪನಿ ಸಹ ಸಕಾರಾತ್ಮವಾಗಿ ಸ್ಪಂದಿಸಿ, ಶ್ರೀಬಸವೇಶ್ವರಸ್ವಾಮಿ ದೇವಸ್ಥಾನ ಜೀರ್ಣೋದ್ಧಾರಕ್ಕೆ ಕೈಜೋಡಿಸಿತ್ತು. ಇದರ ಪ್ರತಿಫಲವೆಂಬಂತೆ, 2006ರಲ್ಲಿ ದೇವಸ್ಥಾನಕ್ಕೆ ಅತ್ಯಂತ ಸಂಭ್ರಮದಿಂದ ಜೀರ್ಣೋದ್ಧಾರ ನೆರವೇರಿತು. ವಿಶೇಷವೆಂದರೆ, ಈ ಜೀರ್ಣೋದ್ಧಾರ ತುಮಕೂರಿನ ಸಿದ್ದಗಂಗಾ ಶ್ರೀ, ಉಡುಪಿಯ ಪೇಜಾವರ ಶ್ರೀ, ಬಾಲಗಂಗಾಧರನಾಥ ಸ್ವಾಮೀಜಿ ಸೇರಿದಂತೆ ಬರೋಬ್ಬರಿ 108 ವಿವಿಧ ಪಠಗಳ ಮಠಾಧೀಶ ಸ್ವಾಮೀಜಿಗಳಿಂದ ನೆರವೇರಿತ್ತು. ಕಾರ್ಯಕ್ರಮ ಸಂಘಟನೆಯ ಕುರಿತು ಎಲ್ಲಾ ಸ್ವಾಮೀಜಿಗಳು ಮುಕ್ತ ಕಂಠದಿಂದ ಹೊಗಳಿದ್ದರು.



ತ್ರಿವಿಧ ದಾಸೋಹಿಗಳ ಪ್ರತಿಮೆಗೆ ಯತ್ನ

ತುಮಕೂರಿನಿಂದ ವಿಶ್ವಮಟ್ಟದಲ್ಲಿ ತ್ರಿವಿಧ ದಾಸೋಹಿ, ನಡೆದಾಡುವ ದೇವರೆಂದೇ ಕರೆಸಿಕೊಂಡಿರುವ ಶ್ರೀಶಿವಕುಮಾರ ಸ್ವಾಮೀಜಿಯವರ ಸ್ವಗ್ರಾಮ ವೀರಾಪುರದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸುತ್ತಿದ್ದಾರೆ. ಬಿಎಸ್.ಯಡಿಯೂರಪ್ಪನವರ ಸರ್ಕಾರವಿದ್ದಾಗ ವೀರಾಪುರ ಗ್ರಾಮವನ್ನು ದತ್ತು ಪಡೆಯಲಾಗಿತ್ತು. ಜತೆಗೆ, 111 ಅಡಿ ಎತ್ತರದ ಶಿವಕುಮಾರ ಸ್ವಾಮೀಜಿಗಳ ಪ್ರತಿಮೆ ನಿರ್ಮಾಣಕ್ಕೂ ಯೋಜನೆ ರೂಪಿಸಲಾಗಿತ್ತು. ಜತೆಗೆ, 114-15ನೇ ಜನ್ಮದಿನವನ್ನು ತುಮಕೂರಿನಲ್ಲಿ ರಾಷ್ಟ್ರ ಮಟ್ಟದ ಕಾರ್ಯಕ್ರಮವನ್ನು ಸಂಘಟಿಸಲಾಗಿತ್ತು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರರ ನೇತೃತ್ವದಲ್ಲಿ ಕೇಂದ್ರ ಗೃಹಸಚಿವ ಅಮಿತ್‌ಶಾರನ್ನು ಮುಖ್ಯ ಅತಿಥಿಯಾಗಿ ಸ್ವಾಗತಿಸಿ, ಬೃಹತ್ ಕಾರ್ಯಕ್ರಮವನ್ನು ಸಂಘಟಿಸಲಾಗಿತ್ತು.



ಕುಗ್ರಾಮಕ್ಕೊಂದು ಐಡೆಂಟಿಟಿ

ಕೆಂಗೇರಿ ಹೋಬಳಿಯ ಸೋಂಪುರ, ವರಾಹಸಂದ್ರ ಅಂದಿನ ಕಾಲಕ್ಕೆ ಕುಗ್ರಾಮಗಳಾಗಿ ಗುರುತಿಸಿಕೊಂಡಿದ್ದವು. ನಗರ ಪ್ರದೇಶದ ಯಾರೊಬ್ಬರು ಇತ್ತ ಸುಳಿಯುತ್ತಿರಲಿಲ್ಲ. ಆದರೆ, ಎಂ.ರುದ್ರೇಶ್‌ರವರ ದೂರದೃಷ್ಟಿ ಗುಣದೊಂದಿಗೆ ಇದೇ ಪ್ರದೇಶದಲ್ಲಿ ಶ್ರೀಬಸವೇಶ್ವರ ದೇವಸ್ಥಾನ ಜೀರ್ಣೋದ್ಧಾರ ಮತ್ತು ರಥೋತ್ಸವ, ಕಡಲೆಕಾಯಿ ಪರಿಷೆ ಸಂಭ್ರಮ ಶುರುವಾದ ಬಳಿಕ ಲಕ್ಷಾಂತರ ಜನರ ಹೆಜ್ಜೆಗುರುತು ಇಲ್ಲಿ ಬಿದ್ದಿದೆ. ವಿಶೇಷವೆಂದರೆ, ಈ ಕಾರ್ಯಕ್ರಮಕ್ಕೆ ರಾಜ್ಯನಾಯಕರು ಮಾತ್ರವಲ್ಲದೇ, ಸಿನಿ ತಾರೆಯರ ದಂಡೇ ಬಂದು ಪಾಲ್ಗೊಂಡಿದೆ. ರಜನೀಕಾಂತ್, ದರ್ಶನ್, ಸುದೀಪ್ ಸೇರಿದಂತೆ ಸಾಕಷ್ಟು ತಾರೆಗಳು ಇಲ್ಲಿಗೆ ಬಂದಿದ್ದಾರೆ. ಈ ಬಾರಿ ದುನಿಯಾ ವಿಜಯ್ ಸಹ ಪಾಲ್ಗೊಳ್ಳುತ್ತಿದ್ದಾರೆ.



ನಗರೀಕರಣದ ನಡುವೆ ಗ್ರಾಮೀಣ ಸೊಗಡು

ಬನ್ನೀ, ಸಂಸ್ಕೃತಿಯನ್ನು ಸಂಭ್ರಮಿಸೋಣ!

ಬೆಂಗಳೂರು ನಗರ ವಿಸ್ತರಣೆ ಹೊಂದುತ್ತಾ, ಹಳ್ಳಿಗಳನ್ನೆಲ್ಲಾ ತನ್ನ ಮಡಿಲಿನಲ್ಲಿ ಪಟ್ಟಣಗಳನ್ನಾಗಿಸಿದೆ. ವ್ಯಾವಹಾರಿಕ ಜಗತ್ತು ನಿರೀಕ್ಷೆ ಮೀರಿ ಬೆಳವಣಿಗೆ ಕಂಡಿದೆ. ಆದರೆ, ಈ ನಗರೀಕರಣದ ನಡುವೆ ಗ್ರಾಮೀಣ ಸೊಗಡು ಬೆಂಗಳೂರಿನ ಮಣ್ಣಲ್ಲಿ ತನ್ನ ಅಸ್ತಿತ್ವ ಉಳಿಸಿಕೊಂಡಿದೆ. ಈ ಅಸ್ತಿತ್ವಕ್ಕೆ ಹೊಸ ರೂಪ ನೀಡಿ, ಕೆಂಗೇರಿ ಮಡಿಲಲ್ಲಿ ಸುಗ್ಗಿ ಸಂಭ್ರಮ ಸದ್ದು ಮಾಡುತ್ತಿದೆ. ಕಳೆದ 2ದಶಕಗಳಿಂದ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಸಮಾಜಮುಖಿ ಕೆಲಸಗಳು ಕೆಂಗೇರಿ ಮಾತ್ರವಲ್ಲದೆ ಬೆಂಗಳೂರು ನಗರದ ಗಮನ ಸೆಳೆದಿವೆ.

ದಿನಪೂರ್ತಿ ಸಂಭ್ರಮ : ಬೆಳಗ್ಗೆ 5ಗಂಟೆಯಿಂದಲೇ ಪೂಜಾ ವಿಧಿವಿಧಾನಗಳು ಶುರುವಾಗಲಿದ್ದು, ಮಹಾಮಂಗಳಾರತಿ, 7.30ಕ್ಕೆ ಪ್ರಸಾದ ವಿನಿಯೋಗ, 11.45ಕ್ಕೆ ಸಂಭ್ರಮದ ರಥೋತ್ಸವಕ್ಕೆ ಚಾಲನೆ, ಮಧ್ಯಾಹ್ನ 1ಕ್ಕೆ ಸರಿಯಾಗಿ ಕಡಲೆಕಾಯಿ ಪರಿಷೆ ಆರಂಭ, ಮಧಾಹ್ನ 3ರ ನಂತರ ವೇದಿಕೆ ಕಾರ್ಯಕ್ರಮ ಮತ್ತು ದೇವಸ್ಥಾನಗಳಲ್ಲಿ ಪೂಜೆ ನೆರವೇರಿಸುತ್ತ ಧರ್ಮರಕ್ಷಣೆಯಲ್ಲಿ ವಿಶೇಷ ಪಾತ್ರ ವಹಿಸುತ್ತಿರುವ ಅರ್ಚಕರ ದಂಪತಿಗಳಿಗೆ ಗೌರವಸನ್ಮಾನ, ನಂತರ ವಾಗ್ಮಿ ಹಾರಿಕ ಮಂಜುನಾಥ್‌ರಿಂದ ಹಿಂದುತ್ವ ಜಾಗೃತಿ ಕಾರ್ಯಕ್ರಮ, ಆ ನಂತರ ಗಾಯಕ ಹನುಮಂತ ಮತ್ತು ಶಿವಾನಿಯವರಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಸಂಜೆ 6ರ ನಂತರ ಸುಗ್ಗಿ ಸಂಭ್ರಮದ ಕಿಚ್ಚು ಹಾಯಿಸುವ ಕಾರ್ಯಕ್ರಮ ಆಯೋಜನೆಗೊಳ್ಳಲಿದೆ.

ಯಾರೆಲ್ಲಾ ಭಾಗವಹಿಸಲಿದ್ದಾರೆ?

ಕನಕಪುರದ ಶ್ರೀದೇಗುಲ ಮಠದ ಪರಮಪೂಜ್ಯ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು, ಕಾಗಿನೆಲೆ ಪೀಠದ ಪರಮಪೂಜ್ಯ ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು, ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪರಮಪೂಜ್ಯ ಶ್ರೀ ನಿಶ್ಚಲಾನಂದ ಮಹಾಸ್ವಾಮಿಗಳು, ಕನಕಪುರದ ಶ್ರೀಮರಳೆಗವಿ ಮಠದ ಪರಮಪೂಜ್ಯ ಶ್ರೀ ಡಾ.ಮುಮ್ಮಡಿ ಶಿವರುದ್ರ ಮಹಾಸ್ವಾಮಿಗಳು, ಚಿತ್ರದುರ್ಗದ ಯಾದವ ಮಹಾಸಂಸ್ಥಾನ ಮಠದ ಪರಮಪೂಜ್ಯ ಶ್ರೀಕೃಷ್ಣಯಾದವಾನಂದ ಮಹಾಸ್ವಾಮಿಗಳು, ಕೆಂಗೇರಿ ಉಪನಗರದ ಏಕದಳ ಬಿಲ್ವ ಬಂಡೇಮಠದ ಪರಮಪೂಜ್ಯ ಶ್ರೀಸಚ್ಚಿದಾನಂದ ಮಹಾಸ್ವಾಮಿಗಳು, ಶ್ರೀರಂಗಪಟ್ಟಣದ ಬೇಬಿಮಠ ಮತ್ತು ಚಂದ್ರವನ ಆಶ್ರಮದ ಪರಮಪೂಜ್ಯ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಗಳು, ಕನ್ನಲ್ಲಿ ಮಠದ ಪರಮಪೂಜ್ಯ ಶ್ರೀ ಪಟ್ಟದ ರೇಣುಕ ಶಿವಾಚಾರ್ಯ ಮಹಾಸ್ವಾಮಿಗಳು ಭಾಗವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕೇಂದ್ರ ಉಕ್ಕು ಮತ್ತು ಭಾರಿ ಕೈಗಾರಿಕೆ ಸಚಿವರಾದ ಎಚ್.ಡಿ.ಕುಮಾರಸ್ವಾಮಿಯವರು, ಬಿಜೆಪಿ ರಾಜ್ಯಾಧ್ಯಕ್ಷರಾದ ವಿಜಯೇಂದ್ರ ಯಡಿಯೂರಪ್ಪನವರು, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆಯವರು, ನೈಸ್ ಕಂಪನಿ ನಿರ್ದೇಶಕರಾದ ಅಶೋಕ್ ಖೇಣಿಯವರು, ಶಿವಮೊಗ್ಗ ಸಂಸದರಾದ ರಾಘವೇಂದ್ರ ಯಡಿಯೂರಪ್ಪನವರು, ವಿಧಾನಪರಿಷತ್ ಸದಸ್ಯರಾದ ಟಿ.ಎನ್.ಜವರಾಯಿಗೌಡರು, ಖ್ಯಾತ ನಟ ದುನಿಯಾ ವಿಜಯ್ ಹಾಗೂ ಯಿಭ್ಭಾದೇವಿ ಟೆಂಟ್‌ಹೌಸ್‌ನ ಡಿ.ಶಿವಲಿಂಗೇಗೌಡರು ಭಾಗವಹಿಸಲಿದ್ದಾರೆ.

ಉಚಿತ ಸೇವೆ

- ಪರಿಷೆಗೆ ಬರುವ ಭಕ್ತರಿಗೆ ಪ್ರತಿ ವರ್ಷ ಉಚಿತ ಕಡಲೆಕಾಯಿ ವಿತರಣೆ
- ಸುಗ್ಗಿ ಸಂಭ್ರಮದ ಭಾಗವಾಗಿ ಉಚಿತ ಕಬ್ಬು, ಗಿಣ್ಣು ವಿತರಣೆ

ಕೃಷಿ ಹಿನ್ನೆಲೆ ನಾಯಕ



ರಾಜ್ಯ ಬಿಜೆಪಿಯಲ್ಲಿ ತನ್ನ ಪ್ರತ್ಯೇಕ ಸಂಘಟನಾ ಚತುರತೆಯೊಂದಿಗೆ ಗುರುತಿಸಿಕೊಂಡಿರುವ ಎಂ.ರುದ್ರೇಶ್, 1972ರಲ್ಲಿ ಕೃಷಿ ಹಿನ್ನೆಲೆ ರೈತಕುಟುಂಬದಲ್ಲಿ ಜನಿಸಿದರು. ತಂದೆ ಎಚ್.ಮರುಳಸಿದ್ದಯ್ಯ, ತಾಯಿ ಗೌರಮ್ಮ ಸಾಮಾನ್ಯ ಕೃಷಿಕರಾಗಿ ಬದುಕು ಕಟ್ಟಿಕೊಂಡಿದ್ದರು. ಯಾವುದೇ ರಾಜಕೀಯ ಹಿನ್ನೆಲೆಯಿಲ್ಲದ ಈ ದಂಪತಿಗೆ ಜನಿಸಿದ ಎಂ.ರುದ್ರೇಶ್ ಬಾಲ್ಯದಿಂದಲೇ ನಾಯಕತ್ವ ಗುಣಗಳನ್ನು ಮೈಗೂಡಿಸಿಕೊಂಡಿದ್ದರು. ಕೆಂಗೇರಿಯಲ್ಲಿಯೇ ಬಾಲ್ಯದ ಶಿಕ್ಷಣ ಪಡೆದು, ನಂತರ ಜ್ಯೂನಿಯರ್ ಕಾಲೇಜಿನಲ್ಲಿ ಕಲಾವಿಭಾಗದಲ್ಲಿ ಶಿಕ್ಷಣ ಪಡೆದರು. ಕ್ರೀಡೆಯಲ್ಲಿ ಸದಾ ಮುಂದಿರುತ್ತಿದ್ದ ಇವರು, ಕಾಲೇಜಿನ ದಿನಗಳಿಂದಲೇ ಕ್ಯಾಪ್ಟನ್ ಆಗಿ, ಸದಾ ತಂಡಕ್ಕೆ ಸಮರ್ಥ ನಾಯಕ ಎಂದೇ ಕರೆಸಿಕೊಳ್ಳುತ್ತಿದ್ದರು.

ರಾಮನ ರಥಯಾತ್ರೆ – ರಾಜಕೀಯ ಪ್ರವೇಶ

ಪಿವಿಪಿ ಟ್ರಸ್ಟ್ ಕಾರ್ಯದರ್ಶಿ ಎಂ. ಮಹದೇವ್ ಮಾತನಾಡಿ, ಐದು ವರ್ಷಗಳ ಪರಿಶ್ರಮದ ಫಲವಾಗಿ ಬುದ್ಧ ಪ್ರತಿಮೆ ಅನಾವರಣಗೊಂಡಿದೆ ಎಂದರು.

ಪ್ರತಿಮೆ ರಚನೆಯ ರೂವಾರಿಗಳಾದ ರಾಮು ಎಸ್. ನಾಯಕ್ ಹಾಗೂ ಚಂದ್ರಶೇಖರ ಅವರನ್ನು ಸನ್ಮಾನಿಸಲಾಯಿತು. ಬೌದ್ಧ ಬಿಕ್ಕು ಕಸ್ಸಪ ಮಹಾತೇರ, ಪಿವಿಪಿ ಟ್ರಸ್ಟ್ ಅಧ್ಯಕ್ಷ ಎಸ್.ಮರಿಸ್ವಾಮಿ, ಖಜಾಂಚಿ ಮತ್ತು ಕೊಳ್ಳೇಗಾಲ ಶಾಸಕ ಎ.ಆರ್. ಕೃಷ್ಣಮೂರ್ತಿ, ಟ್ರಸ್ಟಿ ಶಿವಮಲ್ಲು ಇದ್ದರು.



ಎಐಟಿ ಕಾಲೇಜು ಆವರಣದಲ್ಲಿ ಬುದ್ಧ ಮೂರ್ತಿ ಅನಾವರಣಗೊಳಿಸಲಾಯಿತು. ಎಸ್.ಮರಿಸ್ವಾಮಿ, ಎಂ.ಮಹದೇವ್, ಎ.ಆರ್.ಕೃಷ್ಣಮೂರ್ತಿ ಉಪಸ್ಥಿತರಿದ್ದರು

'ಅಪಘಾತಗಳಿಗೆ ಜನಸಂಖ್ಯೆ ಕಾರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ವಾಹನಗಳ ಸಂಖ್ಯೆಯಿಂದಾಗಿ ಭಾರತದಲ್ಲಿ ಪ್ರತಿವರ್ಷವೂ ರಸ್ತೆ ಅಪಘಾತಗಳ ಪ್ರಮಾಣ ಶೇ 80ರಿಂದ 90ರಷ್ಟು ಹೆಚ್ಚುತ್ತಿದೆ' ಎಂದು 'ನಿಮ್ಹಾನ್ಸ್'ನ ಹಿರಿಯ ಪ್ರಾಧ್ಯಾಪಕ ಹಾಗೂ ರಸ್ತೆ ಸುರಕ್ಷತಾ ಸಲಹೆಗಾರ ಡಾ.ಜಿ. ಗುರುರಾಜ್ ಆತಂಕ ವ್ಯಕ್ತಪಡಿಸಿದರು.

'ಬೆಂಗಳೂರು ವಕೀಲರ ಸಂಘ'ದ (ಎಎಬಿ) ವತಿಯಿಂದ ಹೈಕೋರ್ಟ್‌ನಲ್ಲಿ ಬುಧವಾರ ಆಯೋಜಿಸಲಾಗಿದ್ದ 'ರಸ್ತೆ ಸುರಕ್ಷಾ ಜಾಗೃತಿ' ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು, 'ರಸ್ತೆ ಸುರಕ್ಷತೆ ಎಂಬುದು ಭಾರತದಲ್ಲಿ ಘೋಷಣೆಯಾಗಿಯೇ ಉಳಿದಿದೆ' ಎಂದು ವಿಷಾದಿಸಿದರು.

'ಆಳುವ ಸರ್ಕಾರಗಳು ಬಜೆಟ್‌ನಲ್ಲಿ ರಸ್ತೆ ಸುರಕ್ಷತೆ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿವೆ. ಕರ್ನಾಟಕದಲ್ಲಿ ವರ್ಷವೊಂದಕ್ಕೆ 10 ಸಾವಿರಕ್ಕಿಂತಲೂ ಹೆಚ್ಚಿನ ಜನರು ದುರ್ಮರಣಕ್ಕೀಡಾಗುತ್ತಿದ್ದು, ಇವರಲ್ಲಿ ಬಹುತೇಕ ಜನರು ಪಾದಚಾರಿ ಹಾಗೂ ದ್ವಿಚಕ್ರ ವಾಹನ ಸವಾರರೇ ಆಗಿದ್ದಾರೆ. ಅದರಲ್ಲೂ ಶೇ 70ರಷ್ಟು ಯುವ ಜನಾಂಗವೇ ಇದಕ್ಕೆ ಬಲಿಯಾಗುತ್ತಿದ್ದು, ಶೇ 40ರಷ್ಟು ಅಪಘಾತಗಳು ಹೆದ್ದಾರಿಯಲ್ಲೇ ಸಂಭವಿಸುತ್ತಿವೆ. ಪರಿಣಾಮ ಅಂಗವೈಕಲ್ಯ ಮತ್ತು ಮಿದುಳು ಹಾನಿಗೆ ಒಳಗಾಗುವವರ ಸಂಖ್ಯೆ ಹೆಚ್ಚಾಗಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ನ್ಯಾಯಮೂರ್ತಿಗಳಾದ ಅನು ಶಿವರಾಮನ್, ಎಸ್.ವಿಶ್ವಜಿತ್ ಶೆಟ್ಟಿ, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ವಕೀಲರ ಸಂಘದ ಅಧ್ಯಕ್ಷ ವಿವೇಕ ಸುಬ್ಬಾರೆಡ್ಡಿ, ಸಾರಿಗೆ ಇಲಾಖೆ ಆಯುಕ್ತ ಎ.ಎಂ.ಯೋಗೇಶ್, ಸಂಚಾರ ವಿಭಾಗದ ಜಂಟಿ ಆಯುಕ್ತ ಕಾರ್ತಿಕ್ ರೆಡ್ಡಿ ಪಾಲ್ಗೊಂಡಿದ್ದರು.



ರಸ್ತೆ ಸುರಕ್ಷಾ ಜಾಗೃತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಹಿರಿಯ ನ್ಯಾಯಮೂರ್ತಿ ಅನು ಶಿವರಾಮನ್ ಅವರಿಗೆ ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಪುಸ್ತಕ ನೀಡಿದರು. ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಜತೆಗಿದ್ದರು

ನಾಯಿ ಕಚ್ಚಿದ್ದ ಬಾಲಕಿ ಸಾವು

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಬೀದಿ ನಾಯಿ ಕಚ್ಚಿ ಗಂಭೀರವಾಗಿ ಗಾಯಗೊಂಡಿದ್ದ 10 ವರ್ಷದ ಬಾಲಕಿ ಅಲಿನಾ ಲೋಕಾಪುರ, ಬುಧವಾರ ಹುಬ್ಬಳ್ಳಿಯ ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಳೆ.

ನವನಗರದ ಸೆಕ್ಟರ್ ನಂಬರ್ 15ರಲ್ಲಿ ವಾಸವಿದ್ದ ಅಲಿನಾಗೆ ಡಿಸೆಂಬರ್ 29ರಂದು ಮನೆಯ ಎದುರು ಬೀದಿ ನಾಯಿ ಕಚ್ಚಿತ್ತು. ತಕ್ಷಣವೇ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿ, ನಂತರ ಹುಬ್ಬಳ್ಳಿಯ ಕೆಎಂಸಿಆರ್‌ಐ ಆಸ್ಪತ್ರೆಗೆ ದಾಖಲಿಸಲಾಗಿತ್ತು.

‘ಕುರಿ, ದನಗಳಿಗೆ ನಾಯಿಗಳು ಕಡಿದಾಗಲೇ ದೂರು ನೀಡಲಾಗಿತ್ತು. ಆದರೆ, ಅಧಿಕಾರಿಗಳು ಕ್ರಮ ಕೈಗೊಳ್ಳಲಿಲ್ಲ. ಮಗಳ ಸಾವಿಗೇ ಅಧಿಕಾರಿಗಳೇ ಕಾರಣ’ ಎಂದು ಅಲಿನಾ ತಂದೆ ರಾಜಸಾಬ್ ಲೋಕಾಪುರ ದೂರಿದರು. ‘ಮೃತ ಬಾಲಕಿ ಕುಟುಂಬಕ್ಕೆ ₹5 ಲಕ್ಷ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುವುದು’ ಎಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದರು.

ಚಿಕ್ಕೋಡಿ ವರದಿ: ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಪಟ್ಟಣದ ವೆಂಕಟೇಶ್ವರ ಗಲ್ಲಿಯಲ್ಲಿ 2 ವರ್ಷದ ಋತ್ವಿಕ ಆನಂದ ಕುದುರೆ ಎಂಬ ಮಗುವಿನ ಮೇಲೆ ಬುಧವಾರ ಬೀದಿ ನಾಯಿಗಳು ದಾಳಿ ಮಾಡಿ, ಗಾಯಗೊಳಿಸಿವೆ. ಸ್ಥಳೀಯ ಆಸ್ಪತ್ರೆಯಲ್ಲಿ ಮಗುವಿಗೆ ಚಿಕಿತ್ಸೆ ಕೊಡಿಸಲಾಗಿದ್ದು, ಚೇತರಿಸಿಕೊಂಡಿದೆ.

ಸಂಕ್ರಾಂತಿ ಮಹೋತ್ಸವ

ಪ್ರಜಾವಾಣಿ ಚಿತ್ರ



ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಬೆಜ್ಜವಳ್ಳಿಯಲ್ಲಿ ಬುಧವಾರ ಮಕರ ಸಂಕ್ರಾಂತಿ ಮಹೋತ್ಸವ ನಡೆಯಿತು. ನಟ ಶಿವರಾಜಕುಮಾರ್ ಹಾಗೂ ಪತ್ನಿ ಗೀತಾ ಅವರು ಇರುಮುಡಿ ಹೊತ್ತು ಅಯ್ಯಪ್ಪ ಸ್ವಾಮಿಯ ಗರುಡ ದರ್ಶನ ಪಡೆದರು

ಕಸಾಪಕ್ಕಿಲ್ಲ ಕಾಯಂ ನೌಕರರು

ಸಿಬ್ಬಂದಿ ನೇಮಕಾತಿ ಪ್ರಕ್ರಿಯೆಯ ಗೊಂದಲದಿಂದ ವೇತನಕ್ಕೆ ತಡೆ

• ವರುಣ ಹೆಗಡೆ

62 ಕಸಾಪಕ್ಕೆ ಅನುಮತಿ ದೊರೆತ ಹುದ್ದೆಗಳು

16 ಸದ್ಯ ಖಾಲಿ ಇರುವ ಹುದ್ದೆಗಳು

ಬೆಂಗಳೂರು: ಸಂಚಿತ ವೇತನದ ಆಧಾರದ ಮೇಲೆ ನೇಮಕಗೊಂಡಿರುವ ಸಿಬ್ಬಂದಿಯನ್ನೇ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಅವಲಂಬಿಸಿದೆ. ಸಿಬ್ಬಂದಿ ನೇಮಕಾತಿ ಹಾಗೂ ವೇತನಕ್ಕೆ ಸಂಬಂಧಿಸಿದ ಗೊಂದಲವು ಪರಿಷತ್ತಿನ ಕಾರ್ಯಚಟುವಟಿಕೆಗಳ ಮೇಲೆ ಪರಿಣಾಮ ಬೀರಿದೆ.

ಪರಿಷತ್ತಿನಲ್ಲಿ ಒಟ್ಟು 46 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಲ್ಲಿ ಇಬ್ಬರು ಮಾತ್ರ ಕಾಯಂ ನೌಕರರಾಗಿದ್ದು, ಉಳಿದವರನ್ನು ಕಾಲಕಾಲಕ್ಕೆ ಸಂಚಿತ ವೇತನದ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ಸದ್ಯ ವಿವಿಧ ಹುದ್ದೆ ನಿಭಾಯಿಸುತ್ತಿರುವವರಲ್ಲಿ ಬಹುತೇಕರು ಹಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ನೌಕರರಾಗಿದ್ದಾರೆ.

ದತ್ತಿ ವಿಭಾಗ, ಜಿಲ್ಲಾ ಘಟಕ ಮತ್ತು ಕಾರ್ಯಕ್ರಮ ವಿಭಾಗ, ಸದಸ್ಯತ್ವ ವಿಭಾಗ, ಲೆಕ್ಕಪತ್ರ ವಿಭಾಗ, ಪುಸ್ತಕ ಮಾರಾಟ ವಿಭಾಗ ಸೇರಿ ಬಹುತೇಕ ಎಲ್ಲ ವಿಭಾಗವನ್ನು ಸಂಚಿತ ವೇತನದಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯೇ ನಿಭಾಯಿಸುತ್ತಿದ್ದಾರೆ. ಈಗ ಅವರ ನೇಮಕಾತಿ ಪ್ರಕ್ರಿಯೆ ಬಗೆಗೆ ಗೊಂದಲ ಉಂಟಾದ ಪರಿಣಾಮ, ವೇತನವಿಲ್ಲದೆ ಸಿಬ್ಬಂದಿ ಅಡಕತ್ತರಿಯಲ್ಲಿ ಸಿಲುಕಿದ್ದಾರೆ.

ಕಸಾಪ ಅಧ್ಯಕ್ಷರಾಗಿದ್ದ ಮಹೇಶ ಜೋಶಿ ಅವರ ಕಾರ್ಯವಿಧಾನದ ಬಗ್ಗೆ ಆರೋಪಗಳು ಎದುರಾಗಿದ್ದರಿಂದಾಗಿ ಸಹಕಾರ ಇಲಾಖೆಯು ವಿಚಾರಣಾಧಿಕಾರಿಯನ್ನೂ ನೇಮಕ ಮಾಡಿತ್ತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯಿತ್ರಿ ಅವರು 2025ರ ಅಕ್ಟೋಬರ್‌ನಲ್ಲಿ ಕಸಾಪ ಆಡಳಿತಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ್ದರು. ಸಂಚಿತ ವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸು-ತ್ತಿರುವ ಸಿಬ್ಬಂದಿಯ ನೇಮಕಾತಿಗೆ ಸರ್ಕಾರದ ಅನುಮತಿ ಪಡೆದುಕೊಂಡಿಲ್ಲ ಎಂಬ ಕಾರಣ ನೀಡಿದ ಅವರು, ವೇತನ ತಡೆ ಹಿಡಿದಿದ್ದಾರೆ. ಇದರಿಂದಾಗಿ ಅಕ್ಟೋಬರ್‌ನಿಂದ ವೇತನ ಸಿಗದೆ ಸಿಬ್ಬಂದಿ ಸಂಕಷ್ಟಕ್ಕೆ ಒಳಗಾಗಿದ್ದಾರೆ.

ಅನುದಾನವಿದ್ದರೂ ವೇತನವಿಲ್ಲ: ಕಸಾಪ ಸಿಬ್ಬಂದಿಯ ವೇತನಕ್ಕೆ ಸಂಬಂಧಿಸಿದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಳೆದ ಅಕ್ಟೋಬರ್ ತಿಂಗಳಲ್ಲಿ ಪರಿಷತ್ತಿಗೆ ₹1.01 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಆರು ತಿಂಗಳ ವೇತನ ಪಾವತಿಗೆ ಈ ಅನುದಾನ ಬಳಕೆ ಮಾಡಿಕೊಳ್ಳಲು ಸೂಚಿಸಿದೆ. ಇಬ್ಬರು ಕಾಯಂ ನೌಕರರಿಗೆ ಮಾತ್ರ ಬಿಡುಗಡೆಯಾದ ಅನುದಾನದಲ್ಲಿ ವೇತನ ಪಾವತಿಸಿದ್ದು, ಉಳಿದ ಸಿಬ್ಬಂದಿಗೆ ಬಾಕಿ ಉಳಿಸಿಕೊಳ್ಳಲಾಗಿದೆ.

ವೇತನ ಪಾವತಿಗೆ ಸಂಬಂಧಿಸಿದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿಯಿಂದ ಮಾರ್ಗದರ್ಶನ ಕೋರಿರುವ ಆಡಳಿತಾಧಿಕಾರಿ, ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವಿವರ ಸಹಿತ ವರದಿಯನ್ನು ಜನವರಿ 2ರಂದು ಒದಗಿಸಿದ್ದಾರೆ. ಕೆಲ ಸಿಬ್ಬಂದಿಯನ್ನು ಬೈ-ಲಾ ಅನುಸಾರ ನೇಮಕ ಮಾಡಿಕೊಂಡರೂ, ಕಾರ್ಯಕಾರಿ ಹಾಗೂ ಹಣಕಾಸು ಸಮಿತಿಯಲ್ಲಿ ಅನುಮೋದನೆ ಪಡೆದಿಲ್ಲ ಎಂದು ಉಲ್ಲೇಖಿಸಿದ್ದಾರೆ.

‘ಅನುಮೋದನೆ ಪಡೆದುಕೊಂಡಿಲ್ಲ’

‘ಕಾಯಂ ನೌಕರರಿಗೆ ವೇತನ ಪಾವತಿ ಮಾಡಲಾಗಿದೆ. ಸಂಚಿತ ವೇತನದ ಆಧಾರದ ಮೇಲೆ ನೇಮಕಗೊಂಡಿರುವ ಸಿಬ್ಬಂದಿಯಲ್ಲಿ ಕೆಲವರ ನೇಮಕಾತಿಗೆ ಹಣಕಾಸು ಹಾಗೂ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದುಕೊಂಡಿಲ್ಲ. ವಯೋನಿವೃತ್ತಿ ಹೊಂದಿದ ಕೆಲವರನ್ನು ಅಧ್ಯಕ್ಷರ ಅನುಮೋದನೆ ಅನ್ವಯ ಮುಂದುವರಿಸಲಾಗಿದೆ. ಸರ್ಕಾರಿ ಆದೇಶದಲ್ಲಿ ‘ಚಾಲ್ತಿಯಲ್ಲಿರುವ ಹಾಗೂ ಮುಂದೆ ಉದ್ಭವಿಸುವ ಖಾಲಿ ಹುದ್ದೆಗಳನ್ನು ಸರ್ಕಾರದ ಅನುಮತಿ ಇಲ್ಲದೆ ಭರ್ತಿ ಮಾಡಕೂಡದು’ ಎಂದು ಉಲ್ಲೇಖಿಸಲಾಗಿದೆ ಎಂದು ಕಸಾಪ ಆಡಳಿತಾಧಿಕಾರಿ ಕೆ.ಎಂ.ಗಾಯಿತ್ರಿ ವರದಿಯಲ್ಲಿ ತಿಳಿಸಿದ್ದಾರೆ.

ಸಂಚಿತ ವೇತನದ ಆಧಾರದ ಮೇಲೆ ನೇಮಕಗೊಂಡಿರುವ ಸಿಬ್ಬಂದಿಯಲ್ಲಿ ಒಂಬತ್ತು ಸಿಬ್ಬಂದಿ 20 ವರ್ಷ ಹಾಗೂ ಅದಕ್ಕಿಂತ ಹೆಚ್ಚಿನ ಅವಧಿಯಿಂದ ಪರಿಷತ್ತಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಎಂಟು ಮಂದಿ 10 ವರ್ಷ-ಅದಕ್ಕಿಂತ ಹೆಚ್ಚಿನ ಅವಧಿಯಿಂದ ಸಂಚಿತ ವೇತನದಡಿ ವಿವಿಧ ಹುದ್ದೆಯಲ್ಲಿದ್ದಾರೆ.

ಬೈ-ಲಾದಲ್ಲಿ ಏನಿದೆ?

‘ಪರಿಷತ್ತಿನ ಧ್ಯೇಯೋದ್ದೇಶಗಳ ಈಡೇರಿಕೆಗಾಗಿ ಹಾಗೂ ನಿಯಮ-ನಿಬಂಧನೆಗಳ ಪಾಲನೆಗೆ, ದೈನಂದಿನ ಕಾರ್ಯಗಳನ್ನು ನಿರ್ವಹಿಸಲು ಅವಶ್ಯವಿರುವ ಸಿಬ್ಬಂದಿಯನ್ನು ಕೇಂದ್ರ ಪರಿಷತ್ತಿಗೆ ನೇಮಕ ಮಾಡಿಕೊಳ್ಳುವ ಅಧಿಕಾರ ಅಧ್ಯಕ್ಷರಿಗೆ ಇರುತ್ತದೆ’ ಎಂದು ಕಸಾಪ ಬೈ-ಲಾದಲ್ಲಿ ತಿಳಿಸಲಾಗಿದೆ.

‘ಕಾಲಕಾಲಕ್ಕೆ ಸಿಬ್ಬಂದಿ ವೇತನ ಹೆಚ್ಚಿಸುವ, ಬಡ್ತಿ ನೀಡುವ, ಸಿಬ್ಬಂದಿ ವಿರುದ್ಧ ಕ್ರಮ ಜರುಗಿಸುವ, ದಂಡಿಸುವ ಹಾಗೂ ಕೆಲಸದಿಂದ ವಜಾಗೊಳಿಸುವ ಅಧಿಕಾರವನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ಹೊಂದಿರುತ್ತಾರೆ. ಈ ಸಂಬಂಧ ತಮ್ಮ ಆದೇಶವನ್ನು ಅಧ್ಯಕ್ಷರು ಕಾರ್ಯಕಾರಿ ಸಮಿತಿ ಸಭೆಯಲ್ಲಿ ದಾಖಲಿಸತಕ್ಕದ್ದು’ ಎನ್ನಲಾಗಿದೆ.



ಸ್ವಾಯತ್ತ ಸಂಸ್ಥೆಯಾಗಿರುವ ಕಸಾಪವು ಕಾರ್ಯಕಾರಿ ಸಮಿತಿ ಅನುಮೋದನೆ ಪಡೆದು ಸಿಬ್ಬಂದಿ ನೇಮಕ ಮಾಡಿಕೊಳ್ಳಬಹುದು. ಕಾಯಂ ನೌಕರರ ನೇಮಕಾತಿಗೆ ಮಾತ್ರ ಸರ್ಕಾರದ ಅನುಮತಿ ಅಗತ್ಯ

ಮನು ಬಳಿಗಾರ್, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ

22ರಿಂದ ಜಂಟಿ ಅಧಿವೇಶನ

ಒಂದನೇ ಪುಟದಿಂದ...

‘ಸಮಾಜದ ಮೇಲೆ ವಿಬಿ ಜಿ ರಾಮ್ ಜಿ ಕಾಯ್ದೆ ಬೀರುವ ಸಾಮಾಜಿಕ ಹಾಗೂ ಆರ್ಥಿಕ ಪರಿಣಾಮಗಳ ಬಗ್ಗೆ ಜನರಿಗೆ ಅರಿವು ಮತ್ತು ಜಾಗೃತಿ ಮೂಡಿಸಲು ಅಧಿವೇಶನದಲ್ಲಿ ಚರ್ಚಿಸಲಾಗುವುದು. ಈ ಬಗ್ಗೆ ನಿರ್ಣಯ ಕೈಗೊಳ್ಳಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಆ ಮೂಲಕ, ನರೇಗಾ ಕಾಯ್ದೆಯ ಪುನರ್ ಸ್ಥಾಪನೆಗಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು ಪ್ರಯತ್ನಿಸಲಾಗುವುದು’ ಎಂದರು.

‘22ರಿಂದ 31ರ ನಡುವೆ ರಜಾ ದಿನಗಳೂ ಬರುತ್ತವೆ. ಯಾವೆಲ್ಲ ದಿನಗಳಲ್ಲಿ ಅಧಿವೇಶನ ನಡೆಸಬೇಕು ಎಂದು ವಿಧಾನಸಭಾಧ್ಯಕ್ಷರ ಜೊತೆ ಸಮಾಲೋಚಿಸಿ, ಕಲಾಪ ಸಲಹಾ ಸಮಿತಿ (ಬಿಎಸಿ) ಸಭೆಯಲ್ಲಿ ನಿರ್ಧರಿಸಲಾಗುವುದು’ ಎಂದೂ ಪಾಟೀಲ ಹೇಳಿದರು.

‘ಕೇಂದ್ರದ ಕಾಯ್ದೆ ಕುರಿತು ವಿಶೇಷ ಚರ್ಚೆ ನಡೆಸುವ ಅಗತ್ಯ ಇದೆಯೇ’ ಎಂಬ ಸುದ್ದಿಗಾರರ ಪ್ರಶ್ನೆಗೆ, ‘ಜನಹಿತ, ರಾಜ್ಯದ ಹಿತ ಕಾಪಾಡಲು ಸರ್ಕಾರ ಸೂಕ್ತ ಹೆಜ್ಜೆ ಇಡಲಿದೆ. ಅಲ್ಲದೆ, ಇಂತಹ ವಿಚಾರದಲ್ಲಿ ಸರ್ಕಾರ ಅಧಿವೇಶನ ಕರೆಯದೇ ಬಿಡಲು ಸಾಧ್ಯವೂ ಇಲ್ಲ. ಜನರ ನ್ಯಾಯಾಲಯಕ್ಕೆ ಮಾತ್ರವಲ್ಲದೆ, ನ್ಯಾಯಾಲಯದ ಮೊರೆ ಹೋಗಲು ಕೂಡಾ ನಿರ್ಣಯಿಸಲಾಗಿದೆ’ ಎಂದರು.

‘ಇತರ ರಾಜ್ಯಗಳು ಕಾಯ್ದೆಗೆ ತಕರಾರು ತೆಗೆದಿಲ್ಲವಲ್ಲ’ ಎಂದಾಗ, ‘ಪಂಜಾಬ್, ತಮಿಳುನಾಡು ಸರ್ಕಾರ ಧ್ವನಿ ಎತ್ತಿವೆ. ಆರೇಳು ರಾಜ್ಯಗಳು ಸ್ಪಷ್ಟ ನಿಲುವು ಹಾಗೂ ಅಸಮಾಧಾನ ವ್ಯಕ್ತಪಡಿಸಿವೆ’ ಎಂದರು.

‘ಕೇಂದ್ರದ ಮೇಲೆ ಒತ್ತಡ ಹೇರಲು ನಿರ್ಣಯ’

‘ನರೇಗಾ ಕಾಯ್ದೆಯಡಿ ಕೆಲಸ ಕೊಡುವುದು ಮಾತ್ರವಲ್ಲ, ಕೆಲಸ ಕೊಡದಿದ್ದರೆ ಫಲಾನುಭವಿ ಉದ್ಯೋಗ ಭತ್ಯೆ ಕೇಳಬಹುದಾಗಿತ್ತು. ಪಂಚಾಯಿತಿಗಳಿಗೆ ಕೆಲಸಗಳ ಬಗ್ಗೆ ತೀರ್ಮಾನಿಸುವ ಹಕ್ಕು ಇತ್ತು. ಹೊಸ ಕಾಯ್ದೆ ಮೂಲಕ ಕೇಂದ್ರವು ಈ ಅಧಿಕಾರ ಕಿತ್ತುಕೊಂಡು ಅದನ್ನು ತಮ್ಮ ಬಳಿಯೇ ಇಟ್ಟುಕೊಳ್ಳುವುದು ವಿಕೇಂದ್ರೀಕರಣದ ಪರಿಕಲ್ಪನೆಗೆ ಕೊಡಲಿ ಏಟು ನೀಡಲಿದೆ. ಈ ಕಾರಣಗಳಿಗೆ ವಿಶೇಷ ಚರ್ಚೆ ಮಾಡಿ, ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ನಿರ್ಣಯಿಸಲಾಗಿದೆ’ ಎಂದು ಎಚ್.ಕೆ. ಪಾಟೀಲ ವಿವರಿಸಿದರು.

ಒಕ್ಕೂಟ ವ್ಯವಸ್ಥೆಯಲ್ಲಿ ನಮ್ಮ ರಾಜ್ಯದ ಜನರ ಹಕ್ಕನ್ನು ಕಿತ್ತುಕೊಳ್ಳಲು ಮುಂದಾದರೆ ಸರ್ಕಾರ ಸುಮ್ಮನೆ ಕುಳಿತುಕೊಳ್ಳಲು ಸಾಧ್ಯವಿಲ್ಲ

ಎಚ್.ಕೆ. ಪಾಟೀಲ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

‘ರಾಮ್’ ಎಲ್ಲಿಂದ ಬರುತ್ತದೆ?

‘ರಾಜಕೀಯವಾಗಿ ಕೆಲವರು ಕಾಯ್ದೆಯನ್ನು ವಿಬಿ ಜಿ ರಾಮ್ ಜಿ ಎನ್ನುತ್ತಾರೆ. ಇದರಲ್ಲಿ ರಾಮ್ ಎಲ್ಲಿಂದ ಬರುತ್ತದೆ? ಬರೆಯುವಾಗ, ಹೇಳುವಾಗ ತಪ್ಪು ಏಕೆ ಮಾಡುತ್ತಾರೆ? ಭಾವನಾತ್ಮಕ ಅಂಶದಡಿ ಆಶ್ರಯ ಪಡೆಯುತ್ತಿರುವುದು ದುರದೃಷ್ಟಕರ ಸಂಗತಿ’ ಎಂದೂ ಪಾಟೀಲ ಹೇಳಿದರು.

‘ಪಿಪಿಪಿ’ ವಿರೋಧಿ ಹೋರಾಟಗಾರರ ಬಿಡುಗಡೆ

ಪ್ರಜಾವಾಣಿ ವಾರ್ತೆ

ವಿಜಯಪುರ: ಖಾಸಗಿ–ಸಾರ್ವಜನಿಕ ಸಹಭಾಗಿತ್ವದಲ್ಲಿ (ಪಿಪಿಪಿ) ವೈದ್ಯಕೀಯ ಕಾಲೇಜು ಸ್ಥಾಪನೆ ವಿರೋಧಿಸಿ ಮತ್ತು ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಆಗ್ರಹಿಸಿ ಹೋರಾಟ ನಡೆಸಿ ಬಂಧನಕ್ಕೆ ಒಳಗಾಗಿ 14 ದಿನಗಳಿಂದ ಜೈಲಿನಲ್ಲಿದ್ದ ಆರು ಮಂದಿ ಹೋರಾಟಗಾರರು ಬುಧವಾರ ಜಿಲ್ಲಾ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾದರು.

ಬಿಡುಗಡೆಯಾದ ಅನಿಲ ಹೊಸಮನಿ, ಅರವಿಂದ ಕುಲಕರ್ಣಿ, ಬಿ.ಭಗವಾನ್ ರೆಡ್ಡಿ, ಭೋಗೇಶ ಸೋಲಾಪುರ, ಸಿದ್ದರಾಮ ಹಳ್ಳೂರ ಮತ್ತು ಹುಳಶ್ಯಾಳದ ಸಂಗನ ಬಸವ ಸ್ವಾಮೀಜಿ ಅವರಿಗೆ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನಾ ಹೋರಾಟ ಸಮಿತಿ ಸದಸ್ಯರು, ವಿವಿಧ ಸಂಘಟನೆಗಳ ಮುಖಂಡರು, ಕುಟುಂಬದವರು, ಸ್ನೇಹಿತರು ಹೂವಿನ ಹಾರ ಹಾಕಿ ಅಭಿನಂದಿಸಿದರು. ಸಿಹಿ ತಿನ್ನಿಸಿದರು.

ಹೋರಾಟಗಾರ ಅನಿಲ ಹೊಸಮನಿ ಮಾತನಾಡಿ, ‘ಇದು ಜನರ ಗೆಲುವು. ಈ ಹೋರಾಟದ ಫಲವಾಗಿ ವಿಜಯಪುರ ಅಲ್ಲದೇ ರಾಜ್ಯದ ಇನ್ನುಳಿದ ಜಿಲ್ಲೆಗಳಲ್ಲೂ ಖಾಸಗಿ ಸಹಭಾಗಿತ್ವದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸುವ ನಿರ್ಧಾರವನ್ನು ಸರ್ಕಾರ ಕೈ ಬಿಡಲು ಮುಂದಾಗಿದೆ. ಇದು ಹೋರಾಟಕ್ಕೆ ದೊಡ್ಡ ಜಯ ತಂದುಕೊಟ್ಟಿದೆ’ ಎಂದರು.

ಬಿಪಿಟಿ, ಬಿಒಟಿಗೂ ನೀಟ್ ಕಡ್ಡಾಯ

ಬೆಂಗಳೂರು: '2026–27ನೇ ಸಾಲಿನಿಂದ ಬ್ಯಾಚುಲರ್ ಆಫ್ ಫಿಸಿಯೋ ಥೆರಪಿ (ಬಿಪಿಟಿ) ಮತ್ತು ಬ್ಯಾಚುಲರ್ ಆಫ್ ಆಕ್ಯುಪೇಷನಲ್ ಥೆರಪಿ (ಬಿಒಟಿ) ಕೋರ್ಸ್‌ಗಳಿಗೆ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಮೂಲಕ ಮಾತ್ರ ಪ್ರವೇಶ ನೀಡುವಂತೆ ರಾಷ್ಟ್ರೀಯ ಸಹಾಯಕ ಮತ್ತು ಆರೋಗ್ಯ ವೃತ್ತಿಗಳ ಆಯೋಗ ತಿಳಿಸಿದೆ' ಎಂದು ರಾಜ್ಯ ಅಲೈಡ್ ಹೆಲ್ತ್ ಕೇರ್ ಕೌನ್ಸಿಲ್ ಅಧ್ಯಕ್ಷ ಯು.ಟಿ. ಇಫ್ತಿಕಾರ್ ಅಲಿ ತಿಳಿಸಿದ್ದಾರೆ.

'ಇದೇ 9ರಂದು ಪತ್ರ ಬರೆದಿರುವ ಎನ್‌ಸಿಎಎಚ್‌ಪಿ, ಬಿಪಿಟಿ ಮತ್ತು ಬಿಒಟಿ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಗೆ (ಎನ್‌ಟಿಎ) ಸೂಚನೆ ನೀಡಲಾಗಿದೆ. ಅಲ್ಲದೆ, ಪ್ರವೇಶಕ್ಕೆ ಅನುಸರಿಸಬೇಕಾದ ಮಾನದಂಡಗಳನ್ನು 2026–27ನೇ ಸಾಲಿನಿಂದ ಜಾರಿಗಳಿಸಲು ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೂ (ಯುಜಿಸಿ) ತಿಳಿಸಿದೆ. ಎನ್‌ಸಿಎಎಚ್‌ಪಿ ಕಾಯ್ದೆ 2021ರ ಪ್ರಕಾರ ನೀಟ್ ಮೂಲಕ ಮಾತ್ರ ಕೋರ್ಸ್‌ಗಳಿಗೆ ಪ್ರವೇಶ ನೀಡಬೇಕು' ಎಂದಿದ್ದಾರೆ.

'ರಾಜ್ಯದಲ್ಲಿರುವ ಸರ್ಕಾರಿ, ಖಾಸಗಿ, ಡೀಮ್ಡ್ ಸೇರಿದಂತೆ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳು ಎನ್‌ಸಿಎಎಚ್‌ಪಿ ನೀಡಿರುವ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದೂ ಅವರು ತಿಳಿಸಿದ್ದಾರೆ.

ನಾಗೇಂದ್ರಗೆ ನಿರೀಕ್ಷಣಾ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಕಲ್ಯಾಣ ನಿಧಿ ಹಣ ದುರ್ಬಳಕೆ ಹಗರಣದ ಆರೋಪಿಯಾದ ಮಾಜಿ ಸಚಿವ, ಕಾಂಗ್ರೆಸ್ ಪಕ್ಷದ ಹಾಲಿ ಶಾಸಕ ಬಿ.ನಾಗೇಂದ್ರ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ನಿರೀಕ್ಷಣಾ ಜಾಮೀನು ನೀಡಿದೆ.

ಸಿಬಿಐ ದೂರಿಗೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ಕೋರಿ ನಾಗೇಂದ್ರ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಬುಧವಾರ ಜಾಮೀನು ಮಂಜೂರು ಮಾಡಿ ಆದೇಶಿಸಿದರು.

'ತನಿಖಾಧಿಕಾರಿ ಮುಂದೆ 15 ದಿನಗಳ ಒಳಗಾಗಿ ಹಾಜರಾಗಬೇಕು. ಮೂರು ತಿಂಗಳು ಎರಡನೇ ಭಾನುವಾರ ತನಿಖಾಧಿಕಾರಿ ಮುಂದೆ ಹಾಜರಾಗಿ ಸಹಿ ಹಾಕಬೇಕು. ಕೋರ್ಟ್ ಅನುಮತಿ ಇಲ್ಲದೆ ಕೋರ್ಟ್ ವ್ಯಾಪ್ತಿ ಪ್ರದೇಶ ಬಿಟ್ಟು ಹೊರಗೆ ಹೋಗಬಾರದು. ಸಾಕ್ಷಿಗಳ ಮೇಲೆ ಮೇಲೆ ಪ್ರಭಾವ ಬೀರಬಾರದು ಮತ್ತು ಇದೇ ರೀತಿಯ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಬಾರದು' ಎಂಬ ಷರತ್ತುಗಳೊಡನೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿ ಆದೇಶಿಸಲಾಗಿದೆ.

ನಾಗೇಂದ್ರ ಪರ ಹೈಕೋರ್ಟ್ ವಕೀಲ ಗೌತಮ್ ನೆಟ್ಟಾರು ವಾದ ಮಂಡಿಸಿದರು.

ಮಹಿಳಾ ಹಕ್ಕಿಗೆ ಸಂವಿಧಾನವೇ ಬುನಾದಿ

ಸಂವಿಧಾನವೇ ಬೆಳಕು

Curated by DH Deccan Herald | ಪ್ರಜಾವಾಣಿ

• ಸತೀಶ ಬಿ.



ಹುಬ್ಬಳ್ಳಿಯಲ್ಲಿ ನಡೆದ 'ಸಂವಿಧಾನವೇ ಬೆಳಕು' ಕಾರ್ಯಕ್ರಮದಲ್ಲಿ ಸುನಂದಾ ಕಡಮೆ, ವಿಶ್ವನಾಥ ಬಿಚಗತ್ತಿ, ಇಸಾಬೆಲ್ಲಾ ಕ್ಸೇವಿಯರ್, ವಿನಯಾ ಒಕ್ಕುಂದ ಮತ್ತು ಜಿ.ಬಿ.ಗೌಡಪ್ಪಗೋಳ ಪಾಲ್ಗೊಂಡಿದ್ದರು

ಹುಬ್ಬಳ್ಳಿ: ಮಹಿಳೆಯರ ಸುರಕ್ಷತೆ, ಸ್ವಾವಲಂಬಿ ಬದುಕು, ಶಿಕ್ಷಣ, ಶುಚಿತ್ವದ ಬಗ್ಗೆ ಸರ್ಕಾರ ಗಮನ ಕೊಡುತ್ತಿದೆ. ಮಹಿಳಾ ಪರ ಗ್ಯಾರಂಟಿ ಯೋಜನೆಗಳು ಜಾರಿಗೆ ಬಂದಿವೆ. ಉದ್ಯೋಗ, ವ್ಯಾಪಾರ, ನ್ಯಾಯಾಂಗ, ವಿಜ್ಞಾನ ಕ್ಷೇತ್ರದಲ್ಲೂ ಮಹಿಳೆಯರು ಸಾಧನೆ ಮಾಡುತ್ತಿದ್ದಾರೆ. ಇದೆಲ್ಲಕ್ಕೂ ಕಾರಣ ಸಂವಿಧಾನ.

–'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಮತ್ತು ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ನಗರದ ಡೆನಿಸನ್ಸ್ ಹೋಟೆಲ್‌ನಲ್ಲಿ ನಡೆದ 'ಸಂವಿಧಾನವೇ ಬೆಳಕು' ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳು ಹೀಗೆ ಪ್ರತಿಪಾದಿಸಿದರು.

ಮಹಿಳಾ ಹಕ್ಕು, ಶಿಕ್ಷಣ ಮತ್ತು ಉದ್ಯೋಗದ ಹಕ್ಕುಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದ ವಿವಿಧ ಕ್ಷೇತ್ರಗಳ ಪರಿಣತರು, 'ಮಹಿಳೆಯರಿಗೆ ನೀಡಲಾದ ಸಾಂವಿಧಾನಿಕ ಹಕ್ಕುಗಳಿಗೆ ಧಕ್ಕೆಯಾದಾಗ, ಕಾನೂನಿನ ರಕ್ಷಣೆ ಪಡೆಯಬಹುದು' ಎಂದು ಹೇಳಿದರು. ಲಿಂಗ ಸಂವೇದನೆ ಸೇರಿ ವಿವಿಧ ವಿಷಯಗಳ ಕುರಿತು ಮಾಹಿತಿ ಒದಗಿಸಿದರು.

ಲೇಖಕಿಯರಾದ ವಿನಯಾ ಒಕ್ಕುಂದ, ಸುನಂದಾ ಕಡಮೆ, ಹೈಕೋರ್ಟ್ ಧಾರವಾಡ ಪೀಠದ ವಕೀಲ ವಿಶ್ವನಾಥ ಬಿಚಗತ್ತಿ, ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಉಪ ಆಯುಕ್ತ ಜಿ.ಬಿ. ಗೌಡಪ್ಪಗೋಳ ಅವರು ಸಂವಾದದಲ್ಲಿ ಪಾಲ್ಗೊಂಡಿದ್ದರು. ಸಾಮಾಜಿಕ ಕಾರ್ಯಕರ್ತೆ ಇಸಾಬೆಲ್ಲಾ ಕ್ಸೇವಿಯರ್ ಸಂವಾದ ನಡೆಸಿಕೊಟ್ಟರು.

ಲೇಖಕಿ ಸುನಂದಾ ಕಡಮೆ ಮಾತನಾಡಿ, 'ಸಂವಿಧಾನ ರಚನೆಗೂ ಮುನ್ನ ಮೂಢನಂಬಿಕೆ, ಧಾರ್ಮಿಕ ಸಂಪ್ರದಾಯಗಳು ಮಹಿಳೆಯರ ದೈನಂದಿನ ಚಟುವಟಿಕೆಗಳನ್ನು ರೂಪಿಸುತ್ತಿದ್ದವು. ಸಂವಿಧಾನ ನೀಡಿದ ಅವಕಾಶದಿಂದಾಗಿ ಮಹಿಳೆಯರು, ದಲಿತರಿಗೆ ಶಿಕ್ಷಣ ಇನ್ನಷ್ಟು ಹತ್ತಿರವಾಯಿತು. ಮಹಿಳೆಯರಿಗೂ ಸಮಾನ ಹಕ್ಕುಗಳನ್ನು ಸಂವಿಧಾನದಲ್ಲಿ ನೀಡಲಾಗಿದೆ' ಎಂದರು.

> **ದೇಶದ ಜನಸಂಖ್ಯೆಯಲ್ಲಿ ಶೇ 50ಕ್ಕಿಂತ ಹೆಚ್ಚು ಮಹಿಳೆಯರು ಇದ್ದಾರೆ. ಮಹಿಳೆಯರ ಅಭಿವೃದ್ಧಿಯಾದರೆ ದೇಶದ ಪ್ರಗತಿ ಸಾಧ್ಯ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಕ್ಷೇತ್ರದಲ್ಲಿ ಮಹಿಳೆಯರಿಗೆ ಸಂವಿಧಾನ ಆಧಾರವಾಗಿದೆ**
> **ಇಸಾಬೆಲ್ಲಾ ಕ್ಸೇವಿಯರ್,** ಸಾಮಾಜಿಕ ಕಾರ್ಯಕರ್ತೆ

ಲೇಖಕಿ ವಿನಯಾ ಒಕ್ಕುಂದ ಮಾತನಾಡಿ, 'ದೇಶದ ಬಹುತ್ವದ ಬೇರುಗಳು ಸಡಿಲವಾಗುತ್ತಿವೆ. ಆದರೆ, ಸಂವಿಧಾನ ಎಂಬ ತಾಯಿ ಬೇರು ಅದನ್ನು ರಕ್ಷಿಸುತ್ತಿದೆ. ಸಂವಿಧಾನಲ್ಲೇನಿದೆ, ಅದು ನಮಗೆ ಏನು ಕೊಟ್ಟಿದೆ ಎಂಬುದನ್ನು ತಿಳಿಯಬೇಕಿರುವುದು ಎಲ್ಲರ ಜವಾಬ್ದಾರಿ' ಎಂದು ಹೇಳಿದರು.

'ಜಗತ್ತಿನ ಅನೇಕ ರಾಷ್ಟ್ರಗಳು ಮಹಿಳೆಯರಿಗೆ ಮತದಾನದ ಹಕ್ಕು ನೀಡಿಲ್ಲ. ಆದರೆ, ಭಾರತದಲ್ಲಿ ಮಹಿಳೆಯರನ್ನು ಬೇರೆಯಾಗಿ ನೋಡದೆ ಮತದಾನದ ಹಕ್ಕು ನೀಡಿದ್ದು ಬಹುದೊಡ್ಡ ಕಾಣಿಕೆ. ಕಲ್ಯಾಣ ರಾಜ್ಯದ ಮಾರ್ಗದರ್ಶಕ ಸೂತ್ರಗಳಲ್ಲಿ ಸಮಾನ ಕೆಲಸಕ್ಕೆ ಸಮಾನ ಸಂಬಳ ಎಂಬುದು ಉಲ್ಲೇಖವಾಗಿರುವುದು ಮಹಿಳೆಯರ ಘನತೆಯನ್ನು ಎತ್ತಿ ಹಿಡಿದಿರುವುದಕ್ಕೆ ಬಹುದೊಡ್ಡ ಉದಾಹರಣೆ' ಎಂದು ಹೇಳಿದರು.

ಪ್ರಜಾವಾಣಿ ನೋಡಿಯೊ — ವಿಡಿಯೊ ನೋಡಲು ಸ್ಕ್ಯಾನ್ ಮಾಡಿ

'ಸರ್ಕಾರಿ ವಲಯದಲ್ಲಿ ಸಿಗುವ ಸೌಲಭ್ಯಗಳು ಖಾಸಗಿ ವಲಯದಲ್ಲಿ ಸಿಗುತ್ತಿಲ್ಲ. 14 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣ ನೀಡಬೇಕು. ಆದರೆ, ಮಾಧ್ಯಮ, ಪತ್ಯಕ್ರಮದ ಆಧಾರದಲ್ಲಿ ತಾರತಮ್ಯ ನಡೆಯುತ್ತಿದೆ. ಶಿಕ್ಷಣ ಎಂಬ ಹುಲಿಯ ಹಾಲನ್ನು ಎಲ್ಲರಿಗೂ ಸಮಾನವಾಗಿ ಹಂಚಲು ಆಗುತ್ತಿಲ್ಲ' ಎಂದು ಕಳವಳ ವ್ಯಕ್ತಪಡಿಸಿದರು.

ಹೈಕೋರ್ಟ್ ಧಾರವಾಡ ಪೀಠದ ವಕೀಲ ವಿಶ್ವನಾಥ ಬಿಚಗತ್ತಿ ಮಾತನಾಡಿ, 'ಸಂವಿಧಾನದ 14, 15, 16, 39, 42ನೇ ವಿಧಿಗಳು ಮಹಿಳೆಯರ ಹಕ್ಕುಗಳನ್ನು ಹೇಳುತ್ತವೆ. ಸಂವಿಧಾನದ 16ನೇ ವಿಧಿಯಲ್ಲಿ ಧರ್ಮ, ಜಾತಿಯ ಆಧಾರದಲ್ಲಿ ಯಾವುದೇ ತಾರತಮ್ಯ ಮಾಡುವಂತಿಲ್ಲ. ಮಹಿಳಾ ಸಬಲೀಕರಣಕ್ಕೆ ಪೂರಕ ಕಾನೂನು ಜಾರಿಗೆ ತರಲು ಸಂವಿಧಾನದಲ್ಲಿ ಅವಕಾಶ ಇದೆ. ರಾಷ್ಟ್ರೀಯ ಕಾನೂನು ಪ್ರಾಧಿಕಾರ ಅಧಿನಿಯಮದಲ್ಲಿ, ಮಹಿಳೆಯರು ನೊಂದಿದ್ದರೆ ಕಾನೂನು ಹೋರಾಡಲು ಉಚಿತ ಕಾನೂನು ನೆರವು ನೀಡಲಾಗುತ್ತದೆ. ಜಿಲ್ಲಾ, ತಾಲ್ಲೂಕು, ರಾಜ್ಯಮಟ್ಟದಲ್ಲಿ ನೊಂದ ಮಹಿಳೆಯರ ಪರ ವಾದ ಮಂಡಿಸಲು ವಕೀಲರನ್ನು ನೇಮಿಸಲಾಗುತ್ತದೆ' ಎಂದರು.

ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಉಪ ಆಯುಕ್ತ ಜಿ.ಬಿ.ಗೌಡಪ್ಪಗೋಳ ಮಾತನಾಡಿ, 'ಸಂವಿಧಾನ ನೀಡಿರುವ ಹಕ್ಕುಗಳನ್ನು ಮಹಿಳೆಯರಿಗೆ ತಿಳಿಸಿ, ಅವರಲ್ಲಿ ಜಾಗೃತಿ ಮೂಡಿಸುವುದು ಇಂದು ಹೆಚ್ಚು ಅಗತ್ಯವಿದೆ. ಕುಟುಂಬದಲ್ಲಿ ಸ್ತ್ರೀಗೆ ಗೌರವ, ತುಚ್ಛ ಭಾವನೆ ಇದ್ದರೆ ಅದು ಆದರ್ಶ ಕುಟುಂಬವಾಗಲು ಸಾಧ್ಯವಿಲ್ಲ. ಲಿಂಗಭೇದ, ಜಾತಿ ಭೇದ, ಮೇಲು ಕೀಳು, ಅಸ್ಪೃಶ್ಯತೆಯಿಂದ ಸಮಾಜ ಬಳಲುತ್ತಿದೆ. ಇದನ್ನು ಅರಿತು ಸರ್ವಸಮಾನತೆಗೆ ಸಂವಿಧಾನ ಜಾರಿಗೆ ತರಲಾಗಿದೆ' ಎಂದರು.

'ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಮಹಿಳೆಯರ ಸಾಕ್ಷರತೆ ಪ್ರಮಾಣ ಶೇ 8.86 ಮತ್ತು ಪುರುಷರ ಸಾಕ್ಷರತೆ ಶೇ 27ರಷ್ಟಿತ್ತು. ಈಗ ಮಹಿಳೆಯರ ಸಾಕ್ಷರತೆ ಶೇ 70ಕ್ಕೆ ಏರಿಕೆಯಾಗಿದೆ. ಇದು ಸಂವಿಧಾನದಿಂದ ಸಾಧ್ಯವಾಗಿದೆ' ಎಂದು ಹೇಳಿದರು.

An Initiative by:

SOCIAL WELFARE DEPARTMENT
For the Educational, Social & Economic Upliftment of Scheduled Castes

In Association with:

10 ನಿಮಿಷಗಳ ಡೆಲಿವರಿಗೆ ಕೊಕ್: ನಿಮ್ಮ ಅಭಿಪ್ರಾಯವೇನು?

- ಸರಿಯಾದ ನಿರ್ಧಾರ
- ತುರ್ತು ಸಂದರ್ಭದಲ್ಲಿ ಇದರ ಅಗತ್ಯವಿತ್ತು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಎಳ್ಳು-ಬೆಲ್ಲ ವಿತರಿಸಲು ಸೂಚನೆ

ಬೆಂಗಳೂರು: ಧಾರ್ಮಿಕ ದತ್ತಿ ಇಲಾಖೆಯ ಅಡಿಯಲ್ಲಿ ಬರುವ ದೇವಸ್ಥಾನಗಳಲ್ಲಿ ಭಕ್ತರಿಗೆ ಮಕರ ಸಂಕ್ರಾಂತಿಯ ಪ್ರಯುಕ್ತ ಎಳ್ಳು-ಬೆಲ್ಲ ವಿತರಿಸಬೇಕು ಎಂದು ಇಲಾಖೆಯು ಸುತ್ತೋಲೆ ಹೊರಡಿಸಿದೆ.

ಪ್ರತಿ ವರ್ಷ ಮಕರ ಸಂಕ್ರಾಂತಿ ಹಬ್ಬದ ದಿನ ಆಯಾ ದೇವಾಲಯಗಳಲ್ಲಿ ಎಳ್ಳು-ಬೆಲ್ಲ ಕೊಬ್ಬರಿ ಮಿಶ್ರಣವನ್ನು ದೇವರ ಮುಂದೆ ಇಟ್ಟು ನಿವೇದಿಸಿ ಭಕ್ತರಿಗೆ ಗೌರವ ಪೂರ್ವಕವಾಗಿ ಪ್ರಸಾದ ರೂಪದಲ್ಲಿ ನೀಡಬೇಕು. ಅದು ಸರ್ಕಾರದ ಲಾಂಛನದೊಂದಿಗೆ ದೇವಸ್ಥಾನದ ಹೆಸರು ಮುದ್ರಿಸಿದ ಕಾಗದದ ಲಕೋಟೆಗಳಲ್ಲಿ ಕನಿಷ್ಠ 50 ಗ್ರಾಂನಷ್ಟು ನೀಡಬೇಕು. ಅದಕ್ಕೆ ತಗಲುವ ವೆಚ್ಚವನ್ನು ಆಯಾ ದೇವಾಲಯದ ನಿಧಿಯಿಂದ ನಿಯಮಾನುಸಾರ ಭರಿಸಬೇಕು ಎಂದು ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ನಕಲಿ ದಾಖಲೆ: ಸರ್ಕಾರಿ ಜಾಗ ಕಬಳಿಕೆ

ಇಬ್ಬರು ಶಿರಸ್ತೇದಾರ್ ಸೇರಿ ಐವರ ಬಂಧನ
• 10 ಆರೋಪಿಗಳ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಮಂಡ್ಯ: 'ರೆಕಾರ್ಡ್ ರೂಮ್‌ನಲ್ಲಿದ್ದ ಮೂಲ ದಾಖಲೆಗಳನ್ನು ತಿದ್ದಿ, ನಕಲಿ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಿ ಜಾಗ ಕಬಳಿಸಿದ್ದಾರೆ. ಈ ಮೂಲಕ ಸರ್ಕಾರಕ್ಕೆ ₹200 ಕೋಟಿ ನಷ್ಟ ಉಂಟು ಮಾಡಿದ್ದಾರೆ' ಎಂಬ ಆರೋಪದ ಮೇರೆಗೆ ಇಬ್ಬರು ಶಿರಸ್ತೇದಾರ್ ಸೇರಿ ಐವರು ಸರ್ಕಾರಿ ನೌಕರರನ್ನು ನಾಗಮಂಗಲ ಪಟ್ಟಣ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ನಾಗಮಂಗಲ ತಾಲ್ಲೂಕು ಕಚೇರಿಯ ಶಿರಸ್ತೇದಾರ್‌ಗಳಾದ ರವಿಶಂಕರ್, ಉಮೇಶ್, ದ್ವಿತೀಯ ದರ್ಜೆ ಸಹಾಯಕರಾದ ಸತೀಶ್ ಎಚ್.ವಿ., ಗುರುಮೂರ್ತಿ ಮತ್ತು ಕಾಂತಾಪುರ ವೃತ್ತದ ಗ್ರಾಮ ಸಹಾಯಕ ಎಸ್.ಯೋಗೇಶ್ ಬಂಧಿತರು. ಈ ಐವರೊಂದಿಗೆ ದ್ವಿತೀಯ ದರ್ಜೆ ಸಹಾಯಕರಾದ ಯೋಗೇಶ್, ವಿಜಯ್ ಕುಮಾರ್, ಯಶವಂತ್, ಮೈಸೂರಿನ ಪತ್ರ ಬರಹಗಾರ ಚಿನ್ನಸ್ವಾಮಿ, ಮಹಮ್ಮದ್ ವಸೀಂ ಉಲ್ಲಾ ಸೇರಿ ಒಟ್ಟು 10 ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ನಸುಕಿನವರೆಗೂ ಕಾರ್ಯಾಚರಣೆ: ಅಕ್ರಮವಾಗಿ ಸರ್ಕಾರಿ ಜಮೀನು ಮಂಜೂರು ಮಾಡಿ, ಅಧಿಕಾರ ದುರುಪಯೋಗ ಮಾಡಿಕೊಂಡಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿದ್ದವು. ಈ ದೂರುಗಳನ್ನು ಆಧರಿಸಿ ಮಂಡ್ಯ ಲೋಕಾಯುಕ್ತ ಪೊಲೀಸರು ಮಂಗಳವಾರ ಶೋಧ ಕಾರ್ಯ ನಡೆಸಿದರು. ಮಂಗಳವಾರ ಮಧ್ಯಾಹ್ನ 1ರಿಂದ ಬುಧವಾರ ನಸುಕಿನ 5 ಗಂಟೆವರೆಗೆ ಶೋಧ ಕಾರ್ಯ ನಡೆಸಿ ಅಕ್ರಮವನ್ನು ಸಾಕ್ಷಿ ಸಮೇತ ಬಯಲಿಗೆಳೆದಿದ್ದಾರೆ.

ನಾಗಮಂಗಲ ತಾಲ್ಲೂಕು ಕಚೇರಿ, ಆರೋಪಿತ ನೌಕರರ ಮನೆಗಳು, ಜೆರಾಕ್ಸ್ ಸೆಂಟರ್, ಮೈಸೂರು ನಗರದ ಅಗ್ರಹಾರದ 'ಹೋಟೆಲ್ ರಾಜರತ್ನ' ಸೇರಿ ಒಟ್ಟು ಏಳು ಕಡೆ ಏಕಕಾಲದಲ್ಲಿ ಪೊಲೀಸರು ಕಾರ್ಯಾಚರಣೆ ನಡೆಸಿದರು.

ಮುಖ್ಯಾಂಶಗಳು

- ಸರ್ಕಾರಕ್ಕೆ ₹200 ಕೋಟಿ ಆರ್ಥಿಕ ನಷ್ಟ
- ಆರೋಪಿಗಳಿಗೆ 14 ದಿನ ನ್ಯಾಯಾಂಗ ಬಂಧನ
- ಲೋಕಾಯುಕ್ತದಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲು



ನಾಗಮಂಗಲ ತಾಲ್ಲೂಕು ಕಚೇರಿಯಲ್ಲಿ ದಾಖಲೆ ಪರಿಶೀಲಿಸಿದ ಲೋಕಾಯುಕ್ತ ಪೊಲೀಸರು

'5 ವರ್ಷಗಳಿಂದ ನಕಲಿ ದಾಖಲೆ ಸೃಷ್ಟಿ'

ಗ್ರಾಮ ಸಹಾಯಕ ಎಸ್. ಯೋಗೇಶ್ ಅವರನ್ನು ಲೋಕಾಯುಕ್ತ ಪೊಲೀಸರು ವಿಚಾರಣೆಗೆ ಒಳಪಡಿಸಿದಾಗ, 'ಎಸ್‌ಡಿಎಗಳಾದ ಯೋಗೇಶ್, ಸತೀಶ್, ಪತ್ರ ಬರಹಗಾರ ಚಿನ್ನಸ್ವಾಮಿ, ಯಶವಂತ್, ವಿಜಯ್‌ಕುಮಾರ್ ಅವರು ಸೇರಿ 2020ನೇ ಸಾಲಿನಿಂದ ಈವರೆಗೆ ಈ ಕೃತ್ಯ ಎಸಗಿದ್ದಾರೆ. ಸರ್ಕಾರಿ ಜಮೀನು ಹಾಗೂ ಗೋಮಾಳವನ್ನು ಮಂಜೂರು ಮಾಡಿಸಿಕೊಡುವ ಉದ್ದೇಶದಿಂದ ನಕಲಿ ಸಾಗುವಳಿ ಚೀಟಿಗಳನ್ನು ಸೃಷ್ಟಿಸಿದ್ದಾರೆ. ನಕಲಿ ಸೀಲ್ ಮತ್ತು ನಕಲಿ ಸಹಿಗಳನ್ನು ಮಾಡಿ ತಾಲ್ಲೂಕು ಕಚೇರಿಯ ಅಭಿಲೇಖಾಲಯದ ದಾಖಲೆಗಳೊಂದಿಗೆ ಸೇರಿಸಲಾಗುತ್ತಿತ್ತು' ಎಂದು ಮಾಹಿತಿ ನೀಡಿದ್ದಾರೆ.

ಹೋಟೆಲ್ ಕ್ಯಾಶ್ ಕೌಂಟರ್ ಟೇಬಲ್‌ನಲ್ಲಿ ನಾಗಮಂಗಲ ತಾಲ್ಲೂಕು ಕಚೇರಿಗೆ ಸಂಬಂಧಿಸಿದ ದಾಖಲೆಗಳು, ಜಮೀನು ಮಂಜೂರಾತಿಗೆ ಸಂಬಂಧಿಸಿದ ಖಾಲಿ ನಮೂನೆಗಳು, ತಹಶೀಲ್ದಾರ್, ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕರ ಹೆಸರಿನ ರಬ್ಬರ್ ಸೀಲ್‌ಗಳು ಪತ್ತೆಯಾಗಿವೆ. ಮನೆ ಮತ್ತು ಕಚೇರಿಗಳಲ್ಲಿ ನಕಲಿ ಚಲನ್‌ಗಳು, ಖಾಲಿ ಚೆಕ್, ಸಾಗುವಳಿ ಚೀಟಿ, ತಿಳಿವಳಿಕೆ ನೋಟಿಸ್ ಹಾಗೂ ನಕಲಿ ದಾಖಲೆಗಳು ಸಿಕ್ಕಿವೆ ಎಂದು ಎಫ್‌ಐಆರ್‌ನಲ್ಲಿ ನಮೂದಿಸಲಾಗಿದೆ.

320 ಎಕರೆ ಗುಳುಂ: 'ನಾಗಮಂಗಲ ತಾಲ್ಲೂಕಿನಲ್ಲಿ ಸುಮಾರು 50 ಸರ್ವೆ ನಂಬರ್‌ಗಳಿಗೆ ಸಂಬಂಧಿಸಿದ 320ಕ್ಕೂ ಹೆಚ್ಚು ಎಕರೆ ಸರ್ಕಾರಿ ಜಾಗ ಮತ್ತು ಗೋಮಾಳವನ್ನು ಬಗರ್‌ಹುಕುಂ ಸಾಗುವಳಿ ಯೋಜನೆಯಡಿ ಅಕ್ರಮವಾಗಿ ಕಬಳಿಸಿದ್ದಾರೆ. ಹಣ ಪಡೆದುಕೊಂಡು 5 ಎಕರೆ, 8 ಎಕರೆ, 10 ಎಕರೆಯಂತೆ ಭೂಮಿ ಮಂಜೂರು ಮಾಡಿಕೊಟ್ಟಿದ್ದಾರೆ. ತನಿಖೆ ಪೂರ್ಣಗೊಂಡ ನಂತರ ಸತ್ಯಾಂಶ ಹೊರಬರಲಿದೆ' ಎಂದು ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

> **ಸರ್ಕಾರಿ ನೌಕರರು ಮೂಲ ದಾಖಲೆಗಳನ್ನು ಅಕ್ರಮವಾಗಿ ತಿದ್ದಿ, ಅಪರಾಧ ಕೃತ್ಯ ಎಸಗಿದ್ದಾರೆ. ಲೋಕಾಯುಕ್ತದಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದೇವೆ**
> **ಬಿ.ವೀರಪ್ಪ,** ಉಪಲೋಕಾಯುಕ್ತ

> **ಕೃತ್ಯದಲ್ಲಿ ಭಾಗಿಯಾದ ನಾಲ್ವರು ನೌಕರರನ್ನು ಅಮಾನತುಗೊಳಿಸಲಾಗಿದೆ. ಶಿರಸ್ತೇದಾರರ ವಿರುದ್ಧ ಕ್ರಮಕ್ಕೆ ಆರ್‌ಸಿಗೆ ಪತ್ರ ಬರೆಯಲಾಗಿದೆ**
> **ಕುಮಾರ,** ಜಿಲ್ಲಾಧಿಕಾರಿ, ಮಂಡ್ಯ

ಸುದ್ದಿ 2 ನಿಮಿಷ

ಫೆ.13ರಿಂದ ಹಂಪಿ ಉತ್ಸವ

ಹೊಸಪೇಟೆ (ವಿಜಯನಗರ): 'ಈ ಬಾರಿಯ ಹಂಪಿ ಉತ್ಸವ ಫೆಬ್ರುವರಿ 13 ರಿಂದ 15ರವರೆಗೆ ನಡೆಯಲಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಬುಧವಾರ ಇಲ್ಲಿ ಪ್ರಕಟಿಸಿದರು. ಉತ್ಸವದ ಲಾಂಛನವನ್ನೂ ಬಿಡುಗಡೆ ಮಾಡಿದರು.

'ಫೆಬ್ರುವರಿ 13ರ ಸಂಜೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉತ್ಸವ ಉದ್ಘಾಟಿಸುವರು. ಉತ್ಸವಕ್ಕೆ ₹22 ಕೋಟಿ ಅನುದಾನ ಕೇಳಿದ್ದೇವೆ. ಕೊಟ್ಟೂರು ರಥೋತ್ಸವ ಫೆಬ್ರುವರಿ 12ರಂದು ಇದ್ದರೂ, ಹಂಪಿ ಉತ್ಸವದ ಭದ್ರತೆಗೆ ತೊಂದರೆ ಆಗದಂತೆ ಬದಲಿ ವ್ಯವಸ್ಥೆ ಮಾಡಲಾಗುವುದು. ಉತ್ಸವವನ್ನು ಮುಂದೂಡುವುದಿಲ್ಲ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.



ಸಂಸದ ಇ.ತುಕಾರಾಂ, ಶಾಸಕರಾದ ಲತಾ ಮಲ್ಲಿಕಾರ್ಜುನ, ಜೆ.ಎನ್.ಗಣೇಶ್, ಭರತ್ ರೆಡ್ಡಿ, ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ, ಎಸ್ಪಿ ಎಸ್.ಜಾಹ್ನವಿ, ಜಿಲ್ಲಾ ಪಂಚಾಯಿತಿ ಸಿಇಒ ನೊಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಂ ಷಾ, 'ಹುಡಾ' ಅಧ್ಯಕ್ಷ ಎಚ್.ಎನ್.ಎಫ್.ಮೊಹಮ್ಮದ್ ಇಮಾಂ ನಿಯಾಜಿ ಇದ್ದರು.

ಲಕ್ಕುಂಡಿ ಚಿನ್ನ ವಿಜಯನಗರ ಕಾಲದ್ದಿರಬಹುದು: ಜಿಲ್ಲಾಧಿಕಾರಿ

ಗದಗ: 'ಲಕ್ಕುಂಡಿಯಲ್ಲಿ ನಿಧಿ ರೂಪದಲ್ಲಿ ಸಿಕ್ಕ ಚಿನ್ನಾಭರಣವನ್ನು ಪುರಾತತ್ವ ಇಲಾಖೆ ಅಧಿಕಾರಿಗಳು ಮಂಗಳವಾರ ರಾತ್ರಿ ಪರಿಶೀಲಿಸಿದ್ದು, ಇವು ವಿಜಯನಗರ ಸಾಮ್ರಾಜ್ಯ ಕಾಲಘಟ್ಟದ್ದು ಇರಬಹುದೆಂದು ಅಂದಾಜಿಸಿದ್ದಾರೆ' ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದ್ದಾರೆ.

'ಭಾರತೀಯ ಪುರಾತತ್ವ ಇಲಾಖೆಯ ಉಪ ಅಧೀಕ್ಷಕ ಹಾಗೂ ರಾಜ್ಯ ಪುರಾತತ್ವ ಇಲಾಖೆ ನಿರ್ದೇಶಕ ಮತ್ತು ಅವರ ತಂಡದವರು ಆಭರಣಗಳ ಫೋಟೊಗ್ರಫಿ ಮತ್ತು ವಿಡಿಯೊಗ್ರಫಿ ಮಾಡಿದ್ದಾರೆ. ಅವುಗಳ ಬಗ್ಗೆ ಇನ್ನಷ್ಟು ಅಧ್ಯಯನ ನಡೆಸಿ, ಮೂರು ದಿನಗಳಲ್ಲಿ ವಿವರವಾದ ವರದಿ ನೀಡುವರು' ಎಂದು ಅವರು ತಿಳಿಸಿದರು.

'ಅಧಿಕಾರಿಗಳು ವರದಿ ಕೊಟ್ಟ ಬಳಿಕವಷ್ಟೇ ಅದು ನಿಧಿ ಅಥವಾ ಅಲ್ಲವೇ ಎಂಬುದು ಗೊತ್ತಾಗಲಿದೆ. ಒಂದು ವೇಳೆ ಈ ಚಿನ್ನಾಭರಣ ತಮ್ಮ ವಂಶಸ್ಥರದ್ದು ಎಂದು ದಾಖಲೆಗಳನ್ನು ತಂದುಕೊಟ್ಟು ಸಾಬೀತು ಪಡಿಸಿದರೆ, ಆಗ ಸರ್ಕಾರದ ತೀರ್ಮಾನ ಬೇರೆ ಇರುತ್ತದೆ' ಎಂದು ಹೇಳಿದರು.

'ಆಭರಣಗಳ ಮೇಲೆ ಮಣ್ಣು ಮೆತ್ತಿಕೊಂಡಿದ್ದರಿಂದ ತೂಕದಲ್ಲಿ ವ್ಯತ್ಯಾಸ ಆಗಿದೆ. ಮಂಗಳವಾರ ರಾತ್ರಿ ತೂಕ ಮಾಡಿದಾಗ ಆಭರಣಗಳು 462 ಗ್ರಾಂ ತೂಗಿದೆ. ಆಭರಣಗಳನ್ನು ಪೂರ್ಣ ಸ್ವಚ್ಛಗೊಳಿಸಿದರೆ, ಅದರ ನಿಖರ ತೂಕ ಗೊತ್ತಾಗಲಿದೆ' ಎಂದು ಹೇಳಿದರು.

ಹುಳಿಮಾವು ಠಾಣೆಯ ಪೊಲೀಸರ ಕಾರ್ಯಾಚರಣೆ, 12 ಮಂದಿ ಬಂಧನ

₹240 ಕೋಟಿ ವಂಚನೆ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಸಾರ್ವಜನಿಕರ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು (ಮ್ಯೂಲ್ ಖಾತೆ) ತೆರೆದು ವಂಚಿಸುತ್ತಿದ್ದ ವಿವಿಧ ರಾಜ್ಯಗಳ 12 ಮಂದಿಯನ್ನು ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಹುಳಿಮಾವು ಠಾಣೆ ಪೊಲೀಸರು ಬಂಧಿಸಿ, ಬ್ಯಾಂಕ್‌ನಲ್ಲಿದ್ದ ₹240 ಕೋಟಿ ವಹಿವಾಟು ಸ್ಥಗಿತಗೊಳಿಸಿದ್ದಾರೆ.

ಬೃಹತ್ ಸೈಬರ್ ವಂಚನೆಯ ಜಾಲವನ್ನು ಪತ್ತೆಹಚ್ಚುವಲ್ಲಿ ನಗರ ಪೊಲೀಸರು ಯಶಸ್ವಿ ಆಗಿದ್ದಾರೆ.

ಬೆಂಗಳೂರಿನ ಜೆ.ಪಿ.ನಗರದ 9ನೇ ಹಂತದ ಅಂಜನಾಪುರದ ನಿವಾಸಿ ಮೊಹಮ್ಮದ್ ಹುಜೈಫಾ ಮತ್ತು ಅವರ ತಾಯಿ ಶಬಾನಾ, ಉತ್ತರ ಪ್ರದೇಶದ ಅಂಕಿತ್‌ಕುಮಾರ್ ಸಿಂಗ್ (32), ಬಿಹಾರದ ಅಜಿತ್‌ಕುಮಾರ್ ಯಾದವ್ (29), ರಾಜಸ್ಥಾನದ ಅಭಿಷೇಕ್ ಸಿಂಗ್ ರಾಥೋಡ್ (22), ವಿಶ್ವರಾಜ್‌ಸಿಂಗ್ (28), ಕುಶಾಲ್‌ಸಿಂಗ್ ಚೌಹಾಣ್ (26), ರಾಜಸ್ಥಾನದ ಪ್ರದೀಪ್‌ಕುಮಾರ್ ಸಿಂಗ್ (30), ಪಿತಾಂಬರ್ ಸಿಂಗ್ (30), ಅಜಯ್‌ಕುಮಾರ್ (30) ಹಾಗೂ ಜಾರ್ಖಂಡ್‌ನ ಸತ್ಯಂಕುಮಾರ್ ಪಾಂಡೆ (27), ಉತ್ತರಪ್ರದೇಶದ ಆಕಾಶ್ ಜೈಸ್ವಾಲ್ (29) ಬಂಧಿತರು.

ಆರೋಪಿಗಳು, ಬೆಂಗಳೂರಿನ ವ್ಯಕ್ತಿಗೆ ₹3.20 ಕೋಟಿ ವಂಚಿಸಿದ್ದರು. ಪ್ರಕರಣದ ಸಂಬಂಧ ಹುಳಿಮಾವು ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಎಫ್‌ಐಆರ್ ದಾಖಲಾಗಿದ್ದವು. ಖಚಿತ ಸುಳಿವು ಹಾಗೂ ತಾಂತ್ರಿಕ ನೆರವು ಆಧರಿಸಿ ತನಿಖೆ ನಡೆಸಿದಾಗ, ಕಾನೂನು ಬಾಹಿರವಾಗಿ ಸಾರ್ವಜನಿಕರ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆದು ವಂಚಿಸುತ್ತಿರುವುದು ಹಾಗೂ ಹೂಡಿಕೆ ಹೆಸರಿನಲ್ಲಿ ದೇಶದ ನಾನಾ ಭಾಗದ ಜನರಿಗೆ ಕರೆ ಮಾಡಿ ವಂಚನೆ ನಡೆಸುತ್ತಿರುವುದು ಪತ್ತೆ ಆಯಿತು ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಮಾಹಿತಿ ನೀಡಿದ್ದಾರೆ.

'ಬ್ಯಾಂಕ್‌ನಲ್ಲಿದ್ದ ₹240 ಕೋಟಿ ವಹಿವಾಟನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ. ಬೆಂಗಳೂರಿನ ವ್ಯಕ್ತಿಯೊಬ್ಬರಿಗೆ ಆರೋಪಿಗಳು ವಂಚಿಸಿದ್ದ ₹94 ಲಕ್ಷ ವಾಪಸ್ ಪಡೆಯಲಾಗಿದೆ. ಇನ್ನೂ ಹೆಚ್ಚಿನ ವಂಚನೆ ನಡೆದಿರುವ ಸಾಧ್ಯತೆಯಿದ್ದು, ಬೆಂಗಳೂರಿಗೆ ಸಂಬಂಧಿಸಿದಂತೆ ₹24 ಕೋಟಿ ವಂಚನೆ ಕುರಿತು ತನಿಖೆ ಮುಂದುವರಿಸಲಾಗಿದೆ. 9 ಸಾವಿರ ಖಾತೆಗಳಿಗೆ ಹಣ ವರ್ಗಾವಣೆ ಆಗಿರುವುದು ಪತ್ತೆಯಾಗಿದೆ' ಎಂದು ಪೊಲೀಸರು ಹೇಳಿದರು.

'ದೆಹಲಿಯ ಓಲ್ಡ್ ರಾಜೇಂದ್ರ ನಗರದಲ್ಲಿ ಕಾಲ್‌ಸೆಂಟರ್ ನಡೆಸುತ್ತಿದ್ದ ಆರೋಪಿಗಳು, ಜನರಿಗೆ ಕರೆ ಮಾಡಿ ಹೂಡಿಕೆ ಯೋಜನೆಗಳ ಬಗ್ಗೆ ತಿಳಿಸಿ ಆಕರ್ಷಿಸುತ್ತಿದ್ದರು. ನಂತರ, ತಮ್ಮದೇ ಅನಧಿಕೃತ ಆ್ಯಪ್ ಇನ್‌ಸ್ಟಾಲ್ ಮಾಡಿಸಿ, ಅದರ ಮೂಲಕ ಹೂಡಿಕೆ ಮಾಡಿಸುತ್ತಿದ್ದರು. ಹಣ ಹೂಡಿಕೆ ಮಾಡಿದವರಿಗೆ ಆರಂಭದಲ್ಲಿ ಅಲ್ಪ ಪ್ರಮಾಣದಲ್ಲಿ ಲಾಭಾಂಶ ನೀಡುವ ಮೂಲಕ ನಂಬಿಕೆ ಗಳಿಸುತ್ತಿದ್ದರು' ಎಂದು ಮೂಲಗಳು ಹೇಳಿವೆ.

'ಹೆಚ್ಚು ಹಣ ಹೂಡಿಕೆ ಮಾಡಿದ ಬಳಿಕ ವಾಪಸ್ ಪಡೆಯುವ ಅವಕಾಶ ನೀಡುತ್ತಿರಲಿಲ್ಲ. ಇದೇ ರೀತಿ ನೂರಾರು ಜನರಿಗೆ ವಂಚಿಸಿದ್ದ ಆರೋಪಿಗಳ ವಿರುದ್ಧ ದೇಶದ ವಿವಿಧ ಪೊಲೀಸ್ ಠಾಣೆ ಹಾಗೂ ರಾಷ್ಟ್ರೀಯ ಸೈಬರ್ ಕ್ರೈಂ ಸಹಾಯವಾಣಿಯಲ್ಲಿ ಪ್ರಕರಣಗಳು ದಾಖಲಾಗಿದ್ದವು' ಎಂದು ಪೊಲೀಸರು ಹೇಳಿದರು.

ವಂಚನೆಯಲ್ಲಿ ತಾಯಿ, ಮಗನ ಪಾತ್ರ

ವಂಚನೆ ಪ್ರಕರಣದ ತನಿಖೆ ಆರಂಭಿಸಿದಾಗ ಹಣ ವರ್ಗಾವಣೆಯಾಗಿದ್ದ ಖಾತೆಗಳ ಸುಳಿವು ಸಿಕ್ಕಿತ್ತು. ಮೊಹಮ್ಮದ್ ಹುಜೈಫಾ ಮತ್ತು ಅವರ ತಾಯಿ ಶಬಾನಾ ಅವರನ್ನು ಮೊದಲಿಗೆ ಬಂಧಿಸಲಾಯಿತು. ಪ್ರಮುಖ ಆರೋಪಿಗಳ ಸೂಚನೆಯಂತೆ ತಾಯಿ ಹಾಗೂ ಮಗ ಬ್ಯಾಂಕ್‌ಗೆ ತೆರಳಿ ಖಾತೆ ತೆರೆಯುವ ಕೆಲಸ ಮಾಡುತ್ತಿದ್ದರು. ಸಾರ್ವಜನಿಕರಿಂದ ದಾಖಲೆಗಳನ್ನೂ ಪಡೆದುಕೊಳ್ಳುತ್ತಿದ್ದರು. ದಾಖಲೆ ನೀಡಿದವರಿಗೆ ಕಮಿಷನ್ ರೂಪದಲ್ಲಿ ಹಣ ನೀಡುತ್ತಿದ್ದರು. ಮೊಹಮ್ಮದ್ ಹುಜೈಫಾ ಮತ್ತು ಶಬಾನಾ ಅವರು ನೀಡಿದ ಮಾಹಿತಿ ಮೇಲೆ ದೇಶದ ವಿವಿಧ ರಾಜ್ಯಗಳಲ್ಲಿ ಕಾರ್ಯಾಚರಣೆ ನಡೆಸಿ ಉಳಿದ 10 ಮಂದಿಯನ್ನು ಬಂಧಿಸಲಾಯಿತು ಎಂದು ಮೂಲಗಳು ಹೇಳಿವೆ.

ಆರೋಪಿಗಳಿಂದ ಜಪ್ತಿ ಮಾಡಿದ್ದು...

- 58 ಮೊಬೈಲ್ ಫೋನ್
- 242 ಡೆಬಿಟ್ ಕಾರ್ಡ್
- ಏಳು ಲ್ಯಾಪ್‌ಟಾಪ್
- 530 ಗ್ರಾಂ ಚಿನ್ನಾಭರಣ
- ₹4.89 ಲಕ್ಷ ನಗದು
- 33 ಚೆಕ್‌ಬುಕ್
- ವಿವಿಧ ಬ್ಯಾಂಕ್‌ಗಳ 21 ಪಾಸ್‌ಬುಕ್
- ವಿದೇಶದ ಏಳು ವಾಚ್‌ಗಳು
- ಒಂದು ಆನ್‌ಲೈನ್ ಡಿಜಿಟಲ್ ಪೇಮೆಂಟ್ ರಿಂಗ್
- ಒಂದು ಕ್ರಿಪ್ಟೊ ಕರೆನ್ಸಿ ಲೆಡ್ಜರ್

'ಪ್ರಾರ್ಥನೆ ವಿಫಲವಾಗದು'

ಬೆಂಗಳೂರು: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿಯಾದ ತರುವಾಯ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡ ಸಂದೇಶ ರಾಜಕೀಯ ಚರ್ಚೆಯನ್ನು ಹುಟ್ಟುಹಾಕಿದೆ.



ಡಿ.ಕೆ. ಶಿವಕುಮಾರ್

ತಮಿಳುನಾಡಿನ ಕಾರ್ಯಕ್ರಮಕ್ಕಾಗಿ ಬಂದಿದ್ದ ರಾಹುಲ್ ಗಾಂಧಿ ಅವರನ್ನು ಮಾರ್ಗಮಧ್ಯೆ ಮೈಸೂರು ವಿಮಾನ ನಿಲ್ದಾಣದ ರನ್‌ವೇಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಮಂಗಳವಾರ ಭೇಟಿಯಾಗಿದ್ದರು. ಈ ವೇಳೆ, ಇಬ್ಬರು ನಾಯಕರ ಜತೆಗೆ ರಾಹುಲ್ ಪ್ರತ್ಯೇಕವಾಗಿ ಚರ್ಚೆ ನಡೆಸಿದ್ದರು.

ಶಿವಕುಮಾರ್ ಅವರನ್ನು ಸ್ವಲ್ಪ ದೂರಕ್ಕೆ ಕರೆದುಕೊಂಡು ಹೋಗಿದ್ದ ರಾಹುಲ್ ಚರ್ಚೆ ನಡೆಸಿದ್ದರು. ಇದರ ವಿಡಿಯೊ ಮತ್ತು ಫೋಟೋಗಳನ್ನು ಶಿವಕುಮಾರ್ ಅವರ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗಿತ್ತು.

ಬುಧವಾರ ಬೆಳಿಗ್ಗೆಯೇ 'ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲ ಆಗುವುದಿಲ್ಲ' ಎಂಬ ಪೋಸ್ಟರ್ ಅನ್ನು ಶಿವಕುಮಾರ್ ಅವರ ಜಾಲತಾಣದಲ್ಲಿ ಹಂಚಿಕೊಳ್ಳಲಾಗಿತ್ತು. ಅದೇ ಹೊತ್ತಿನೊಳಗೆ ಅವರ ಸೋದರ, ಬಮುಲ್ ಅಧ್ಯಕ್ಷ ಡಿ.ಕೆ.ಸುರೇಶ್ ಅವರು, 'ಯಶಸ್ಸಿನ ಮೊದಲ ಹೆಜ್ಜೆಯೇ ಪ್ರಯತ್ನ, ಸತತ ಪ್ರಯತ್ನದ ಫಲವೇ ಯಶಸ್ಸು' ಎಂಬ ಪೋಸ್ಟರ್ ಅನ್ನು ಹಂಚಿಕೊಂಡರು. ಈ ಪೋಸ್ಟ್‌ಗಳನ್ನು ತಮ್ಮ ಜಾಲತಾಣಗಳಲ್ಲಿ ಹಂಚಿಕೊಂಡ ಅವರ ಬೆಂಬಲಿಗರು, ಅದನ್ನು ಪ್ರಸಾರ ಮಾಡಿದರು. ಬೆಂಬಲ, ಟೀಕೆಗಳು ಸಾಕಷ್ಟು ಸಂಖ್ಯೆಯಲ್ಲಿ ವ್ಯಕ್ತವಾದವು.

ಪೋಸ್ಟ್ ಕುರಿತು ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲ ಆಗುವುದಿಲ್ಲ ಎಂಬ ಮಾತನ್ನು ಒಕ್ಕಲಿಗ ಉದ್ಯಮಿ ಕಾರ್ಯಕ್ರಮದಲ್ಲಿ ಅಲ್ಲಿದ್ದ ಉದ್ಯಮಿಗಳಿಗೆ ಹೇಳಿದ್ದೆ. ಅದನ್ನು ಹಿಂದೆಯೂ ಹೇಳಿದ್ದೇನೆ' ಎಂದರು.

'ಸಂದೇಶ ನೀಡಿಲ್ಲ': 'ರಾಹುಲ್ ಗಾಂಧಿ ಅವರು ನಮಗೆ ಯಾವುದೇ ಸಂದೇಶ ನೀಡಿಲ್ಲ. ನಾವು ಯಾವ ಸಂದೇಶವನ್ನೂ ಕೊಟ್ಟಿಲ್ಲ' ಎಂದು ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಚೆನ್ನಾಗಿ ಕೆಲಸ ಮಾಡುತ್ತಿದ್ದೀರಿ, ಇದನ್ನೇ ಮುಂದುವರಿಸಿಕೊಂಡು ಹೋಗಿ ಎಂದು ನಮ್ಮ ನಾಯಕರು ಹೇಳಿದ್ದಾರೆ. ಇದೇ 16ರಂದು ದೆಹಲಿಗೆ ಹೋಗುತ್ತಿದ್ದೇನೆ' ಎಂದರು.

ಅಂಗ ನಿರ್ಧರಣಾ ಸಲಹಾ ಗುಂಪು: ಡಾ.ಶ್ರೀಧರ್‌ಗೆ ಕೊಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗ ನಿರ್ಧರಣಾ ಸಮಿತಿಯ ಸಲಹಾ ಗುಂಪಿನಿಂದ ನೆಫ್ರೊ ಯುರಾಲಜಿ ಸಂಸ್ಥೆಯ ಪ್ರಾಧ್ಯಾಪಕ ಡಾ.ಸಿ.ಜಿ.ಶ್ರೀಧರ್ ಅವರನ್ನು ಕೈಬಿಡಲಾಗಿದೆ.

ಆರೋಗ್ಯ ಇಲಾಖೆ ಅಂಗ ನಿರ್ಧರಣಾ ಸಮಿತಿ ರಚಿಸಿ ಈಚೆಗೆ ಆದೇಶ ಹೊರಡಿಸಿತ್ತು. ಏಳು ಅಂಗ ಸಮಿತಿಗೆ ಸಲಹಾ ಗುಂಪು ರಚನೆ ಮಾಡಲಾಗಿತ್ತು. ಅದರಲ್ಲಿ ಮೂತ್ರಪಿಂಡ ಸಲಹಾ ಗುಂಪಿನಲ್ಲಿ ನೆಫ್ರೊ ಯುರಾಲಜಿ ಸಂಸ್ಥೆಯ ಪ್ರಾಧ್ಯಾಪಕ ಡಾ.ಸಿ.ಜಿ.ಶ್ರೀಧರ್ ಇದ್ದರು.

ನೆಫ್ರೊ ಯುರಾಲಜಿ ಸಂಸ್ಥೆಯ ಸಿ.ಜಿ.ಶ್ರೀಧರ್, ಆರ್.ಕೇಶವ ಮೂರ್ತಿ, ಪ್ರದೀಪ್, ಕಿಶನ್ ಹಾಗೂ ಶ್ರೀನಿವಾಸನ್ ವಿರುದ್ಧ ಡಾ.ಸುಜಾತಾ ಸಿದ್ದಪ್ಪ ಅವರು 2021ರಲ್ಲಿ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದರು. ಈ ದೂರು ಆಧರಿಸಿ ಲೋಕಾಯುಕ್ತ ಸಂಸ್ಥೆ ತನಿಖೆ ನಡೆಸಿತ್ತು. ವೈದ್ಯರ ವಿರುದ್ಧ ಆರೋಪ ಸಾಬೀತಾಗಿದ್ದು, ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಈ ವರದಿಯನ್ನು ಅಧ್ಯಯನ ಮಾಡಿದ ವೈದ್ಯಕೀಯ ಶಿಕ್ಷಣ ಇಲಾಖೆಯು ಆರೋಪಿತ ವೈದ್ಯರ ವಿರುದ್ಧ ಜಂಟಿ ಇಲಾಖೆ ವಿಚಾರಣೆ ನಡೆಸಿದೆ. ಹಾಗಾಗಿ, ಶ್ರೀಧರ್ ಅವರನ್ನು ಕೈಬಿಡಲಾಗಿದೆ.

ಸಂಕ್ರಾಂತಿ ಜಾತ್ರೆ

ಪ್ರಜಾವಾಣಿ ಚಿತ್ರ: ರಾಜಕುಮಾರ ನಳ್ಳಿಕರ



ಯಾದಗಿರಿ ತಾಲ್ಲೂಕಿನ ಮೈಲಾಪುರದ ಮೈಲಾರಲಿಂಗೇಶ್ವರರ ಸಂಕ್ರಾಂತಿಯ ಜಾತ್ರೆ ಅಂಗವಾಗಿ ಬುಧವಾರ ನಡೆದ ಪಲ್ಲಕ್ಕಿ ಹಾಗೂ ಉತ್ಸವ ಮೂರ್ತಿಯ ಮೆರವಣಿಗೆಯಲ್ಲಿ ಸೇರಿದ ಜನಸ್ತೋಮ

ಗ್ರಾಮ ಲೆಕ್ಕಾಧಿಕಾರಿ ಅಮಾನತು

ಬೆಳಗಾವಿ: ರೈತ ಬದುಕಿದ್ದಾಗಲೇ ಸತ್ತಿರುವುದಾಗಿ ದಾಖಲೆ ಸೃಷ್ಟಿಸಿ, ದೃಢೀಕರಿಸಿದ ಆರೋಪದ ಮೇಲೆ ಸವದತ್ತಿ ತಾಲ್ಲೂಕಿನ ಸುತಗಟ್ಟಿ ಗ್ರಾಮ ಲೆಕ್ಕಾಧಿಕಾರಿ ನೀಲಾ ಮುರಗೋಡ ಅವರನ್ನು ಅಮಾನತುಗೊಳಿಸಿ, ಜಿಲ್ಲಾಧಿಕಾರಿ ಬುಧವಾರ ಆದೇಶ ಹೊರಡಿಸಿದ್ದಾರೆ.

ಪುತ್ರ ಬಸವರಾಜ ಈರಪ್ಪ ಅಬ್ಬಾಯಿ ಅವರು ನಿಧನರಾದಾಗ, ಅವರ ಹೆಸರಿನಲ್ಲಿ ಮರಣ ಪ್ರಮಾಣ ಪತ್ರ ಪಡೆಯಲು ಅವರ ತಂದೆ ಈರಪ್ಪ ನಾಗಪ್ಪ ಅಬ್ಬಾಯಿ ಅರ್ಜಿ ಸಲ್ಲಿಸಿದ್ದರು. ಆದರೆ, ಅಧಿಕಾರಿಗಳು ಬಸವರಾಜ ಹೆಸರಿನಲ್ಲಿ ಮರಣ ಪ್ರಮಾಣ ಪತ್ರ ಕೊಡುವುದರ ಜೊತೆಗೆ ಅವರ ತಂದೆ ಈರಪ್ಪ ಅವರೂ ಮೃತಪಟ್ಟಿದ್ದಾರೆಂದು ದಾಖಲೆ ಸೃಷ್ಟಿಸಿದ್ದರು.

ಉಪ ಲೋಕಾಯುಕ್ತರು ನಾಲ್ವರು ಅಧಿಕಾರಿಗಳ ವಿರುದ್ಧ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ.

'ಕಲ್ಟ್' ಫ್ಲೆಕ್ಸ್ ತೆರವು; ಪೌರಾಯುಕ್ತೆಗೆ ಧಮ್ಕಿ

ಒಂದನೇ ಪುಟದಿಂದ...

ಜಿಲ್ಲೆಯ ಸ್ಥಳೀಯ ಸಂಸ್ಥೆ ಅಧಿಕಾರಿಗಳು, ಸಿಬ್ಬಂದಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಮ್ಮ ಮಾತು ರಾಜಕೀಯ ವಿವಾದದ ಸ್ವರೂಪ ಪಡೆಯುತ್ತಲೇ ಎಚ್ಚೆತ್ತುಕೊಂಡ ರಾಜೀವ್ ಗೌಡ ಬಹಿರಂಗವಾಗಿ ಪೌರಾಯುಕ್ತೆಗೆ ಕ್ಷಮೆ ಕೋರಿದ್ದಾರೆ. 'ಫ್ಲೆಕ್ಸ್ ತೆಗೆದ ವಿಚಾರ ಕೇಳಿ ಕೋಪಗೊಂಡು ದುಡುಕಿ ಮಾತನಾಡಿದೆ. ನನ್ನಿಂದ ತಪ್ಪಾಗಿದೆ. ಪೌರಾಯುಕ್ತೆ ನನ್ನ ಸಹೋದರಿ ಇದ್ದಂತೆ. ಅವರ ಕ್ಷಮೆ ಕೋರುವೆ' ಎಂದು ಪ್ರತಿಕ್ರಿಯಿಸಿದ್ದಾರೆ.

'ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ನಾನು ಜನ ಸೇವೆ ಮಾಡುವ ಉದ್ದೇಶದಿಂದ ಆ ಕೆಲಸ ಬಿಟ್ಟು ಸರ್ಕಾರಿ ನೌಕರಿಗೆ ಬಂದೆ. ನಾವು ಕನಿಷ್ಠ ಗೌರವ ಬಯಸುತ್ತೇವೆ. ಪೌರಕಾರ್ಮಿಕರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದಾಗ ನೋವಾಗುತ್ತದೆ. ಈ ರೀತಿಯ ಬೈಗುಳ ಕೇಳಿಸಿಕೊಳ್ಳಲು ಹಿಂಸೆಯಾಗುತ್ತದೆ' ಎಂದು ಪೌರಾಯುಕ್ತೆ ಜಿ.ಅಮೃತಾ ಗೌಡ ಕಣ್ಣೀರು ಹಾಕಿದರು.

ರಾಜಕೀಯ ನೆರಳು: ಮಂಗಳವಾರ ಸಂಜೆ ಶಿಡ್ಲಘಟ್ಟದ ನೆಹರೂ ಮೈದಾನದಲ್ಲಿ 'ಕಲ್ಟ್' ಸಿನಿಮಾದ ಪ್ರಚಾರ ಸಭೆ ನಡೆದಿತ್ತು. ಕೋಟೆ ವೃತ್ತದಲ್ಲಿ ಸಿನಿಮಾ ಪ್ರಚಾರದ ಫ್ಲೆಕ್ಸ್ ಅಳವಡಿಸಲಾಗಿತ್ತು. ವಾಹನಗಳ ಸವಾರರಿಗೆ ಫ್ಲೆಕ್ಸ್ ಅಡ್ಡಿಯಾಗುತ್ತಿವೆ ಎಂದು ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆಯಲ್ಲಿ ನಗರಸಭೆ ಸಿಬ್ಬಂದಿ ಅವನ್ನು ತೆರವುಗೊಳಿಸಿದ್ದರು. ಈ ಬಗ್ಗೆ ರಾಜೀವ್ ಗೌಡ ಬೆಂಬಲಿಗ ಅಪ್ಸರ್ ಅವರಿಗೆ ಮಾಹಿತಿ ನೀಡಲಾಗಿತ್ತು.

ಇದರಿಂದ ಸಿಟ್ಟಾದ ರಾಜೀವ್ ಗೌಡ, ಪೌರಾಯುಕ್ತರಿಗೆ ಕರೆ ಮಾಡಿ, 'ನಮ್ಮ ಬ್ಯಾನರ್ ಬಿಚ್ಚಿಸಿದರೆ ಪರ್ಮಿಷನ್ ಇಲ್ಲದ ಬೇರೆ ಬ್ಯಾನರ್‌ಗೆ ಬೆಂಕಿ ಹಚ್ಚೇನಿ. ನನ್ನ ಒಳ್ಳೆಯತನ ನೋಡಿದ್ದೀರಿ, ಕೆಟ್ಟತನ ನೋಡಿಲ್ಲ. ಜನರನ್ನು ಕರೆಸಿ ದಂಗೆ ಎಬ್ಬಿಸುತ್ತೇನೆ. ಒಂದು ಸೆಕೆಂಡ್ ಇಲ್ಲಿ ಕೆಲಸ ಮಾಡೊಕ್ಕಾಗಲ್ಲ ನಿಂಗೆ' ಎಂದು ದಬಾಯಿಸಿದ್ದಾರೆ.

'ರೋಡ್ ಮಧ್ಯೆ ಬ್ಯಾನರ್ ಕಟ್ಟಿದ್ದಾರೆ. ಇದರಿಂದ ಆ್ಯಕ್ಸಿಡೆಂಟ್ ಆಗಿದೆ. ಸಾರ್ವಜನಿಕರಿಂದ ದೂರು ಬಂದಿದೆ. ಬ್ಯಾನರ್ ತೆಗೆದು ಆಫೀಸ್‌ನಲ್ಲಿ ಇಟ್ಟಿದ್ದಾರೆ. ಪಕ್ಕಕ್ಕೆ ಕಟ್ಟಿಕೊಳ್ಳಿ ಎಂದು ಹೇಳಿದ್ದೇವೆ. ಅನುಮತಿ ಪಡೆಯದೆ ಬ್ಯಾನರ್ ಕಟ್ಟಿದ್ದಾರೆ. ಅಪಘಾತ ಆದರೆ ನಾವು ಹೊಣೆ. ನೀವು ಹಿಂಗೆಲ್ಲಾ ಮಾತನಾಡಬೇಡಿ' ಎಂದು ಪೌರಾಯುಕ್ತೆ ಪ್ರತಿಕ್ರಿಯಿಸಿದ್ದಾರೆ.

ಇದರಿಂದ ಮತ್ತಷ್ಟು ಕೆರಳಿದ ರಾಜೀವ್, 'ನಾನು ಖಾಂಜಿಪಿಂಜಿ ಅಲ್ಲ. ಜನರನ್ನು ಕರೆಸಿ ಬೆಂಕಿ ಹಚ್ಚಿಸಿ, ಚಪ್ಪಲಿಯಲ್ಲಿ ಹೊಡೆಸುವೆ. ನಮ್ಮ ಬ್ಯಾನರ್ ಕಿತ್ತು ಆ ಶಾಸಕನ ಬ್ಯಾನರ್ ಕಟ್ಟಿದ್ದೀಯಾ. ಯಾರದೋ ಕೈಗೊಂಬೆಯಾಗಿ ಕೆಲಸ ಮಾಡ್ತೀರಾ. ಯಾರದೋ ಮಾತು ಕೇಳಿ ಏನೆಲ್ಲ ಮಾಡಿದ್ದೀಯಾ ಎಲ್ಲಾ ಗೊತ್ತಿದೆ' ಎಂದು ನಿಂದಿಸಿದ್ದಾರೆ. ಶಿಡ್ಲಘಟ್ಟ ಜೆಡಿಎಸ್ ಶಾಸಕ ಬಿ.ಎನ್.ರವಿಕುಮಾರ್ ಅವರನ್ನೂ ನಿಂದಿಸಿದ್ದಾರೆ.

2023ರ ವಿಧಾನಸಭೆ ಚುನಾವಣೆಯಲ್ಲಿ ರಾಜೀವ್ ಗೌಡ ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

ಎಸ್‌ಪಿಗೆ ಮಹಿಳಾ ಆಯೋಗ ಪತ್ರ

ಬೆಂಗಳೂರು: ಶಿಡ್ಲಘಟ್ಟದ ನಗರಸಭೆ ಪೌರಾಯುಕ್ತೆಗೆ ರಾಜೀವ್‌ಗೌಡ ಎಂಬಾತ ನಿಂದಿಸಿ, ಬೆದರಿಕೆ ಹಾಕಿರುವ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ರಾಜ್ಯ ಮಹಿಳಾ ಆಯೋಗವು ಚಿಕ್ಕಬಳ್ಳಾಪುರ ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರ ಬರೆದಿದೆ. 'ರಾಜೀವ್‌ಗೌಡ ಎಂಬಾತ ಪೌರಾಯುಕ್ತೆಗೆ ಕರೆ ಮಾಡಿ, ಜನರನ್ನು ಕರೆಸಿ, ಚಪ್ಪಲಿಯಲ್ಲಿ ಹೊಡೆಸುತ್ತೇನೆ. ದಂಗೆ ಎಬ್ಬಿಸುತ್ತೇನೆ ಎಂದು ಬೆದರಿಕೆ ಹಾಕಿದ್ದಾನೆ. ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿ ಎಂದು ಸಂಬಂಧಪಟ್ಟ ಪೊಲೀಸ್ ಠಾಣಾಧಿಕಾರಿಗೆ ನಿರ್ದೇಶನ ನೀಡಿ' ಎಂದು ಆಯೋಗ ಪತ್ರದಲ್ಲಿ ತಿಳಿಸಿದೆ.

> **ಯಾರೂ ಕಾನೂನಿಗಿಂತ ದೊಡ್ಡವರಲ್ಲ. ತಪ್ಪು ಮಾಡಿದವರು ಕ್ಷಮೆ ಕೇಳಬೇಕು. ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು**
> **ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ

> **ಮಹಿಳಾ ಅಧಿಕಾರಿಗಳ ಮೇಲೆ ಪದೇ ಪದೇ ದೌರ್ಜನ್ಯ ನಡೆಯುತ್ತಿದೆ. ಸರ್ಕಾರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು**
> **ಎಚ್.ಡಿ. ಕುಮಾರಸ್ವಾಮಿ,** ಕೇಂದ್ರ ಸಚಿವ

> **ಪೌರಾಯುಕ್ತೆ ಕಾನೂನು ಪ್ರಕಾರ ನಡೆದುಕೊಂಡಿದ್ದಾರೆ. ಬೆಂಕಿ ಹಚ್ಚುವುದಾಗಿ ಕಾಂಗ್ರೆಸ್ ಮುಖಂಡ ಪ್ರಾಣ ಬೆದರಿಕೆ ಹಾಕಿದ್ದಾನೆ. ಅಶ್ಲೀಲವಾಗಿ ನಿಂದಿಸಿದ್ದಾನೆ. ಇದನ್ನು ಕಾಂಗ್ರೆಸ್ ನಾಯಕರು ಖಂಡಿಸಿಲ್ಲ**
> **ಆರ್.ಅಶೋಕ,** ವಿರೋಧ ಪಕ್ಷದ ನಾಯಕ

ಶಿಕಾರಿಪುರದಲ್ಲಿ ಸ್ಪರ್ಧಿಸಲಿ

ಚಿತ್ರದುರ್ಗ: 'ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶಿಕಾರಿಪುರಕ್ಕೆ ಪಾದಯಾತ್ರೆ ಕೈಗೊಳ್ಳುವುದಾಗಿ ಹೇಳಿದ್ದಾರೆ. ಅವರು ಪಾದಯಾತ್ರೆ ನಡೆಸುವುದು ಹಾಗಿರಲಿ, ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಶಿಕಾರಿಪುರಕ್ಕೇ ಬಂದು ಸ್ಪರ್ಧೆ ಮಾಡಲಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸವಾಲು ಹಾಕಿದರು.

ಸಂಕಷ್ಟಕ್ಕೆ ಸಿಲುಕುತ್ತಿರುವ ವಾಹನ ಮಾಲೀಕರು • ಹೊಸ ಸಾಫ್ಟ್‌ವೇರ್‌ಗೆ ಸಿಗದ ಒಪ್ಪಿಗೆ

ತಂತ್ರಾಂಶದಲ್ಲಿ ಕಾಣದ 'ಹೊಗೆ ತಪಾಸಣೆ'

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ವಾಹನಗಳ ಹೊಗೆ ತಪಾಸಣೆ ನಡೆಸಿ ಪ್ರಮಾಣಪತ್ರ ಪಡೆದಿದ್ದರೂ 'ವಾಹನ್-4' ತಂತ್ರಾಂಶದಲ್ಲಿ ಕಾಣಿಸುತ್ತಿಲ್ಲ. ಹಾಗಾಗಿ ಹೊರ ರಾಜ್ಯಗಳಿಗೆ ತೆರಳುವ ವಾಹನಗಳ ಮಾಲೀಕರು ದಂಡ ಕಟ್ಟಬೇಕಾದ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಹೊಸ ತಂತ್ರಾಂಶ ಸಿದ್ಧವಾಗಿದ್ದರೂ ಅದರ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿಲ್ಲ.

ಹಳೇ ತಂತ್ರಾಂಶ ಬದಲಾಯಿಸಲು ಸಾರಿಗೆ ಇಲಾಖೆ ವರ್ಷಗಳ ಹಿಂದೆಯೇ ನಿರ್ಧರಿಸಿತ್ತು. 'ಹೊಗೆ ಪರೀಕ್ಷೆ' ಪ್ರಮಾಣ ಪತ್ರದೊಂದಿಗೆ ಕ್ಯೂಆರ್ ಕೋಡ್ ಕೂಡ ಇರಲಿದ್ದು, ದೇಶದ ಯಾವುದೇ ಮೂಲೆಯಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನಿಂಗ್ ಮಾಡಿದರೂ 'ಮಾಲಿನ್ಯ' ಪರೀಕ್ಷೆ ಸಹಿತ ಎಲ್ಲ ವಿವರಗಳು ಸಿಗುವ ತಂತ್ರಾಂಶ ಅಭಿವೃದ್ಧಿಪಡಿಸಲು ವರ್ಷದ ಹಿಂದೆ ಟೆಂಡರ್ ಕರೆಯಲಾಗಿತ್ತು. 'ಟೆಕ್ ವಾಣಿಜ್ಯ ಟೆಂಡರ್' ಪಡೆದಿರುವ 'ಮೇರು ಇನ್ಫೊ ಸೊಲ್ಯೂಷನ್' ಹೊಸ ತಂತ್ರಜ್ಞಾನ ಒಳಗೊಂಡಿರುವ ತಂತ್ರಾಂಶ ತಯಾರಿಸಿತ್ತು. ಆದರೆ, ಜಾರಿ ಮಾಡಲು ಸರ್ಕಾರದಿಂದ ಇನ್ನೂ ಒಪ್ಪಿಗೆ ಸಿಗದೆ ಇರುವುದರಿಂದ ಅಲ್ಲಿಗೇ ಪ್ರಕ್ರಿಯೆ ನಿಂತುಬಿಟ್ಟಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಬೇರೆ ರಾಜ್ಯಗಳಲ್ಲಿ ಸಂಚಾರ ಪೊಲೀಸರು ಇಲ್ಲವೇ ಸಾರಿಗೆ ಅಧಿಕಾರಿಗಳು ಹೊಗೆ ತಪಾಸಣೆ ಬಗ್ಗೆ ಪರಿಶೀಲಿಸುತ್ತಾರೆ. ಹೊಗೆ ತಪಾಸಣೆ ಮಾಡಿಸದೇ ಇದ್ದರೆ ₹1 ಸಾವಿರ ದಂಡ ವಿಧಿಸುತ್ತಾರೆ. ತಪಾಸಣೆ ಮಾಡಿರುವ ಬಗ್ಗೆ ಪ್ರಮಾಣಪತ್ರ ನೀಡಿದ ನಂತರ, ಅದರ ವಿವರವು ತಂತ್ರಾಂಶದಲ್ಲಿ ಇಲ್ಲದೇಹೋದರೆ ನಕಲಿ ಪ್ರಮಾಣಪತ್ರ ಸೃಷ್ಟಿಸಿದ್ದೀರಿ ಎಂದು ₹10 ಸಾವಿರ ದಂಡ ವಿಧಿಸುತ್ತಾರೆ' ಎಂದು ವಾಹನ ಚಾಲಕರು ಅಲವತ್ತುಕೊಂಡಿದ್ದಾರೆ.

'ವಾಹನ್- 4ರ ಜೊತೆಗೆ ವಾಯುಮಾಲಿನ್ಯ ತಪಾಸಣೆಯ ವಿವರವನ್ನು ಸಂಯೋಜನೆ ಮಾಡಲು ಹಿಂದಿನ ತಂತ್ರಾಂಶದಲ್ಲಿ ಸಾಧ್ಯವಿಲ್ಲ. 2010ರಲ್ಲಿ ಅಭಿವೃದ್ಧಿಪಡಿಸಿದ್ದ ಆ ತಂತ್ರಾಂಶದ ಅವಧಿ 2016ಕ್ಕೆ ಮುಗಿದು ಹೋಗಿದ್ದರೂ ಈಗಲೂ ಅದನ್ನೇ ಬಳಸಲಾಗುತ್ತಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ವಾಯುಮಾಲಿನ್ಯ ತಪಾಸಣೆ ಕೇಂದ್ರಗಳನ್ನು ಪೊಲ್ಯೂಷನ್ ಅಂಡರ್ ಕಂಟ್ರೋಲ್ ಸೆಂಟರ್ (ಪಿಯುಸಿಸಿ) ಎಂದು ಕರೆಯಲಾಗುತ್ತದೆ. ವಾಹನಗಳು ಉಗುಳುವ ಹೊಗೆಯ ಪ್ರಮಾಣ ಆಧರಿಸಿ ಅವುಗಳ ಎಂಜಿನ್ ಸ್ಥಿತಿ ತಿಳಿಯಲಾಗುತ್ತದೆ. ಸದೃಢತಾ ಅವಧಿ ಮುಗಿದಿರುವ ವಾಹನಗಳನ್ನು ಮುಂದೆ ಎಷ್ಟು ಸಮಯ ಓಡಿಸಬಹುದು ಎಂಬುದು ಕೂಡ ಹೊಗೆ ತಪಾಸಣೆ ನಂತರ ನಮೂದಾಗುತ್ತದೆ. ಬಿ1, ಬಿ2, ಬಿ3 ಹಂತದ ವಾಹನಗಳಿಗೆ ಆರು ತಿಂಗಳು ಅವಕಾಶ, ಬಿ4, ಬಿ5 ಹಂತದಲ್ಲಿರುವ ವಾಹನಗಳಿಗೆ ಒಂದು ವರ್ಷ ಅವಕಾಶ ಸಿಗಲಿದೆ. ಬೇರೆ ರಾಜ್ಯಗಳಲ್ಲಿ ನಮ್ಮ ರಾಜ್ಯದ ವಾಹನಗಳಿಗೆ ದಂಡ ಬೀಳುವುದೂ ತಪ್ಪಲಿದೆ' ಎಂದಿದ್ದಾರೆ.

ರಾಜ್ಯದ್ದೇ ಸಮಸ್ಯೆ: ಆರೋಪ




ಎಸ್. ನಟರಾಜ ಶರ್ಮ

'ದೇಶದ ಬೇರೆ ಯಾವುದೇ ರಾಜ್ಯದಲ್ಲಿ ಇಲ್ಲದ ಸಮಸ್ಯೆ ಕರ್ನಾಟಕದಲ್ಲಿ ಉಂಟಾಗಿದೆ. ಹೊಗೆ ತಪಾಸಣೆ ಮಾಡಿಸಿ ಪಡೆಯುವ ಪ್ರಮಾಣಪತ್ರಗಳು ವಾಹನ್-4ರಲ್ಲಿ ತೋರಿಸದೇ ಇದ್ದರೂ ರಾಜ್ಯದ ಒಳಗೆ ಸಾಕಾಗುತ್ತದೆ. ಹೊರ ರಾಜ್ಯಗಳಿಗೆ ಹೋದಾಗ ಸಮಸ್ಯೆಯಾಗುತ್ತಿದೆ' ಎಂದು ರಾಜ್ಯ ಬಸ್ ಮಾಲೀಕರ ಸಂಘದ ಅಧ್ಯಕ್ಷ ಎಸ್. ನಟರಾಜ ಶರ್ಮ ದೂರಿದ್ದಾರೆ.

'ಬಸ್ ಸೇರಿದಂತೆ ವಾಹನ ಮಾಲೀಕರ ಮೇಲೆ ಹಿಡಿತ ಇಟ್ಟುಕೊಳ್ಳಲು ಇವರು ತಂತ್ರಾಂಶವನ್ನು ಸರಿಪಡಿಸುತ್ತಿಲ್ಲ. ಮಾಲೀಕರು ಇವರ ಕಚೇರಿಗೆ ಹೋಗಿ ಅಗತ್ಯ 'ಸೇವೆ' ಸಮರ್ಪಿಸಿದ ಬಳಿಕವೇ ಸರಿಯಾಗಬೇಕು ಎಂದು ಬಯಸುತ್ತಿರುವಂತಿದೆ. ಹೊಸ ತಂತ್ರಾಂಶ ತಯಾರಿಸಿದ್ದರೂ ಅನುಷ್ಠಾನಕ್ಕೆ ಒಪ್ಪಿಗೆ ಸಿಗುತ್ತಿಲ್ಲ ಎಂದರೆ ಇದು ಸಾರಿಗೆ ಇಲಾಖೆ ಮತ್ತು ಸಾರಿಗೆ- ರಸ್ತೆ ಸುರಕ್ಷತೆ ವಿಭಾಗದ ಆಂತರಿಕ ಸಮಸ್ಯೆ. ಅದಕ್ಕೆ ನಾವು ಯಾಕೆ ದಂಡ ಕಟ್ಟಬೇಕು' ಎಂದು ಅವರು ಪ್ರಶ್ನಿಸಿದ್ದಾರೆ.

ಪತ್ರ ಬರೆದಿದ್ದೇವೆ: ಸಾರಿಗೆ ಇಲಾಖೆ



ಜ್ಞಾನೇಂದ್ರ ಕುಮಾರ್

'ಹೊಸ ತಂತ್ರಾಂಶ ಅಳವಡಿಕೆಗೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. ಒಪ್ಪಿಗೆ ಸಿಕ್ಕಿದ ಕೂಡಲೇ ಜಾರಿ ಮಾಡಲಾಗುವುದು' ಎಂದು ಸಾರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತ ಜ್ಞಾನೇಂದ್ರ ಕುಮಾರ್ ತಿಳಿಸಿದ್ದಾರೆ.

'ಸರ್ವರ್ ಅಳವಡಿಸಲಾಗಿದೆ. ಇಂಟರ್‌ನೆಟ್ ಇದೆ. ತಂತ್ರಾಂಶವು ಪರೀಕ್ಷಾ ಹಂತದಲ್ಲಿದೆ. ಅನುಮತಿ ಸಿಕ್ಕಿದರೆ ಒಂದು ತಿಂಗಳ ಒಳಗೆ ಎಲ್ಲ ಪ್ರಕ್ರಿಯೆಗಳು ಪೂರ್ಣಗೊಂಡು ತಪಾಸಣೆ ಆರಂಭಗೊಳ್ಳಲಿದೆ' ಎಂದಿದ್ದಾರೆ.

ಚಿಟಿಕೆ ಸುದ್ದಿ

ಛತ್ತೀಸಗಢ: 29 ನಕ್ಸಲರ ಶರಣಾಗತಿ

ಸುಕ್ಮಾ (ಛತ್ತೀಸಗಢ) (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಬುಧವಾರ 29 ನಕ್ಸಲರು ಪೊಲೀಸರ ಎದುರು ಶರಣಾಗಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಾನೂನುಬಾಹಿರ ಸಿಪಿಐ (ಮಾವೋವಾದಿ) ಸಂಘಟನೆಯ ಸಕ್ರಿಯ ಸದಸ್ಯರಾಗಿದ್ದ ಈ ನಕ್ಸಲರು, ರಾಜ್ಯ ಸರ್ಕಾರದ ಶರಣಾಗತಿ ಮತ್ತು ಪುನರ್ವಸತಿ ನೀತಿಯಿಂದ ಪ್ರಭಾವಿತಗೊಂಡು ಹಿರಿಯ ಪೊಲೀಸರು ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಅಧಿಕಾರಗಳ ಮುಂದೆ ಶರಣಾಗಿದ್ದಾರೆ ಎಂದು ಸುಕ್ಮಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವಾಣ್ ತಿಳಿಸಿದ್ದಾರೆ.

ಶರಣಾದವರ ಪೈಕಿ ಮಾವೋವಾದಿಗಳ ಪ್ರಮುಖ ಸಂಘಟನೆಯಾದ ಗೋಗುಂದಾದ ದಂಡಕಾರಣ್ಯ ಆದಿವಾಸಿ ಕಿಸಾನ್ ಮಜ್ದೂರ್‌ನ ಮುಖ್ಯಸ್ಥ ಪೋಡಿಯಂ ಬುಧ್ರಾ ಕೂಡ ಒಬ್ಬರು. ಇವರ ಸುಳಿವು ನೀಡಿದವರಿಗೆ ₹2 ಲಕ್ಷ ಬಹುಮಾನವನ್ನು ಘೋಷಿಸಲಾಗಿತ್ತು.

ದೆಹಲಿ ಸ್ಫೋಟ: ಆರೋಪಿಗಳ ಕಸ್ಟಡಿ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ದೆಹಲಿ ಕೆಂಪುಕೋಟೆ ಬಳಿ ನಡೆದಿದ್ದ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದ ಮೂವರು ವೈದ್ಯರು, ಒಬ್ಬ ಮೌಲ್ವಿ ಸೇರಿದಂತೆ



ಐವರು ಆರೋಪಿಗಳ ಎನ್‌ಐಎ ಕಸ್ಟಡಿ ಅವಧಿಯನ್ನು ಜನವರಿ 16ರವರೆಗೆ ವಿಸ್ತರಿಸಿ ದೆಹಲಿಯ ನ್ಯಾಯಾಲಯವೊಂದು ಬುಧವಾರ ಆದೇಶಿಸಿದೆ.

ಡಾ.ಆದಿಲ್ ರಾಥರ್, ಡಾ.ಶಾಹೀನ್ ಸಯೀದ್, ಡಾ. ಮುಜಮ್ಮಿಲ್ ಗನಿ, ಮೌಲ್ವಿ ಇರ್ಫಾನ್ ಅಹಮದ್ ವಾಗೆ ಮತ್ತು ಜಾಸಿರ್ ಬಿಲಾಲ್ ವಾನಿ ಅವರ ಕಸ್ಟಡಿ ಅವಧಿಯನ್ನು ವಿಸ್ತರಿಸಬೇಕು ಎಂದು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಮಾಡಿದ್ದ ಮನವಿಯನ್ನು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಅಂಜು ಬಜಾಜ್ ಚಾಂದನಾ ಅವರು ಪುರಸ್ಕರಿಸಿದ್ದಾರೆ.

ಪ್ರಕರಣದ ಹಿಂದಿನ ದೊಡ್ಡ ಪಿತೂರಿಯನ್ನು ಮತ್ತು ಸಂಬಂಧಿಸಿದ ಇತರ ವ್ಯಕ್ತಿಗಳನ್ನು ಸೆರೆ ಹಿಡಿಯಲು ಆರೋಪಿಗಳ ಹೆಚ್ಚುವರಿ ವಿಚಾರಣೆ ಅಗತ್ಯವಾಗಿದೆ ಎಂದು ಎನ್‌ಐಎ ಮನವಿ ಮಾಡಿತ್ತು.

‘ಮಾಜಿ ಯೋಧರಿಂದ ಸೇನೆಗೆ ಶಕ್ತಿ’

ಮಾಜಿ ಸೈನಿಕರು, ಅವರ ಕುಟುಂಬಗಳಿಗೆ ಉಪಕ್ರಮಗಳ ವಿಸ್ತರಣೆ: ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ

ಜೈಪುರ (ಪಿಟಿಐ): ಸೇನೆಯು ತನ್ನ ನಿವೃತ್ತ ಸೈನಿಕರನ್ನು ದೇಶದ ಭದ್ರತಾ ಚೌಕಟ್ಟಿನಲ್ಲಿ ಮತ್ತು ರಾಷ್ಟ್ರ ನಿರ್ಮಾಣ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದೆ ಎಂದು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಬುಧವಾರ ಹೇಳಿದ್ದಾರೆ. ಅಲ್ಲದೆ, ಮಾಜಿ ಸೈನಿಕರು ಮತ್ತು ಅವರ ಕುಟುಂಬಗಳಿಗೆ ಕಲ್ಯಾಣ, ಆರೋಗ್ಯ ಮತ್ತು ಪುನರ್ವಸತಿ ಉಪಕ್ರಮಗಳನ್ನು ವಿಸ್ತರಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಸಶಸ್ತ್ರ ಪಡೆಗಳ ಮಾಜಿ ಸೈನಿಕರ ದಿನಾಚರಣೆಯ ಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು. 1953ರ ಈ ದಿನ ನಿವೃತ್ತರಾದ ಸಶಸ್ತ್ರ ಪಡೆಗಳ ಮೊದಲ ಕಮಾಂಡರ್ ಇನ್ ಚೀಫ್ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅವರ ಸ್ಮರಣೆಗಾಗಿ ಪ್ರತಿವರ್ಷ ಜನವರಿ 14ರಂದು ಸಶಸ್ತ್ರ ಪಡೆಗಳ ಮಾಜಿ ಸೈನಿಕರ ದಿನಾಚರಣೆಯನ್ನು ಆಚರಿಸಲಾಗುತ್ತದೆ.

‘ಮಾಜಿ ಸೈನಿಕರು ಸಕ್ರಿಯ ಸೇವೆಗಿಂತ ಹೆಚ್ಚಾಗಿ ಭಾರತದ ಭದ್ರತೆ, ಆಡಳಿತ, ಕೈಗಾರಿಕೆ ಮತ್ತು ಸಾಮಾಜಿಕ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ. ಕರೆದಾಗಲೆಲ್ಲಾ ನಮ್ಮ ಯೋಧರು ದೇಶದೊಂದಿಗೆ ದೃಢವಾಗಿ ನಿಂತಿದ್ದಾರೆ. ಇದು ಅವರಲ್ಲಿ ಆಳವಾಗಿ ಬೇರೂರಿರುವ ರಾಷ್ಟ್ರೀಯ ಕರ್ತವ್ಯ ಮತ್ತು ಜವಾಬ್ದಾರಿಯ ಪ್ರಜ್ಞೆಯ ಪ್ರತಿಬಿಂಬ’ ಎಂದು ಉಪೇಂದ್ರ ಅವರು ಬಣ್ಣಿಸಿದ್ದಾರೆ.

ಸೇನೆಯನ್ನು ವಿಸ್ತರಿಸುತ್ತಿರುವ ಕಲ್ಯಾಣ ಯೋಜನೆ ವ್ಯವಸ್ಥೆಯನ್ನು ಉಲ್ಲೇಖಿಸಿದ ಅವರು, ರಕ್ಷಣಾ ಪಿಂಚಣಿದಾರರು ಮತ್ತು ಅವರ ಕುಟುಂಬಗಳಿಗೆ ಮೀಸಲಾದ ಬೆಂಬಲ ವ್ಯವಸ್ಥೆಯನ್ನು ಒದಗಿಸಲು 2024ರ ಆಗಸ್ಟ್‌ನಲ್ಲಿ ಪ್ರಾರಂಭಿಸಲಾದ ಪ್ರಾಜೆಕ್ಟ್ ನಮನ್ ಒಂದು ಮೈಲಿಗಲ್ಲಾಗಿದೆ’ ಎಂದು ಹೇಳಿದ್ದಾರೆ.

ಆಪರೇಷನ್ ಸಿಂಧೂರದಲ್ಲಿ ನಿವೃತ್ತ ಸೈನಿಕರ ಪಾಲ್ಗೊಳ್ಳುವಿಕೆಯನ್ನು ಅವರು ಇದೇ ವೇಳೆ ನೆನಪಿಸಿಕೊಂಡಿದ್ದಾರೆ.



ನಿವೃತ್ತ ಯೋಧ ಮತ್ತು ಅವರ ಕುಟುಂಬವನ್ನು ಸೇನೆಯು ದೊಡ್ಡ ಘಟಕವಾಗಿ ನೋಡುತ್ತದೆ. ನಮ್ಮದು ಸುಮಾರು 1.25 ಕೋಟಿ ಸದಸ್ಯರನ್ನು ಹೊಂದಿರುವ ಬಲಿಷ್ಠ ಕುಟುಂಬ
ಜನರಲ್ ಉಪೇಂದ್ರ ದ್ವಿವೇದಿ
ಸೇನಾ ಮುಖ್ಯಸ್ಥ

‘ದೃಢಸಂಕಲ್ಪದ ಸಂಕೇತ’

ನವದೆಹಲಿ (ಪಿಟಿಐ): ಆಪರೇಷನ್ ಸಿಂಧೂರವು ಭಾರತದ ದೃಢಸಂಕಲ್ಪ ಮತ್ತು ಸಂಯಮದ ಪ್ರದರ್ಶನವಾಗಿದೆ ಎಂದು ಉಪೇಂದ್ರ ದ್ವಿವೇದಿ ಬುಧವಾರ ಇಲ್ಲಿ ಹೇಳಿದ್ದಾರೆ.

ರಾಷ್ಟ್ರೀಯ ಕೆಡೆಟ್ ಕೋರ್‌ನ (ಎನ್‌ಸಿಸಿ) ಗಣರಾಜ್ಯೋತ್ಸವ ಶಿಬಿರದಲ್ಲಿ ಕೆಡೆಟ್‌ಗಳ ಸಭೆ ಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು, ಆಪರೇಷನ್ ಸಿಂಧೂರ ದೇಶದ ಸಶಸ್ತ್ರ ಪಡೆಗಳು ಮತ್ತು ಯುವಕರ ನೈತಿಕ ಶಕ್ತಿಯ ಹಾಗೂ ವೃತ್ತಿಪರ ಬದ್ಧತೆಯ ಪ್ರತಿಬಿಂಬವಾಗಿದೆ ಎಂದು ಪ್ರತಿಪಾದಿಸಿದ್ದಾರೆ.

‘ಆಂತರಿಕ ಸಮಸ್ಯೆಗಳಿಂದ ಗಮನ ಬೇರೆಡೆ ಸೆಳೆಯಲು ಪಾಕ್ ದುರ್ವರ್ತನೆ’


ಕವಿಂದರ್ ಗುಪ್ತಾ

ಜಮ್ಮು (ಪಿಟಿಐ): ಪಾಕಿಸ್ತಾನವು ಆರ್ಥಿಕ ಬಿಕ್ಕಟ್ಟು ಸೇರಿದಂತೆ ಆಂತರಿಕ ಸಮಸ್ಯೆಗಳಿಂದ ಗಮನವನ್ನು ಬೇರೆಡೆ ಸೆಳೆಯಲು ಭಾರತದತ್ತ ಡ್ರೋನ್‌ಗಳನ್ನು ಕಳುಹಿಸುವುದು ಸೇರಿದಂತೆ ಗಡಿಯಲ್ಲಿ ಕುಕೃತ್ಯವನ್ನು ಎಸಗುತ್ತಿದೆ ಎಂದು ಲಡಾಖ್ ಲೆಫ್ಟಿನೆಂಟ್ ಗವರ್ನರ್ ಕವಿಂದರ್ ಗುಪ್ತಾ ಹೇಳಿದರು.

ಶಾಕ್ಸಗಾಮ್ ಕಣಿವೆ ವಿಚಾರವಾಗಿ ಚೀನಾ ಹೇಳಿಕೆಯನ್ನು ಅಲ್ಲಗಳೆದ ಅವರು, ‘ಇದು 1962ರ ಭಾರತ ಅಲ್ಲ; 2026ರ ಭಾರತ. ಇದನ್ನು ಅವರು (ಚೀನಾ) ಅರ್ಥಮಾಡಿಕೊಳ್ಳಬೇಕು’ ಎಂದು ತಿರುಗೇಟು ನೀಡಿದರು.

ಸೇನಾ ಮುಖ್ಯಸ್ಥ ಉಪೇಂದ್ರ ದ್ವಿವೇದಿ ಅವರು, ‘ಗಡಿಯಾದ್ಯಂತ ಕನಿಷ್ಠ ಎಂಟು ಉಗ್ರ ನೆಲೆಗಳು ಸಕ್ರಿಯವಾಗಿವೆ’ ಎಂದು ನೀಡಿದ್ದ ಹೇಳಿಕೆಗೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ಪಾಕಿಸ್ತಾನವು ತನ್ನ ದುರ್ವರ್ತನೆಗೆ ತಕ್ಕ ಪರಿಣಾಮ ಎದುರಿಸಲಿದೆ’ ಎಂದರು.

‘ಆಪರೇಷನ್ ಸಿಂಧೂರ ಕಾರ್ಯಾಚರಣೆಯು ಇನ್ನೂ ಮುಕ್ತಾಯವಾಗಿಲ್ಲ. ಪಾಕಿಸ್ತಾನವು ದುರ್ವರ್ತನೆಯನ್ನು ಮುಂದುವರಿಸಿದಲ್ಲಿ ಪರಿಣಾಮವನ್ನು ಎದುರಿಸಲಿದೆ. ಬಲೂಚಿಸ್ತಾನ, ಸಿಂಧ್, ಕರಾಚಿ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಪ್ರತ್ಯೇಕತಾವಾದದ ಧ್ವನಿಗಳು ತೀವ್ರಗೊಳ್ಳುತ್ತಿವೆ. ಇದೇ ಬೆಳವಣಿಗೆ ಮುಂದುವರಿದರೆ ಪಾಕಿಸ್ತಾನ ಹೆಚ್ಚು ದಿನ ಉಳಿಯುವುದು ಕಷ್ಟ ಸಾಧ್ಯ. ಅದರ ವಿಘಟನೆ ಅನಿವಾರ್ಯವಾಗಲಿದೆ’ ಎಂದು ಅಭಿಪ್ರಾಯಪಟ್ಟರು.

ಸಂಕ್ಷಿಪ್ತ ಸುದ್ದಿ

ಸ್ಫೋಟ: ದಂಪತಿ ಸಾವು

ಹಜಾರಿಬಾಗ್ (ಪಿಟಿಐ): ಜಾರ್ಖಂಡ್‌ನ ಹಜಾರಿಬಾಗ್‌ನ ಹಬೀಬಿನಗರ ಪ್ರದೇಶದಲ್ಲಿ ಬುಧವಾರ ಸಂಜೆ ನಾಲ್ಕು ಗಂಟೆ ಆಸುಪಾಸಿನಲ್ಲಿ ನಡೆದ ಸ್ಫೋಟದಲ್ಲಿ ದಂಪತಿ ಮೃತಪಟ್ಟಿದ್ದು, ಮತ್ತೊಬ್ಬರು ಗಾಯಗೊಂಡಿದ್ದಾರೆ.

ಸ್ಫೋಟಕ್ಕೆ ಕಾರಣ ಗೊತ್ತಾಗಿಲ್ಲ. ವಿಧಿ ವಿಜ್ಞಾನ ಪರೀಕ್ಷೆ ನಡೆಸುವವರ ತಂಡವನ್ನು ಸ್ಥಳಕ್ಕೆ ಕರೆದೊಯ್ಯ-ಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಾರಾ ಬಜಾರ್ ಪಟ್ಟಣದ ಹೊರವಲಯದಲ್ಲಿರುವ ಹಬೀಬಿ ನಗರದಲ್ಲಿ ನಡೆದ ಸ್ಫೋಟದಲ್ಲಿ ದಂಪತಿ ಮೃತಪಟ್ಟಿದ್ದು, ಗಾಯಾಳುವನ್ನು ಹಜಾರಿಬಾಗ್‌ನ ಸದರ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸದರ್ ಎಸ್‌ಡಿಪಿಒ ಅಮಿತ್ ಕುಮಾರ್ ಆನಂದ್ ಅವರುತಿಳಿಸಿದ್ದಾರೆ.

ಟಿಡಿಬಿ ಮಾಜಿ ಸದಸ್ಯ ಬಂಧನ

ತಿರುವನಂತಪುರ (ಪಿಟಿಐ): ಶಬರಿಮಲೆ ಚಿನ್ನ ಕಳವು ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಮಾಜಿ ಸದಸ್ಯ ಕೆ.ಪಿ. ಶಂಕರ ದಾಸ್ ಅವರನ್ನು ಖಾಸಗಿ ಆಸ್ಪತ್ರೆ ಯಲ್ಲಿ ಬುಧವಾರ ಬಂಧಿಸಿದ್ದಾರೆ.

ದ್ವಾರಪಾಲಕ ಮೂರ್ತಿಗಳ ಚಿನ್ನ ಲೇಪಿತ ತಾಮ್ರದ ಕವಚಗಳು ಮತ್ತು ಶ್ರೀಕೋವಿಲ್ ಬಾಗಿಲಿನ ಚೌಕಟ್ಟುಗಳ ಚಿನ್ನ ಕಳವು ಪ್ರಕರಣಗಳಿಗೆ ಸಂಬಂಧಿಸಿದಂತೆ ದಾಸ್ ಅವರನ್ನು ಏಕೆ ಬಂಧಿಸಿಲ್ಲ ಎಂದು ಕೇರಳ ಹೈಕೋರ್ಟ್ ಪ್ರಶ್ನಿಸಿದ ಒಂದು ದಿನದ ನಂತರ ಈ ಬಂಧನವಾಗಿದೆ. ದಾಸ್ ಅವರು ಈ ಎರಡೂ ಪ್ರಕರಣಗಳಲ್ಲಿ ಬಂಧಿತರಾದ 12ನೇ ಆರೋಪಿಯಾಗಿದ್ದಾರೆ.

ರಾಕೇಶ್ ಅಗ್ರವಾಲ್ ಎನ್‌ಐಎ ಮುಖ್ಯಸ್ಥ

ನವದೆಹಲಿ (ಪಿಟಿಐ):ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಮಹಾನಿರ್ದೇಶಕರಾಗಿ (ಡಿಜಿ) ಐಪಿಎಸ್ ಅಧಿಕಾರಿ ರಾಕೇಶ್ ಅಗ್ರವಾಲ್ ಬುಧವಾರ ನೇಮಕಗೊಂಡಿದ್ದಾರೆ.

ಹಿಮಾಚಲ ಪ್ರದೇಶ ಕೇಡರ್‌ನ 1994ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿ-ಯಾಗಿರುವ ಅಗ್ರವಾಲ್ ಇದುವರೆಗೆ ಭಯೋತ್ಪಾದನಾ ನಿಗ್ರಹ ದಳದ ವಿಶೇಷ ಮಹಾನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಎನ್‌ಐಎನ ಮಹಾನಿರ್ದೇಶಕ ಹುದ್ದೆಯ ಹೆಚ್ಚುವರಿ ಹೊಣೆಯನ್ನೂ ನಿಭಾಯಿಸುತ್ತಿದ್ದರು. ಎನ್‌ಐಎ ಡಿಜಿ ಹುದ್ದೆಯ ಅವಧಿ 2028ರ ಆಗಸ್ಟ್ 31ರವರೆಗೆ ಇರಲಿದೆ.



ಮಕರ ಜ್ಯೋತಿ ದರ್ಶನಕ್ಕಾಗಿ ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಸೇರಿದ್ದ ಭಕ್ತರು –ಪಿಟಿಐ ಚಿತ್ರ

‘ಮಕರಜ್ಯೋತಿ’ ಕಣ್ತುಂಬಿಕೊಂಡ ಭಕ್ತರು

ಶಬರಿಮಲೆ (ಪಿಟಿಐ): ಇಲ್ಲಿನ ಅಯ್ಯಪ್ಪ ದೇಗುಲಕ್ಕೆ ವಿವಿಧ ರಾಜ್ಯಗಳಿಂದ ಬಂದಿದ್ದ ಸಾವಿರಾರು ಭಕ್ತರು ಬುಧವಾರ ಸಂಜೆ 6.45ರ ಸುಮಾರಿಗೆ ಮಕರಜ್ಯೋತಿಯನ್ನು ಕಣ್ತುಂಬಿಕೊಂಡರು.

ಇರುಮುಡಿ ಹೊತ್ತಿದ್ದ ಭಕ್ತರು ದೇವಾಲಯದ ಆವರಣ ಮತ್ತು ಇತರೆಡೆಗಳಲ್ಲಿ ಮಕರಜ್ಯೋತಿ ದರ್ಶನಕ್ಕಾಗಿ ಮಧ್ಯಾಹ್ನದಿಂದಲೇ ಕಾದು ನಿಂತಿದ್ದರು. ದೇಗುಲದಿಂದ 8 ಕಿ.ಮೀ. ದೂರದಲ್ಲಿರುವ ಪೊನ್ನಂಬಲಮೇಡು ಬೆಟ್ಟದ ಕಾಡಿನೊಳಗಿನಿಂದ ಮಕರಜ್ಯೋತಿ ಕಾಣಿಸಿಕೊಂಡಾಗ ಪುಳಕಿತರಾದರು. ಜ್ಯೋತಿಯನ್ನು ವೀಕ್ಷಿಸಲು ಶಬರಿಮಲೆ ಮತ್ತು ಸುತ್ತಮುತ್ತಲಿನ ವಿವಿಧ ವೀಕ್ಷಣಾ ಸ್ಥಳಗಳಲ್ಲಿ ಸಾವಿರಾರು ಭಕ್ತರು ನೆರೆದಿದ್ದರು.

ಪತ್ತನಂತಿಟ್ಟದ ಪಂದಳಂ ಅರಮನೆಯಿಂದ ಮೆರವಣಿಗೆ ಮೂಲಕ ತರಲಾದ ‘ತಿರುವಾಭರಣ’ದಿಂದ (ಪವಿತ್ರ ಆಭರಣಗಳು) ಅಯ್ಯಪ್ಪ ದೇವರ ಮೂರ್ತಿಯನ್ನು ಅಲಂಕ-ರಿಸಲಾಗಿತ್ತು. ದೇಗುಲ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು. ಕಳೆದ ಎರಡು ತಿಂಗಳಿಂದ ನಡೆದ ವಾರ್ಷಿಕ ಯಾತ್ರೆಯು ಮಕರವಿಳಕ್ಕು ಉತ್ಸವದೊಂದಿಗೆ ಕೊನೆಗೊಂಡಿತು.

‘ಐ–ಪ್ಯಾಕ್’ ಕಚೇರಿ, ನಿರ್ದೇಶಕರ ನಿವಾಸದ ಮೇಲೆ ಇ.ಡಿ ದಾಳಿ

‘ಯಾವುದೇ ದಾಖಲೆ ಪಡೆದಿಲ್ಲ’

ಕೋಲ್ಕತ್ತ (ಪಿಟಿಐ): ರಾಜಕೀಯ ಸಲಹೆಗಾರ ಸಂಸ್ಥೆ ‘ಐ–ಪ್ಯಾಕ್’ ಕಚೇರಿ ಮತ್ತು ಅದರ ನಿರ್ದೇಶಕ ಪ್ರತೀಕ್ ಜೈನ್ ಅವರ ನಿವಾಸದ ಮೇಲೆ ಕಳೆದ ವಾರ ನಡೆದ ದಾಳಿಯಲ್ಲಿ ಯಾವುದೇ ಮಾಹಿತಿಯನ್ನು ವಶಕ್ಕೆ ಪಡೆದುಕೊಂಡಿಲ್ಲ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಕೋಲ್ಕತ್ತ ಹೈಕೋರ್ಟ್‌ಗೆ ತಿಳಿಸಿತು.

ಜನವರಿ 8ರಂದು ಇ.ಡಿ ನಡೆಸಿದ ದಾಳಿ ವೇಳೆ ವಶಕ್ಕೆ ಪಡೆದ ವೈಯಕ್ತಿಕ ಮತ್ತು ರಾಜಕೀಯ ದತ್ತಾಂಶಗಳ ರಕ್ಷಣೆ ಕೋರಿ ಟಿಎಂಸಿ ಸಲ್ಲಿಸಿರುವ ಅರ್ಜಿಗೆ ಇ.ಡಿ ಪ್ರತಿಕ್ರಿಯಿಸಿತು.

ಟಿಎಂಸಿ ಪರ ವಾದ ಮಂಡಿಸಿದ ವಕೀಲರಾದ ಮೇನಕಾ ಗುರುಸ್ವಾಮಿ, ‘ಟಿಎಂಸಿ ತನ್ನ ದತ್ತಾಂಶ ರಕ್ಷಣೆಯನ್ನಷ್ಟೇ ಬಯಸುತ್ತದೆ’ ಎಂದರು.

ಇ.ಡಿ ಪರ ವಾದಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ (ಎಎಸ್‌ಜಿ) ಎಸ್.ವಿ.ರಾಜು ಅವರು ಎರಡೂ ತಾಣಗಳಲ್ಲಿನ ದಾಳಿ ವೇಳೆ ಇ.ಡಿ ಏನನ್ನೂ ವಶಪಡಿಸಿಕೊಂಡಿಲ್ಲ. ಬದಲಿಗೆ, ಇ.ಡಿ ವಶಕ್ಕೆ ಪಡೆಯಬೇಕಿದ್ದ ಕಡತಗಳನ್ನು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರೇ ತೆಗೆದುಕೊಂಡು ಹೋಗಿದ್ದಾರೆ’ ಎಂದು ವಿವರಿಸಿದರು. ಇ.ಡಿ ವಾದ ಆಲಿಸಿದ ನ್ಯಾಯಮೂರ್ತಿ ಸುವ್ರಾ ಘೋಷ್ ಅವರು ಟಿಎಂಸಿ ಅರ್ಜಿಯನ್ನು ವಿಲೇವಾರಿ ಮಾಡಿದರು.

ವಿಚಾರಣೆ ಮುಂದಕ್ಕೆ: ‘ಐ–ಪ್ಯಾಕ್’ ಕಚೇರಿ ಮತ್ತು ಅದರ ನಿರ್ದೇಶಕರ ನಿವಾಸದ ಮೇಲೆ ಇ.ಡಿ ದಾಳಿ ನಡೆಸಿದ ಸಂದರ್ಭದಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸ್ಥಳಕ್ಕೆ ಬಂದು ಕಡತಗಳನ್ನು ವಶಕ್ಕೆ ಪಡೆದ ಘಟನೆ ಕುರಿತು ಸಿಬಿಐ ತನಿಖೆಗೆ ಕೋರಿ ಇ.ಡಿ ಸಲ್ಲಿಸಿರುವ ಪ್ರತ್ಯೇಕ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಮುಂದೂಡಿತು.

ಈ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ಎರಡು ವಿಶೇಷ ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಅಲ್ಲಿ ವಿಚಾರಣೆ ನಡೆಯಬೇಕಿದೆ ಎಂದು ಎಎಸ್‌ಜಿ ಪೀಠದ ಗಮನಕ್ಕೆ ತಂದರು. ಇ.ಡಿ ಮಾಡಿದ ಮನವಿಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ವಕೀಲ ಕಲ್ಯಾಣ್ ಬ್ಯಾನರ್ಜಿ ಆಕ್ಷೇಪಿಸಿದರು. ಆದರೆ ನ್ಯಾಯಮೂರ್ತಿ ಸೌರವ್ ಘೋಷ್ ಅವರು ವಿಚಾರಣೆಯನ್ನು ಮುಂದೂಡಿದರು.

ಎಸ್‌ಐಆರ್: ದಾಖಲೆ ಸಲ್ಲಿಸಿದ ದೇವ್

ಬಂಗಾಳದ ಖ್ಯಾತ ನಟ, ಟಿಎಂಸಿ ಸಂಸದ ದೇವ್ (ದೀಪಕ್ ಅಧಿಕಾರಿ) ಅವರು ಎಸ್‌ಐಆರ್ ಪರಿಶೀಲನೆ ಸಂಬಂಧಿತ ವಿಚಾರಣೆಗೆ ಬುಧವಾರ ಬೆಳಿಗ್ಗೆ ಹಾಜರಾಗಿದ್ದು, ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸಿರುವುದಾಗಿ ಹೇಳಿದ್ದಾರೆ.

ಜಾಧವಪುರದ ಕಾಟಜುನಗರ ಸ್ವರ್ಣಮಯಿ ವಿದ್ಯಾಪೀಠದಲ್ಲಿ (ಎಚ್‌ಎಸ್) ವಿಚಾರಣೆ ನಡೆದಿದೆ. ಬಳಿಕ ಮಾಧ್ಯಮಗಳೊಂದಿಗೆ ಅವರು ಮಾತನಾಡಿದ್ದಾರೆ.

‘ಜವಾಬ್ದಾರಿಯುತ ನಾಗರಿಕನಾಗಿ ನನ್ನ ಕರ್ತವ್ಯವನ್ನು ಪಾಲಿಸಿದ್ದೇನೆ ಹಾಗೂ ಅಗತ್ಯವಿರುವ ಎಲ್ಲಾ ದಾಖಲೆಗಳನ್ನೂ ಒದಗಿಸಿದ್ದೇನೆ. ಮತದಾನವು ಜನರ ಪಾಲಿಗೆ ಹಬ್ಬವಿದ್ದಂತೆ. ಯಾವುದೇ ಅರ್ಹ ವ್ಯಕ್ತಿಯೂ ಇದರಿಂದ ಹೊರಗುಳಿ-ಯಬಾರದು’ ಎಂದು ಅವರು ಹೇಳಿದ್ದಾರೆ.

ಇದೇ ವೇಳೆ, ವೃದ್ಧ ಮತ್ತು ಅನಾರೋಗ್ಯಕ್ಕೀಡಾದ ಹಲವು ಮತದಾರರು ತಮ್ಮ ದಾಖಲೆಗಳನ್ನು ಸಲ್ಲಿಸಲು ಸರದಿಯಲ್ಲಿ ನಿಂತು ಕಷ್ಟಪಡುತ್ತಿರುವ ಬಗ್ಗೆ ಮಾತನಾಡಿ, ಅಂತಹ ಮತದಾರರ ದಾಖಲೆಗಳನ್ನು ಅವರ ನಿವಾಸಗಳ ಬಳಿಯೇ ಪಡೆದುಕೊಳ್ಳುವ ಬಗ್ಗೆ ಚುನಾವಣಾ ಆಯೋಗ (ಇಸಿ) ಗಮನಹರಿಸ-ಬೇಕು ಎಂದೂ ದೇವ್ ಮನವಿ ಮಾಡಿದ್ದಾರೆ.



ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ಬುಧವಾರ ಅಪಾರ ಸಂಖ್ಯೆಯ ಭಕ್ತರು ಪುಣ್ಯಸ್ನಾನ ಮಾಡಿದರು ಪಿಟಿಐ ಚಿತ್ರ

80 ಲಕ್ಷ ಭಕ್ತರಿಂದ ಪುಣ್ಯಸ್ನಾನ

ಪ್ರಜಾವಾಣಿ ವಾರ್ತೆ

ಲಖನೌ: ಪ್ರಯಾಗರಾಜ್‌ನ ತ್ರಿವೇಣಿ ಸಂಗಮದಲ್ಲಿ (ಗಂಗಾ, ಯಮುನಾ ಮತ್ತು ಗುಪ್ತಗಾಮಿನಿ ಸರಸ್ವತಿ ನದಿ ಸೇರುವ ಸ್ಥಳ) ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಅಂದಾಜು 80 ಲಕ್ಷ ಭಕ್ತರು ಬುಧವಾರ ಪುಣ್ಯಸ್ನಾನ ಮಾಡಿದರು.

ಮಕರ ಸಂಕ್ರಮಣದ ಪುಣ್ಯಸ್ನಾನಕ್ಕಾಗಿ ಮಂಗಳವಾರ ಮಧ್ಯರಾತ್ರಿಯಿಂದಲೇ ಸ್ನಾನಘಟ್ಟಗಳಲ್ಲಿ ಭಕ್ತಸಮೂಹವು ಜಮಾಯಿಸಿತ್ತು. ತಡರಾತ್ರಿ 12 ಗಂಟೆ ವೇಳೆಯಲ್ಲೇ ಸುಮಾರು 50 ಲಕ್ಷ ಭಕ್ತರು ಸಂಗಮದಲ್ಲಿ ಮಿಂದೆದ್ದರು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಮಾಘ ಮೇಳ’ದ ಧಾರ್ಮಿಕ ಕಾರ್ಯಕ್ರಮಕ್ಕಾಗಿಯೇ ಸ್ಥಳೀಯ ಆಡಳಿತವು ಸಕಲ ಸಿದ್ಧತೆ ಮಾಡಿದೆ. ಮೇಳದ ಆವರಣ ಹಾಗೂ ಸ್ನಾನ ಘಟ್ಟಗಳ ಬಳಿ ವಾಹನಗಳ ಸಂಚಾರ ನಿರ್ಬಂಧಿಸಿದೆ.

ದೇಶದ ಎಲ್ಲೆಡೆಯಿಂದಲೂ ಭಕ್ತಸಾಗರ ಸಂಗಮದತ್ತ ಬಂದಿದ್ದು, ಎತ್ತ ದೃಷ್ಟಿ ಹಾಯಿಸಿದರೂ ಜನಸಾಗರವೇ ಕಂಡುಬಂದಿತು. ಇಡೀ ನಗರ ಭಕ್ತರಿಂದಲೇ ತುಂಬಿತ್ತು. ಪ್ರಯಾಗರಾಜ್‌ಗೆ ಸಂಪರ್ಕ ಕಲ್ಪಿಸುವ ಎಲ್ಲ ರಸ್ತೆಗಳು ವಾಹನ ದಟ್ಟಣೆಯಿಂದ ಕೂಡಿದ್ದವು.

ಬೀದರ್: ಕತ್ತು ಸೀಳಿದ ಮಾಂಜಾ, ವ್ಯಕ್ತಿ ಸಾವು

ಒಂದನೇ ಪುಟದಿಂದ...


ಸಂಜುಕುಮಾರ

‘ನಂತರ ಅವರು ಬೈಕ್‌ನಿಂದ ಕೆಳಗೆ ಬಿದ್ದು ತೀವ್ರ ರಕ್ತಸ್ರಾವವಾಗಿ ರಸ್ತೆ ಮೇಲೆ ಹೊರಳಾಡುತ್ತ ಪ್ರಾಣ ಬಿಟ್ಟಿದ್ದಾರೆ. ಅವರು ಲಾರಿ ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದರು’ ಎಂದು ಪ್ರದೀಪ್ ಗುಂಟಿ ತಿಳಿಸಿದ್ದಾರೆ.

ಘಟನೆ ನಡೆದ ಸ್ಥಳದಲ್ಲೇ ಜನರಿದ್ದರೂ ಯಾರೂ ಅವರ ನೆರವಿಗೆ ಧಾವಿಸಲಿಲ್ಲ. ಮನ್ನಾಏಖ್ಖೆಳ್ಳಿ ಪೊಲೀಸ್ ಠಾಣೆಯಲ್ಲಿ ಅಪಘಾತ ಪ್ರಕರಣ ದಾಖಲಾಗಿದೆ. ಘಟನೆ ಬೆನ್ನಲ್ಲೇ ಜಿಲ್ಲಾ ಪೊಲೀಸರು, ಮಾಂಜಾ ತಯಾರಿಸುತ್ತಿದ್ದ ಮೂರು ಮಳಿಗೆಗಳನ್ನು ನಗರದಲ್ಲಿ ಜಪ್ತಿ ಮಾಡಿದ್ದಾರೆ.

ಮಾಂಜಾದಲ್ಲಿ ಏನಿರುತ್ತೆ?

ಗಾಜು ಪುಡಿ ಮಾಡಿ, ಅರಿಶಿನ, ಅಂಟು ಅಥವಾ ಇತರೆ ಜಿಗುಟು ವಸ್ತುವಿನೊಂದಿಗೆ ಸೇರಿಸಿ ರಾಸಾಯನಿಕ ಬಣ್ಣ ಮಿಶ್ರಣ ಮಾಡಿ ನೈಲಾನ್ ದಾರ ಅಥವಾ ತೆಳುವಾದ ವೈರ್‌ಗೆ ಸವರಿ, ಆನಂತರ ಬಿಸಿಲಿನಲ್ಲಿ ಒಣಗಿಸುತ್ತಾರೆ. ಇದರಿಂದ ಅದು ಬಹಳ ಹರಿತವಾಗುತ್ತದೆ. ಈ ದಾರಕ್ಕೆ ಗಾಳಿಪಟ ಕಟ್ಟಿ ಹಾರಿಸುತ್ತಾರೆ. ಬೇರೆಯವರ ಪಟ ಕತ್ತರಿಸಲು ಈ ಮಾಂಜಾ ಉಪಯೋಗಿಸಿ ಗಾಳಿಪಟ ಹಾರಿಸುವುದು ರೂಢಿ. ಜನ–ಜಾನುವಾರು ಹಾಗೂ ಪಕ್ಷಿಗಳಿಗೆ ಇದು ಮಾರಕವಾಗಿರುವ ಕಾರಣ ನಿಷೇಧಿಸಲಾಗಿದೆ. ಆದರೂ, ಎಗ್ಗಿಲ್ಲದೇ ಬಳಕೆಯಾಗುತ್ತಿದೆ.

ಚೈನೀಸ್ ಮಾಂಜಾ: ವ್ಯಕ್ತಿ ಸಾವು

ಜೌನಪುರ (ಉತ್ತರ ಪ್ರದೇಶ): ಮೋಟರ್ ಸೈಕಲ್‌ನಲ್ಲಿ ತೆರಳುತ್ತಿದ್ದ ಫಿಸಿಯೋಥೆರಪಿಸ್ಟ್ ಒಬ್ಬರ ಕೊರಳಿಗೆ ನಿಷೇಧಿತ ‘ಚೈನೀಸ್ ಮಾಂಜಾ’ ಸುತ್ತಿ-ಕೊಂಡಿದ್ದರಿಂದ ಅವರ ಕುತ್ತಿಗೆ ಸೀಳಿ, ಬುಧವಾರ ಮೃತಪಟ್ಟಿದ್ದಾರೆ.

ಮೃತ ವ್ಯಕ್ತಿಯನ್ನು ಕೆರಕತ್ ಕೊತ್ವಾಲಿ ನಗರದ ನಿವಾಸಿ ಮೊಹಮ್ಮದ್ ಶಮೀರ್ ಎಂದು ಗುರುತಿಸಲಾಗಿದೆ. ಪಚಾಟಿಯಾ ಗ್ರಾಮದ ಪ್ರಸಾದ್ ಇಂಟರ್‌ನ್ಯಾಷನಲ್ ಸ್ಕೂಲ್ ಬಳಿ ಈ ದುರ್ಘಟನೆ ನಡೆದಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಆಯುಷ್ ಶ್ರೀವಾಸ್ತವ ಅವರು ಮಾಹಿತಿ ನೀಡಿದ್ದಾರೆ.

ಜೌನಪುರದಲ್ಲಿ ವೈದ್ಯರೊಬ್ಬರನ್ನು ಭೇಟಿಯಾಗಲು ಶಮೀರ್ ಬಂದಿದ್ದರು. ಅವರು ಮನೆಗೆ ಹಿಂದಿರುಗುತ್ತಿದ್ದ ಸಂದರ್ಭದಲ್ಲಿ ಶಾಲೆಯ ಬಳಿ ಗಾಳಿಪಟ ಹಾರಿಸಲು ಬಳಸುವ ‘ಚೈನೀಸ್ ಮಾಂಜಾ‘ (ಗಾಜು ಲೇಪಿತ ಸಿಂಥೆಟಿಕ್ ಸೂತ್ರ) ಅವರ ಕುತ್ತಿಗೆಗೆ ಸುತ್ತಿಕೊಂಡು ಸೀಳಿದೆ.

25 ದೇಶಗಳ ಚಿಂತಕರು, ಲೇಖಕರು, ವಿವಿಧ ವಿಷಯ ತಜ್ಞರ ಸಮ್ಮಿಲನ

ಇಂದಿನಿಂದ ಜೈಪುರ ಸಾಹಿತ್ಯ ಉತ್ಸವ

• ಬಿ.ವಿ. ಶ್ರೀನಾಥ್

ಜೈಪುರ: ಪ್ರತಿಷ್ಠಿತ ಜೈಪುರ ಸಾಹಿತ್ಯ ಉತ್ಸವದ (ಜೆಎಲ್‌ಎಫ್) 19ನೇ ಆವೃತ್ತಿ ಗುರುವಾರ (ಜ.15) ಆರಂಭವಾಗಲಿದೆ. ‘ಪಿಂಕ್ ಸಿಟಿ’ಯ ಕ್ಲಾರ್ಕ್ಸ್ ಆಮೆರ್ ಹೋಟೆಲ್‌ನಲ್ಲಿ 19ರವರೆಗೂ ದೇಶ ಹಾಗೂ ಜಾಗತಿಕ ವಿಚಾರಗಳ ಬಗ್ಗೆ ಚಿಂತನ ಮಂಥನ ನಡೆಯಲಿದೆ.

ಹಿಂದೆಂದಿಗಿಂತಲೂ ಹೆಚ್ಚಿನ ಗೋಷ್ಠಿಗಳಿಗೆ ಈ ಬಾರಿ ಸಾಹಿತ್ಯಪ್ರಿಯರು ಸಾಕ್ಷಿಯಾಗಲಿದ್ದಾರೆ. 300ಕ್ಕೂ ಹೆಚ್ಚಿನ ಗೋಷ್ಠಿಗಳು ಆಯೋಜನೆಯಾಗಿದ್ದು, ಭಾರತವೂ ಸೇರಿದಂತೆ ಜಗತ್ತಿನ ವಿವಿಧ ದೇಶ-ಭಾಷೆಗಳ 500ಕ್ಕೂ ಹೆಚ್ಚು ವಿಷಯ ತಜ್ಞರು ತಮ್ಮ ಹೊಳಹುಗಳನ್ನು ಹಂಚಿಕೊಳ್ಳಲಿದ್ದಾರೆ.

ಸಾಹಿತ್ಯ, ಇತಿಹಾಸ, ರಾಜಕಾರಣ, ವಿಜ್ಞಾನ, ತಂತ್ರಜ್ಞಾನ, ಹವಾಮಾನ ಬದಲಾವಣೆ, ಜಾಗತಿಕ ವಿದ್ಯಮಾನ ಸೇರಿದಂತೆ ವೈವಿಧ್ಯಮಯ ವಿಚಾರಗಳು ಉತ್ಸವದಲ್ಲಿ ಭಾಗವಹಿಸಲಿರುವ ಸಾಹಿತ್ಯಾಸಕ್ತರಿಗೆ ವಿಶಿಷ್ಟ ಅನುಭವ ನೀಡಲಿವೆ ಎನ್ನುವುದು ಆಯೋಜಕರ ವಿಶ್ವಾಸ.

ಗಾಥ ಕಲ್ಪನೆ ಮತ್ತು ದಿಟ್ಟ ನಿರೂಪಣೆಗಳಿಂದ ಕೂಡಿದ ಸಾಹಿತ್ಯ ಕೃತಿಗಳು ಈ ಬಾರಿ ಉತ್ಸವದಲ್ಲಿ ಚರ್ಚೆಯಾಗಲಿವೆ. ಕನ್ನಡದ ಬಾನು ಮುಷ್ತಾಕ್ ಅವರ, ದೀಪಾ ಭಾಸ್ತಿ ಅನುವಾದಿಸಿರುವ ಅಂತರರಾಷ್ಟ್ರೀಯ ಬುಕರ್ ವಿಜೇತ ಕೃತಿ ‘ದ ಹಾರ್ಟ್ ಲ್ಯಾಂಪ್’ ಬಗ್ಗೆ ಸಂವಾದ ನಡೆಯಲಿದೆ. ಇದರ ಜತೆಗೆ, ಕಿರಣ್ ದೇಸಾಯಿ, ಗೋಪಾಲಕೃಷ್ಣ ಗಾಂಧಿ ಅವರ ಕೃತಿಗಳ ಬಗ್ಗೆಯೂ ಚರ್ಚೆ ನಡೆಯಲಿದೆ.

ನೊಬೆಲ್ ಪ್ರಶಸ್ತಿ ಪುರಸ್ಕೃತರು, ಲೇಖಕರು, ಇತಿಹಾಸಕಾರರು ಉತ್ಸವದ ಭಾಗವಾಗಲಿದ್ದಾರೆ. ಎಸ್ತರ್ ಡುಫ್ಲೋ, ಆನ್ ಆಪಲ್‌ಬಾಮ್, ಸ್ಟೀಫನ್ ಗ್ರೀನ್‌ಬ್ಲಾಟ್, ಟಿಮ್ ಬರ್ನರ್ಸ್-ಲೀ ಮತ್ತು ಫ್ರೆಡ್ರಿಕ್ ಲೋಗೆವಾಲ್ ಅವರಂತಹ ಜಾಗತಿಕ ಗಣ್ಯರ ಜತೆಗೆ ಭಾರತದ ಸುಧಾ ಮೂರ್ತಿ, ಶೋಭಾ ಡೇ, ಪ್ರಸೂನ್ ಜೋಶಿ, ನವತೇಜ್ ಸರ್ನಾ, ಅನುರಾಧ ರಾಯ್, ಜೀತ್ ಥೈಲ್, ಅಶ್ವಿನ್ ಸಂಘಿ, ಗುರುಚರಣ್ ದಾಸ್ ಮತ್ತು ಆನಂದ್ ನೀಲಕಂಠನ್ ಮುಂತಾದವರು ಇರಲಿದ್ದಾರೆ. ಚಿತ್ರ ಸಾಹಿತಿ ಜಾವೇದ್ ಅಖ್ತರ್, ಚೆಸ್ ಆಟಗಾರ ವಿಶ್ವನಾಥನ್ ಆನಂದ್ ಅವರು ಸಭಿಕರ ಮುಂದೆ ತಮ್ಮ ಬದುಕಿನ ಪುಟಗಳನ್ನು ತೆರೆದಿಡಲಿದ್ದಾರೆ.

ಜಾಗತಿಕ ಮಟ್ಟದಲ್ಲಿ ಪ್ರಸಿದ್ಧರಾಗಿರುವ ಖ್ಯಾತ ಬ್ರಿಟಿಷ್ ಲೇಖಕ, ನಟ ಸ್ಟೀಫನ್ ಫ್ರೈ ಅವರು ರಂಗಭೂಮಿ, ದೃಶ್ಯ ಮಾಧ್ಯಮ, ಸಾಹಿತ್ಯ ಮತ್ತು ಹಾಸ್ಯ ಇತ್ಯಾದಿ ಪ್ರಕಾರಗಳಲ್ಲಿನ ತಮ್ಮ ಸಾಧನೆಯ ಕುರಿತ ಒಳನೋಟಗಳನ್ನು ತಮ್ಮ ಎಂದಿನ ಹಾಸ್ಯದೊಂದಿಗೆ ಅನಾವರಣಗೊಳಿಸಲಿದ್ದಾರೆ.

ಜಗತ್ತಿನ ವಿವಿಧ ದೇಶಗಳ ಪ್ರತಿಭಾಶಾಲಿಗಳೂ ಉತ್ಸವದಲ್ಲಿ ಭಾಗವಹಿಸಲಿದ್ದಾರೆ. ಪುಲಿಟ್ಜರ್ ಪ್ರಶಸ್ತಿ ಪುರಸ್ಕೃತರಾದ ಪರ್ಸಿವಲ್ ಎವರೆಟ್, ಜನಪ್ರಿಯ ಲೇಖಕ ಮತ್ತು ಆಧ್ಯಾತ್ಮಿಕ ಮಾರ್ಗದರ್ಶಕ ಗೌರ್ ಗೋಪಾಲ್ ದಾಸ್, ಪ್ರಮುಖ ನ್ಯೂಟ್ರಿಷಿಯನ್ ಋಜುತಾ ದ್ವಿವೇಕರ್, ಹೆಸರಾಂತ ಹಾಸ್ಯ ಕಲಾವಿದ, ನಟ ವೀರ್ ದಾಸ್, ವರ್ಲ್ಡ್ ವೈಡ್ ವೆಬ್‌ನ ಸಂಶೋಧಕ ಸರ್ ಟಿಮ್ ಬರ್ನರ್ಸ್ ಲೀ, ವಿಕಿಪಿಡಿಯಾದ ಸಹಸಂಸ್ಥಾಪಕ ಜಿಮ್ಮಿ ವೇಲ್ಸ್ ಮುಂತಾದವರು ತಮ್ಮ ಸಾಧನೆಗಳ ಬಗ್ಗೆ ಮಾತನಾಡಲಿದ್ದಾರೆ.



ಜೈಪುರ ಸಾಹಿತ್ಯ ಉತ್ಸವದ ಸಹಸಂಸ್ಥಾಪಕರಾದ ವಿಲಿಯಂ ಡಾಲ್‌ರಿಂಪಲ್, ನಮಿತಾ ಗೋಖಲೆ ಮತ್ತು ಸಂಜಯ್ ಕೆ.ರಾಯ್

25ಕ್ಕೂ ಹೆಚ್ಚು ದೇಶಗಳ ಭಾಷಣಕಾರರು ಭಾಗವಹಿಸುತ್ತಿದ್ದು, ಸಾಂಸ್ಕೃತಿಕ ವಿನಿಮಯದ ಶಕ್ತಿ ನಿರಂತರ ಮೌಲ್ಯಕ್ಕೆ ಈ ಬಾರಿಯ ಸಾಹಿತ್ಯ ಉತ್ಸವ ಸಾಕ್ಷಿಯಾಗಲಿದೆ
ಸಂಜಯ್ ಕೆ.ರಾಯ್
ಲೇಖಕ, ಜೆಎಲ್‌ಎಫ್ ಸಹ ಸಂಸ್ಥಾಪಕ


ಸಾಹಿತ್ಯವಷ್ಟೇ ಅಲ್ಲ

ಸಾಹಿತ್ಯದ ಜತೆಯಲ್ಲೇ ಮನುಷ್ಯರ ಜೀವನವನ್ನು ಪ್ರಭಾವಿಸುವ ಇತರ ಅಂಶಗಳ ಬಗೆಗೂ ಗೋಷ್ಠಿಗಳನ್ನು ನಡೆಸುವುದು ಜೈಪುರ ಸಾಹಿತ್ಯ ಉತ್ಸವದಲ್ಲಿ ಹಿಂದಿನಿಂದಲೂ ನಡೆದುಬಂದಿದೆ.

ಈ ಬಾರಿ ದೇವೇಶ್ ಕಪೂರ್ ಮತ್ತು ಅರವಿಂದ ಸುಬ್ರಮಣಿಯನ್ ಅವರು ಭಾರತದ ಅಭಿವೃದ್ಧಿ, ಆರ್ಥಿಕ ಬದಲಾವಣೆ, ಪ್ರಜಾಪ್ರಭು-ತ್ವದ ಅಸಾಮಾನ್ಯ ಪಯಣವನ್ನು ವಿಶ್ಲೇಷಿಸಿದರೆ, ರಾಮನ್ ಮ್ಯಾಗ್ಸೆಸೆ ಪುರಸ್ಕೃತರಾದ ಸಫೀನಾ ಹುಸೇನ್ ಅವರು ಶಿಕ್ಷಣ, ಸಮಾನತೆ, ಸಾಮಾಜಿಕ ಬದಲಾವಣೆಯ ಬಗ್ಗೆ ತಮ್ಮ ಅನುಭವ ಹಂಚಿಕೊಳ್ಳಲಿದ್ದಾರೆ. ಕಲಾವಿದರೂ ಗೂಗಲ್ ಡೀಪ್ ಮೈಂಡ್‌ನ ಸಂಶೋಧಕ ಅಲಿ ಎಸ್ಲಮಿ ಅವರು ಡಿಜಿಟಲ್ ಸೃಜನಶೀಲತೆ ಮತ್ತು ಭವಿಷ್ಯದ ತಂತ್ರಜ್ಞಾನಗಳ ಬಗ್ಗೆ ಬೆಳಕು ಚೆಲ್ಲಲಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಸಾಮಾನ್ಯ ಜನರು ಅಪರಾಧ ಮಾಡದೇ ಇರುವುದು ಶಿಕ್ಷೆಯ ಭಯದಿಂದಲೇ ಹೊರತು, ಅದು ಕೆಟ್ಟದು ಎಂದಲ್ಲ.

-ಅರಿಸ್ಟಾಟಲ್

ಸಂಪಾದಕೀಯ

ಇಸ್ರೊ: ಪಿಎಸ್‌ಎಲ್‌ವಿ–ಸಿ62 ವೈಫಲ್ಯ ವಿಮರ್ಶಾತ್ಮಕ ಪರಿಶೋಧನೆ ಅಗತ್ಯ

ಇಸ್ರೊದ ಉಪಗ್ರಹ ಉಡಾವಣಾ ವಾಹನ ಪಿಎಸ್‌ಎಲ್‌ವಿ–ಸಿ62ರ 64ನೇ ಉಡ್ಡಯನವು ಸೋಮವಾರ ವಿಫಲವಾಗಿರುವುದು ದೊಡ್ಡ ನಿರಾಶೆ ಮತ್ತು ಬಾಹ್ಯಾಕಾಶ ಕಾರ್ಯಕ್ರಮಕ್ಕೆ ಆಗಿರುವ ಹಿನ್ನಡೆ. ಪಿಎಸ್‌ಎಲ್‌ವಿಯನ್ನು ಇಸ್ರೊದ ಅತ್ಯಂತ ಬಲಶಾಲಿ ಉಡಾವಣಾ ವಾಹನ ಎಂದು ಪರಿಗಣಿಸಲಾಗಿತ್ತು. ಆದರೆ ಈಗ ಸತತ ಎರಡು ವೈಫಲ್ಯಗಳಿಂದಾಗಿ ಅದರ ಸ್ಥಿರತೆ ಮತ್ತು ವಿಶ್ವಾಸಾರ್ಹತೆಯ ಕುರಿತು ಪ್ರಶ್ನೆಗಳು ಹುಟ್ಟುವಂತಾಗಿದೆ. ಪಿಎಸ್‌ಎಲ್‌ವಿ–ಸಿ62 ವಾಹನದಲ್ಲಿ ಒಂದು ಭೂ ಸರ್ವೇಕ್ಷಣಾ ಉಪಗ್ರಹ ಇಒಎಸ್‌–ಎನ್‌1 ಮತ್ತು ಇತರ 15 ಉಪಗ್ರಹಗಳಿದ್ದವು. ಅವುಗಳಲ್ಲಿ ಕೆಲವು ಸ್ಪೇನ್, ಬ್ರೆಜಿಲ್ ಮತ್ತು ನೇಪಾಳಕ್ಕೆ ಸೇರಿದ್ದಾಗಿದ್ದವು. ಡಿಆರ್‌ಡಿಒ ಅಭಿವೃದ್ಧಿಪಡಿಸಿದ್ದ ಇಒಎಸ್‌–ಎನ್‌1 ಅತ್ಯಾಧುನಿಕ ಕಣ್ಗಾವಲು ಸೇರಿದಂತೆ ನಾಗರಿಕ ಮತ್ತು ರಕ್ಷಣಾ ಉದ್ದೇಶವನ್ನು ಹೊಂದಿತ್ತು. ರಾಕೆಟ್ ಹಾದಿ ತಪ್ಪುವುದರೊಂದಿಗೆ ಈ ಎಲ್ಲ ಉಪಗ್ರಹಗಳು ನಷ್ಟವಾಗಿವೆ. 2025ರ ಮೇ ತಿಂಗಳಿನಲ್ಲಿಯೂ ಪಿಎಸ್‌ಎಲ್‌ವಿ–ಸಿ61 ವಿಫಲವಾಗಿತ್ತು. ಅದರಲ್ಲಿಯೂ ಭೂ ಸರ್ವೇಕ್ಷಣಾ ಉಪಗ್ರಹ ಇಒಎಸ್‌–09 ಇತ್ತು. ಅದೂ ನಷ್ಟವಾಗಿತ್ತು. ರಾಕೆಟ್ ಭೂ ಸಮೀಪದ ಕಕ್ಷೆಯನ್ನು ಪ್ರವೇಶಿಸುವಾಗ ಹಾರಾಟದ ಮೂರನೇ ಹಂತದಲ್ಲಿ ಕಾಣಿಸಿಕೊಂಡ ಸಮಸ್ಯೆಯ ಕಾರಣಕ್ಕೆ ಎರಡೂ ಯೋಜನೆಗಳು ವಿಫಲವಾಗಿವೆ ಎಂದು ಗುರುತಿಸಲಾಗಿದೆ.

ಕಳೆದ ವರ್ಷ ಕಾಣಿಸಿಕೊಂಡ ಸಮಸ್ಯೆಗೆ ಪರಿಹಾರ ಕಂಡುಕೊಂಡ ಬಳಿಕ ಈ ವರ್ಷದ ಉಡ್ಡಯನ ನಡೆಸಬೇಕು ಎಂದು ನಿರೀಕ್ಷಿಸಲಾಗಿತ್ತು. ಎಂಜಿನ್‌ನ ಮೂರನೇ ಹಂತದಲ್ಲಿ ಇಂಧನ ದಹನ ಚೇಂಬರ್‌ನಲ್ಲಿ ಒತ್ತಡ ಕುಸಿತವಾಗಿದ್ದು ಕಳೆದ ವರ್ಷ ಉಂಟಾದ ವೈಫಲ್ಯಕ್ಕೆ ಕಾರಣ ಎಂದು ಹೇಳಲಾಗಿದೆ. ಈ ಬಾರಿ ಉಂಟಾದ ಸಮಸ್ಯೆ ಏನು ಎಂಬುದನ್ನು ನಿಖರವಾಗಿ ಕಂಡುಕೊಳ್ಳಲು ಸಮಯ ಬೇಕಾಗಬಹುದು. ಹಾರಾಟದ ಮೂರನೇ ಹಂತದಲ್ಲಿ ಎದುರಾದ ಅಡಚಣೆ ಏನು ಎಂಬುದನ್ನು ತಿಳಿದುಕೊಳ್ಳಲು ವಿವರವಾದ ವಿಶ್ಲೇಷಣೆ ಆರಂಭಿಸಲಾಗಿದೆ ಎಂದು ಇಸ್ರೊ ಹೇಳಿದೆ. ಇಸ್ರೊದ ಪ್ರತಿಯೊಂದು ಕಾರ್ಯಕ್ರಮದಲ್ಲಿಯೂ ಅದರ ಪ್ರತಿಷ್ಠೆ, ವಾಣಿಜ್ಯ ಮತ್ತು ವೈಜ್ಞಾನಿಕ ಯೋಜನೆಗಳಿಗೆ ಸಂಬಂಧಿಸಿದ ಅಂಶಗಳು ಇರುತ್ತವೆ. ಪ್ರತಿ ಬಾರಿಯೂ ಎಂಜಿನಿಯರಿಂಗ್ ಯೋಚನೆಗಳು ಪರಿಷ್ಕರಣೆಗೊಳ್ಳುತ್ತವೆ ಮತ್ತು ಮೇಲ್ದರ್ಜೆಗೆ ಏರುತ್ತವೆ. ಇಸ್ರೊ ಈ ಹಿಂದೆಯೂ ತನ್ನ ವೈಫಲ್ಯಗಳಿಂದ ಪಾಠ ಕಲಿತುಕೊಂಡಿದೆ ಮತ್ತು ಮುಂದಿನ ವರ್ಷಗಳಲ್ಲಿ ಕಾರ್ಯಕ್ಷಮತೆಯನ್ನು ಉತ್ತಮಪಡಿಸಿಕೊಂಡಿದೆ. ಆದರೆ, ಈಗ ಮೇಲಿಂದ ಮೇಲೆ ಆಗಿರುವ ವೈಫಲ್ಯಗಳು ಸಂಸ್ಥೆಯ ಮೇಲಿದ್ದ ನಂಬಿಕೆ ಮತ್ತು ವಿಶ್ವಾಸಾರ್ಹತೆಗೆ ಹಾನಿ ಉಂಟು ಮಾಡುತ್ತವೆ. ಕಾರ್ಯಕ್ರಮಗಳ ಯಶಸ್ಸಿನ ದಾಖಲೆ ಮತ್ತು ಅಂತರರಾಷ್ಟ್ರೀಯ ಮಾನದಂಡಗಳಿಗೆ ಹೋಲಿಸಿದರೆ ಕಡಿಮೆ ವೆಚ್ಚದಲ್ಲಿ ಉಡ್ಡಯನ ಮಾಡುವ ಸಾಮರ್ಥ್ಯವೇ ಇಸ್ರೊಕ್ಕೆ ಖ್ಯಾತಿ ತಂದು ಕೊಟ್ಟಿರುವ ಅಂಶ. ಹಲವು ದೇಶಗಳು, ಸಂಘಟನೆಗಳು ಮತ್ತು ಖಾಸಗಿ ಕಂಪನಿಗಳು ವಿವಿಧ ಉದ್ದೇಶಗಳಿಗಾಗಿ ಬಾಹ್ಯಾಕಾಶ ಆವಿಷ್ಕಾರದ ಮೇಲೆ ಆಸಕ್ತಿ ಹೊಂದಿವೆ. ಬೇಡಿಕೆ ಹೆಚ್ಚು ಇದೆ ಮತ್ತು ಉಡ್ಡಯನ ಸಾಮರ್ಥ್ಯವು ಸೀಮಿತವಾಗಿದೆ. ಮಾರುಕಟ್ಟೆಯಲ್ಲಿ ಇಸ್ರೊ ತನ್ನ ಸ್ಥಾನ ಮತ್ತು ಇರುವ ಅವಕಾಶಗಳನ್ನು ಕಳೆದುಕೊಳ್ಳಬಾರದು. ವಿಫಲಗೊಂಡ ಉಡ್ಡಯನದಲ್ಲಿ ಕಳೆದುಹೋದ ಉಪಗ್ರಹಗಳನ್ನು ಮರಳಿ ಬಾಹ್ಯಾಕಾಶಕ್ಕೆ ಸೇರಿಸಲು ದೀರ್ಘ ಸಮಯ ಬೇಕಾಗುತ್ತದೆ. ಹಲವು ಉಪಗ್ರಹಗಳು ನಿರ್ದಿಷ್ಟ ಅವಧಿಯಲ್ಲಿ ನಿರ್ದಿಷ್ಟ ಉದ್ದೇಶಗಳನ್ನು ಹೊಂದಿದ್ದವು. ಉಡ್ಡಯನದ ವೈಫಲ್ಯದಿಂದಾಗಿ ಈ ಎಲ್ಲ ಯೋಜನೆಗಳು ಏರುಪೇರಾಗುತ್ತವೆ.



ಇಸ್ರೊದ ಇತ್ತೀಚಿನ ವೈಫಲ್ಯ ಅದರ ವರ್ಚಸ್ಸಿಗೆ ಧಕ್ಕೆ ಉಂಟುಮಾಡುವಂತಹದ್ದು. ಮಹತ್ವಾಕಾಂಕ್ಷಿ ಗುರಿಗಳನ್ನು ಹೊಂದಿರುವ ಇಸ್ರೊ, ತನ್ನ ವೈಫಲ್ಯಗಳ ಬಗ್ಗೆ ಸಮಗ್ರ ವಿಮರ್ಶಾತ್ಮಕ ಅವಲೋಕನ ನಡೆಸುವುದು ಅಗತ್ಯ.

ತಪ್ಪುಗಳನ್ನು ತಿದ್ದಿಕೊಳ್ಳಬಲ್ಲೆ ಎಂಬುದನ್ನು ಎಲ್ಲರಿಗೂ ಮನವರಿಕೆ ಮಾಡಿಕೊಡುವ ಹೊಣೆಗಾರಿಕೆ ಇಸ್ರೊ ಮೇಲೆ ಇದೆ. ಹಾಗೆಯೇ ತನ್ನ ಅತ್ಯಂತ ವಿಶ್ವಾಸಾರ್ಹ ಉಡ್ಡಯನ ವಾಹನದ ಸತತ ವೈಫಲ್ಯದಿಂದಾಗಿ ಮೂಡಿರುವ ಸಂದೇಹಗಳನ್ನೂ ನಿವಾರಿಸಬೇಕಿದೆ. ಇಸ್ರೊದ ಮುಂದೆ ಈಗ ಅತ್ಯಂತ ಮಹತ್ವಾಕಾಂಕ್ಷಿಯಾದ ಗಗನಯಾನ ಮತ್ತು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಸ್ಥಾಪನೆಯಂತಹ ಕಾರ್ಯಕ್ರಮಗಳು ಇವೆ. ಇಸ್ರೊದ ಈವರೆಗಿನ 105 ಉಡಾವಣೆಗಳ ಪೈಕಿ 64ರಲ್ಲಿ ಪಿಎಸ್‌ಎಲ್‌ವಿ ವಾಹನ ಬಳಕೆಯಾಗಿದೆ. ನಾಲ್ಕು ಉಡ್ಡಯನಗಳು ಮಾತ್ರ ವಿಫಲವಾಗಿವೆ. ಆದರೆ, ಯಶಸ್ಸನ್ನು ನಾವು ಉಪೇಕ್ಷಿಸಬಹುದು, ವೈಫಲ್ಯಗಳ ಸಂದರ್ಭದಲ್ಲಿ ಸಮಗ್ರವಾದ ವಿಮರ್ಶಾತ್ಮಕವಾದ ಪರಿಶೋಧನೆ ಅನಿವಾರ್ಯವಾಗುತ್ತದೆ.

ಚಾಟಿ

ಆತ್ಮ ಪರಿಶೀಲನೆ



ಹಣವನ್ನೇ ಮುಖ್ಯವಾಗಿ ನೋಡುವ ಚಿತ್ರರಂಗ ಸ್ವಯಂ ನಿಯಂತ್ರಣ ಮಾಡಿಕೊಳ್ಳುವುದಿಲ್ಲ; ಸಾರ್ವಜನಿಕ ಪ್ರತಿಭಟನೆಗಳು ಮಾತ್ರ ಸಿನಿಮಾ ನಿರ್ಮಾಣ ಮಾಡುವವರನ್ನು ಆತ್ಮ ಪರಿಶೀಲನೆಗೆ ಒತ್ತಾಯಿಸುತ್ತವೆ.

ಚೇತನ್ ‘ಅಹಿಂಸಾ’, ನಟ, ‘ಎಕ್ಸ್’ನಿಂದ

ಕಿಡಿನುಡಿ



ಬೆಂಗಳೂರಿನಲ್ಲಿ ಸುಮಾರು 2 ಲಕ್ಷ ಅಕ್ರಮ ಬಾಂಗ್ಲಾ ವಲಸಿಗರು ನೆಲಸಿದ್ದಾರೆಂದು ವಲಸಿಗರೇ ಒಪ್ಪಿಕೊಳ್ಳುತ್ತಿದ್ದಾರೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ರಾಜ್ಯದ ಶಾಂತಿ, ಸಾಮಾಜಿಕ ಸೌಹಾರ್ದ, ಕಾನೂನು–ಸುವ್ಯವಸ್ಥೆಗೆ ಧಕ್ಕೆಯಾಗುವುದು ಕಟ್ಟಿಟ್ಟ ಬುತ್ತಿ.

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 15-1-2001

• **ಫಾರೂಕ್ ಹತ್ಯೆಗೆ ವಿಫಲ ಯತ್ನ**

ಶ್ರೀನಗರ, ಜ. 14 (ಪಿಟಿಐ)– ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಅವರ ಹತ್ಯೆಗೆ ಇಂದು ಉಗ್ರಗಾಮಿಗಳು ವಿಫಲ ಯತ್ನ ಮಾಡಿದರು.

ಫಾರೂಕ್ ಅವರು ಹಬ್ಬಕಡಲ್‌ನಲ್ಲಿ ಝೀಲಂ ನದಿಯ ಮೇಲೆ ಸೇತುವೆ ಉದ್ಘಾಟಿಸಿ ಭಾಷಣ ಮಾಡುತ್ತಿದ್ದಾಗ ಎರಡು ರೈಫಲ್ ಗ್ರೆನೇಡ್‌ಗಳನ್ನು ಅವರತ್ತ ಹಾರಿಸಲಾಯಿತು. ಒಂದು ಗ್ರೆನೇಡ್ ನದಿಗೆ ಬಿತ್ತು. ಮತ್ತೊಂದು ಸಮಾರಂಭ ಸ್ಥಳದ ಹೊರಗೆ ಸ್ಫೋಟಗೊಂಡಿತು ಎಂದು ಅಧಿಕೃತ ಮೂಲಗಳು ತಿಳಿಸಿವೆ. ಈ ಘಟನೆಯಲ್ಲಿ ಯಾವುದೇ ಪ್ರಾಣ ಹಾನಿಯಾಗಿಲ್ಲ. ಮಧ್ಯಾಹ್ನ ಸುಮಾರು 12.30ರಲ್ಲಿ ಈ ಘಟನೆ ನಡೆಯಿತು. ಈ ದಾಳಿ ನಡೆದ ನಂತರ ಕೆಲಕಾಲ ಕಾರ್ಯಕ್ರಮ ಮುಂದುವರಿಕೆಗೆ ಧಕ್ಕೆಯಾಯಿತು.

• **ಸಾಗರ: ಇನ್ನೂ ಐದು ಮಕ್ಕಳ ಜೀತಮುಕ್ತಿ**

ಸಾಗರ, ಜ. 14– ಸಾಗರ ತಾಲ್ಲೂಕಿನ ಹಸಿರುಮಕ್ಕಿಯಲ್ಲಿ ತಮಿಳು ಬೆಸ್ತ ಕುಟುಂಬಗಳಲ್ಲಿ ಜೀತಕ್ಕಿದ್ದ ಇನ್ನೂ ಐದು ಮಕ್ಕಳನ್ನು ನಿನ್ನೆ ಸಂಜೆ ಜೀತಮುಕ್ತಿಗೊಳಿಸಲಾಗಿದೆ.

ಹಸಿರುಮಕ್ಕಿಯ ಚಿನ್ನತಂಗವೇಲು ಎಂಬಾತನ ಬಳಿ ಜೀತ ಮಾಡುತ್ತಿದ್ದ ತಮಿಳುನಾಡಿನ ಸೇಲಂನ ಕುಮಾರ (18), ಕಾರ್ತಿಕ (16), ಗಣೇಶ ಎಂಬಾತನ ಬಳಿ ಜೀತ ಮಾಡುತ್ತಿದ್ದ ಸೇಲಂನ ಮುತ್ತುಕೃಷ್ಣ (18), ಬೆಂಗಳೂರಿನ ಮೆಜೆಸ್ಟಿಕ್‌ನ ಮಂಜು (10) ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮನಗರಂನ ಅಲ್ಲಾಭಕ್ಷ್ (13) ಅವರನ್ನು ರಕ್ಷಿಸಲಾಗಿದೆ.

75 ವರ್ಷಗಳ ಹಿಂದೆ

ಸೋಮವಾರ, 15-1-1951

• **ಗಾಂಧಿ ಸಮಾಧಿ ಬಳಿ ನೆಡಲು ಆಲಿವ್ ಸಸಿ**

ನವದೆಹಲಿ, ಜ. 14– ಪ್ಲೇಟೊ ಮತ್ತು ಸಾಕ್ರಟೀಸರ ವಿದ್ಯಾಮಂದಿರದಲ್ಲಿದ್ದ ತೋಟದಿಂದ ಒಂದು ಆಲಿವ್ ಸಸಿಯನ್ನು ಮಹಾತ್ಮ ಗಾಂಧೀಜಿಯವರ ಜ್ಞಾಪಕಾರ್ಥ ಅವರ ಸಮಾಧಿಯ ಬಳಿ ನೆಡಲು ಗ್ರೀಸ್ ಸರಕಾರದವರು ತಮ್ಮ ಗೌರವ ಸಲ್ಲಿಕೆಯ ಸೂಚ್ಯರ್ಥವಾಗಿ ಕಳುಹಿಸಿದ್ದಾರೆ.

ಗೃಹ ಸಚಿವ ಸಿ. ರಾಜಗೋಪಾಲಾಚಾರಿಯವರು ಸೋಮವಾರ ಬೆಳಗ್ಗೆ ಈ ಸಸಿಯನ್ನು ಸಮಾಧಿ ಪಕ್ಕದಲ್ಲಿ ನೆಡುವರು.

ಶಾಂತಿ ಸೂಚಕವಾದ ಆಲಿವ್ ಸಸಿಯನ್ನು ಗ್ರೀಸ್ ಸರಕಾರ ಈಗ ನಡೆಯುತ್ತಿರುವ ಎಂಜಿನಿಯರಿಂಗ್ ಸಮ್ಮೇಳನಕ್ಕೆ ತಮ್ಮಲ್ಲಿಂದ ಪ್ರತಿನಿಧಿಯಾಗಿ ಬಂದಿರುವ ಎಂ. ಪೆಟ್ರೊ ಪಲಸ್‌ರ ಮೂಲಕ ಕಳಿಸಿಕೊಟ್ಟಿದೆ.

ಗಾಡ್ಗೀಳ್ ಕಂಡ ಕಬ್ಬಿಣದ ತ್ರಿಭುಜ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಪ್ರೊ. ಮಾಧವ ಗಾಡ್ಗೀಳರು ವಿಶ್ವಮಾನ್ಯ ವಿಜ್ಞಾನಿ ಅಷ್ಟೇ ಅಲ್ಲ, ಅಪ್ರತಿಮ ಮಾನವತಾವಾದಿ ಕೂಡ. ಪ್ರಧಾನ ಮಂತ್ರಿಯ ಸಲಹಾ ಸಮಿತಿಯ ಸದಸ್ಯರೂ, ಅನೇಕ ಯೋಜನಾ ಪ್ರಕ್ರಿಯೆಗಳ ಸಂಯೋಜಕರೂ ಆಗಿದ್ದ ಇವರು, ತಳಮಟ್ಟದ ಜನಸಮುದಾಯಗಳ ಒಡನಾಡಿಯೂ ಆಗಿದ್ದರು.

1975ರ ಒಂದು ದಿನ: ಕೀಟನಾಶಕ ವಿಷಗಳ ಮೂಟೆಯನ್ನು ಒಯ್ಯುತ್ತಿದ್ದ ಟ್ರ್ಯಾಕ್ಟರ್ ಹೇಗೋ ಪಕ್ಕದ ನಾಲೆಗೆ ಮಗುಚಿ ಬಿತ್ತು. ಅದು ಬೆಂಗಳೂರಿಗೆ ಕುಡಿಯುವ ನೀರನ್ನು ಪೂರೈಸುತ್ತಿದ್ದ ನಾಲೆಯಾಗಿತ್ತು. ಪತ್ರಿಕೆಗಳಲ್ಲಿ ಸುದ್ದಿ ಬಂದಿದ್ದೇ ತಡ, ಜಲಮಂಡಳಿಯ ಅಧಿಕಾರಿಯೊಬ್ಬ ನೀರು ತುಂಬಿದ ಬಾಟಲಿ ಹಿಡಿದು ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಯೋಗಶಾಲೆಗೆ ಬಂದ. ‘ಈ ನೀರಲ್ಲಿ ವಿಷದ ಅಂಶ ಇಲ್ಲವೆಂದು ಪ್ರಮಾಣಪತ್ರ ಕೊಡಿ. ಜನ ಕಂಗಾಲಾಗಿದ್ದಾರೆ’ ಎಂದ. ವಿಜ್ಞಾನಿ ಡಾ. ವಸಂತರಾಜನ್ ಹಾಗೆ ಮಾಡಲು ಸುತರಾಂ ನಿರಾಕರಿಸಿದರು. ‘ನೀವು ನೀರಿನ ಸ್ಯಾಂಪಲ್ಲನ್ನು ಎಲ್ಲಿಂದ ತಂದಿರುವಿರೋ ಗೊತ್ತಿಲ್ಲ; ನಾವೇ ಹೋಗಿ ನಾಲೆಯ ನೀರನ್ನು ತಂದು ವಿಶ್ಲೇಷಣೆ ಮಾಡಿ ವರದಿ ಕೊಡುತ್ತೇವೆ’ ಎಂದರು. ಅಧಿಕಾರಿ ತಕರಾರು ಎತ್ತಿದ. ‘ಸರ್ಕಾರಿ ಸಂಬಳ ಪಡೆಯುವ ನೀವು ಸರ್ಕಾರದ ವಿನಂತಿಯನ್ನು ಮಾನ್ಯ ಮಾಡಲೇಬೇಕು’ ಎಂದೆಲ್ಲ ಗುರ್ರೆಂದ. ವಿಜ್ಞಾನಿ ಜಪ್ಪೆನ್ನಲಿಲ್ಲ. ಕೊನೆಗೂ ಆ ಅಧಿಕಾರಿ, ‘ನೀವಲ್ಲದಿದ್ದರೆ ಬೇರೆ ಕಡೆಯಿಂದ ಪ್ರಮಾಣಪತ್ರ ದೊರಕಿಸುವುದು ನಮಗೆ ಗೊತ್ತು’ ಎಂದು ಹೇಳಿ ಹೊರಟ.

ತುಸು ಹಿಂದಷ್ಟೇ ಹಾರ್ವರ್ಡ್‌ನಿಂದ ಬಂದು ಈ ಸಂಸ್ಥೆಗೆ ಸೇರಿದ್ದ ಡಾ. ಮಾಧವ ಗಾಡ್ಗೀಳರ ಎದುರಲ್ಲೇ ಈ ಘಟನೆ ನಡೆದಿತ್ತು. ಅಮೆರಿಕದ ಎಷ್ಟೊಂದು ಆಮಿಷಗಳನ್ನು ಬದಿಗೊತ್ತಿ ಭಾರತದ ಪರಿಸರ ಸಂರಕ್ಷಣೆಗೆ ಏನೆಲ್ಲ ಕೊಡುಗೆ ನೀಡಬೇಕೆಂಬ ಕನಸಿನೊಂದಿಗೆ ಬಂದಿದ್ದ ಈ ಯುವ ವಿಜ್ಞಾನಿಗೆ ಆಘಾತವೇ ಆಗಿತ್ತು. ಈ ದೇಶದಲ್ಲಿ ಪರಿಸರ ವಿಜ್ಞಾನವನ್ನು ಮುನ್ನಡೆಸುವಲ್ಲಿ ಏನೆಲ್ಲ ಸವಾಲು ಎದುರಾದೀತು ಎಂಬ ಮುನ್ನೋಟ ಅವರಿಗೆ ಆಗಲೇ ಸಿಕ್ಕಿತ್ತು.

ಮುಂದೆ ಇಂಥ ಚಿತ್ರಣ ಅವರಿಗೆ ಪದೇ ಪದೇ ಸಿಗುತ್ತಲೇ ಹೋದವು. 1984ರಲ್ಲಿ ಭೋಪಾಲ್ ಅನಿಲ ದುರಂತ ಸಂಭವಿಸಿದ ಮುಂಜಾನೆ ಇವರು ದಿಲ್ಲಿಯ ನ್ಯಾಷನಲ್ ಸೈನ್ಸ್ ಅಕಾಡೆಮಿಯ ಅತಿಥಿಗೃಹದಲ್ಲಿ ಭಾರತೀಯ ವಿಷ ರಸಾಯನಗಳ ಸಂಶೋಧನಾ ಸಂಸ್ಥೆಯ ಮುಖ್ಯಸ್ಥನೊಡನೆ ತಿಂಡಿ ತಿನ್ನುತ್ತಿದ್ದರು. ಯಾರೋ ಒಬ್ಬ ಅಲ್ಲಿಗೆ ಧಾವಿಸಿ ಬಂದ. ಭೋಪಾಲದ ಅನಿಲ ಸೋರಿಕೆಯ ವಿಷಯವನ್ನು ತಿಳಿಸಿ, ‘ನಾವೆಲ್ಲ ತಕ್ಷಣ ಅಲ್ಲಿಗೆ ಹೋಗಿ ಸುದ್ದಿ ಹರಡದಂತೆ ನೋಡಿಕೊಳ್ಳಬೇಕು; ಇಲ್ಲಾಂದರೆ ಈ ದೇಶದ ದರಿದ್ರ ಜನರು ಸುಮ್ಮನೆ ಗಲಾಟೆ ಎಬ್ಬಿಸಿ ಕೈಗಾರಿಕೆಗಳ ಅಭಿವೃದ್ಧಿಯನ್ನೇ ನಿಲ್ಲಿಸಿಬಿಡುತ್ತಾರೆ’ ಎಂದ. ವಿಷಕ್ಕಿಂತ ವಿಷದ ಸುದ್ದಿ ಹರಡದಂತೆ ತಪ್ಪಿಸುವುದೇ ಅಧಿಕಾರಿಗಳ ಮುಖ್ಯ ಉದ್ದೇಶ ಆಗಿತ್ತೆಂದು ಗಾಡ್ಗೀಳ್ ಮನಗಂಡರು.

ಎಪ್ಪತ್ತರ ದಶಕದಲ್ಲಿ ಸ್ವದೇಶಕ್ಕೆ ಮರಳುತ್ತಲೇ ಇವರೂ (ಗಾಂಧೀಜಿಯವರ ಹಾಗೆ) ಭಾರತವನ್ನು ಅರ್ಥ ಮಾಡಿಕೊಳ್ಳಲು ಇಡೀ ದೇಶವನ್ನು ಸುತ್ತುತ್ತಾರೆ. ಅಭಿವೃದ್ಧಿಯ ಹೆಸರಿನಲ್ಲಿ ದಿನದಿನಕ್ಕೆ ನರಕದತ್ತ ಹೊರಳುತ್ತಿರುವ ಆದಿವಾಸಿಗಳ, ಮೀನುಗಾರರ, ಭೂರಹಿತ ಕೃಷಿಕಾರ್ಮಿಕರ, ಬಡರೈತರ ಸಂಕಷ್ಟಗಳನ್ನು ಕಣ್ಣಾರೆ ನೋಡುತ್ತಾರೆ. ನಗರಗಳ ಕೊಳೆಗೇರಿಗೆ ವಲಸೆ ಬಂದ ‘ಪರಿಸರ ನಿರಾಶ್ರಿತ’ರನ್ನು ಮಾತಾಡಿಸುತ್ತಾರೆ. ಪಾಶ್ಚಾತ್ಯರ ದೃಷ್ಟಿಯಲ್ಲಿ ಪರಿಸರಪ್ರಜ್ಞೆ ಎಂದರೆ ಬದುಕಿನ ಗುಣಮಟ್ಟವನ್ನು ಇನ್ನಷ್ಟು ಎತ್ತರಿಸುವುದಾಗಿದ್ದರೆ, ಭಾರತದ ಮಟ್ಟಿಗೆ ಪರಿಸರ ಹೋರಾಟವೆಂದರೆ ತಳವಾಸಿ ಜನರು ‘ಬದುಕುಳಿಯಲು ನಡೆಸುವ ಹೋರಾಟ’ ಎಂಬ ಹೊಸ ಪರಿಕಲ್ಪನೆಯನ್ನು (ರಾಮಚಂದ್ರ ಗುಹಾ ಜೊತೆ ಸೇರಿ) ಮುಂದೊಡ್ಡುತ್ತಾರೆ. ಅನಾದಿ ಕಾಲದಿಂದ ಈ ಭೂಖಂಡದಲ್ಲಿ ವಿಕಾಸವಾಗಿದ್ದ ಗಿಡಮರ, ಜಲಚರ, ಪಶುಪಕ್ಷಿಗಳ ಜೀವಸ್ತೋಮವನ್ನು ರಕ್ಷಿಸಿಕೊಂಡು ಬರುತ್ತಿರುವ ಈ ಬುಡಕಟ್ಟು ಜನರ ಮೇಲೆ ಏನೆಲ್ಲ ಬಗೆಯ ಅವೈಜ್ಞಾನಿಕ ಕಾನೂನುಗಳನ್ನು ಹೇರಲಾಗಿದೆ ಎಂದು ಆಯಾ ಕಾನೂನುಗಳ ಕಲಮುಗಳನ್ನು ಎತ್ತಿ ತೋರಿಸುತ್ತಾರೆ. ಈ ದೇಶದ ಜೀವಪರಿಸರವನ್ನು ರಕ್ಷಿಸಬೇಕೆಂದರೆ ಪರಿಸರಕ್ಕೆ ಹತ್ತಿರವಾಗಿ ಬದುಕುವ ಗ್ರಾಮವಾಸಿಗಳಿಂದ ಸಾಧ್ಯವೇ ಹೊರತೂ ನಗರದ ಆಡಳಿತಶಾಹಿಯಿಂದ ಅದು ಸಾಧ್ಯವಿಲ್ಲ ಎನ್ನುತ್ತಾರೆ.

ಮುಂದೆ ಇವರು ವಿಶ್ವಮಾನ್ಯ ವಿಜ್ಞಾನಿಯಾಗಿ ಬೆಳೆದರೂ ‘ವಿಜ್ಞಾನಿ ಹೇಗಿರಬಾರದು’ ಎಂಬುದಕ್ಕೆ ಪರಮೋಚ್ಚ ಉದಾಹರಣೆಯಂತೆ ರೂಪುಗೊಳ್ಳುತ್ತಾರೆ. ಸಡಿಲ ಜುಬ್ಬಾ–ಪೈಜಾಮ; ದುರ್ಗಮ ನಿಸರ್ಗದ ಅಪಾಯಗಳನ್ನು ಲೆಕ್ಕಿಸದೆ ಸಾಗುವ ಉತ್ಸಾಹ, ಕಾಡಿನ ಹಾಡಿಗಳ ಜನರೊಂದಿಗೆ ಚಳಿ ಕಾಯಿಸುತ್ತ ಅವರು ತಿನ್ನುವುದನ್ನೇ ತಾನೂ ತಿನ್ನುತ್ತ, (ಸೋಲಿಗರ ಜೊತೆ ರಾತ್ರಿ ವೇಳೆಯಲ್ಲಿ ನೆಲ ಬಗೆದು ಇಲಿಗಳನ್ನು ಹಿಡಿದು ಬೇಯಿಸಿ ತಿನ್ನುತ್ತಾರೆ; ‘ರಾಜಮಹಾರಾಜರ, ಬ್ರಿಟಿಷರ ಹಾಗೂ ಬಂದೂಕುಧಾರಿಗಳ ಬೇಟೆಯ ತೆವಲಿನಿಂದಾಗಿ ಸೋಲಿಗರಿಗೆ ಉಳಿದಿದ್ದು ಇಲಿಬೇಟೆಯಷ್ಟೇ’ ಎನ್ನುತ್ತ) ಅವರ ಭಾಷೆಯಲ್ಲೇ ಮಾತಾಡಲು ಯತ್ನಿಸುವ ಮನೋಗುಣ; ಪ್ರಭುತ್ವಕ್ಕೆ ಕ್ಯಾರೇ ಎನ್ನದೇ ತನಗನಿಸಿದ್ದನ್ನು ಹೇಳುವ ಛಾತಿ. ಪರಿಸರ ವಿಜ್ಞಾನದ ಕ್ಲಿಷ್ಟ ಪರಿಕಲ್ಪನೆಗಳು ಸಾಮಾನ್ಯರಿಗೂ ಅರ್ಥವಾಗಲೆಂದು ಕನ್ನಡ, ಕೊಂಕಣಿ, ಮರಾಠಿ ಪತ್ರಿಕೆಗಳಲ್ಲಿ ಅಂಕಣ ಬರೆಯುವ ಆಸಕ್ತಿ, ವಿಜ್ಞಾನದ ಆಚಿನ ವೇದ, ಉಪನಿಷತ್ತು, ಕೌಟಿಲ್ಯನ ಅರ್ಥಶಾಸ್ತ್ರ, ಮರಾಠಿ ಸಪ್ತಶತಿ, ಸಮಾಜವಿಜ್ಞಾನ, ಕಾನೂನು, ಬುಡಕಟ್ಟು ಸಂಪ್ರದಾಯಗಳನ್ನೂ ಅರಗಿಸಿಕೊಂಡೇ ವಾದ ಮಂಡಿಸುವ ಗುಣ; ಸಂಶೋಧನೆ ಮತ್ತು ಪರಿಸರ ಸಂವರ್ಧನೆಗೆ ಹಳ್ಳಿ, ಪಟ್ಟಣಗಳ ಸಂಸ್ಥೆಗಳನ್ನೇ ಸಹಭಾಗಿಯನ್ನಾಗಿ ಮಾಡಿಕೊಳ್ಳುವ ಸ್ವಭಾವ; ಯಾವುದೇ ಜನಸಮೂಹ ಸಂಕಷ್ಟದಲ್ಲಿದ್ದರೂ ಅವರ ಹೋರಾಟಕ್ಕೆ ಬೆಂಬಲ ನೀಡಲೆಂದು ತನಗೆ ಬಂದ ಪ್ರಶಸ್ತಿಗಳ ಹಣವನ್ನೂ ಚಂದಾ ರೂಪದಲ್ಲಿ ನೀಡುವ ಮನೋಗುಣ (ಅವರೇ ಪ್ರಸಿದ್ಧಿಗೆ ತಂದ ‘ಹಳಕಾರ್ ವಿಲೇಜ್ ಫಾರೆಸ್ಟ್’ ಎಂಬ ಜನಪೋಷಿತ ಅರಣ್ಯಕ್ಕೆ ಕಳೆದ ವರ್ಷ ನೂರು ತುಂಬಿದಾಗ ಅದಕ್ಕೆ ನೂರು ಸಾವಿರ ರೂಪಾಯಿಗಳನ್ನು ನೀಡಿದವರು; ಗೋಂಡ್ ಬುಡಕಟ್ಟಿನ ಜನರು ಸುಸ್ಥಿರ ಬದುಕು ಕಟ್ಟಿಕೊಳ್ಳಲೆಂದು 20 ಲಕ್ಷ ರೂಪಾಯಿ ಬಂಡವಾಳ ಹೂಡಲು ಮುಂದಾದವರು).

ಕಾಲೇಜಿನಲ್ಲಿದ್ದಾಗ ಪದಕ ಗೆಲ್ಲುವ ಅಥ್ಲೀಟ್ ಆಗಿದ್ದ ಇವರು ಗಣಿಗಳ ತಪಾಸಣೆಗೆ ಹೋಗಿದ್ದಾಗ ಅಧಿಕಾರಿಗಳ ಎಚ್ಚರಿಕೆಯನ್ನೂ ಧಿಕ್ಕರಿಸಿ ಗುಡ್ಡ ಏರುತ್ತಿದ್ದರು, ಪ್ರಪಾತಕ್ಕೆ ಇಳಿಯುತ್ತಿದ್ದರು. ನಿವೃತ್ತಿಯ ನಂತರ ಭೋಪಾಲದ ಐಐಎಸ್‌ಇಆರ್ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದ ಇವರು ಶಿಥಿಲ ಯೂನಿಯನ್ ಕಾರ್ಬೈಡ್ ಫ್ಯಾಕ್ಟರಿಗೆ ನುಗ್ಗಿ, ತುಕ್ಕು ಹಿಡಿದ ಪೈಪ್ ಏರಿ ಒಳಕ್ಕೆ ತಲೆತೂರಿಸಿ, ಅಲ್ಲಿನ ಪಾದರಸದ ಹನಿಗಳು (ಅನಿಲ ಸೋರಿಕೆಯಾದ 28 ವರ್ಷಗಳ ನಂತರವೂ) ತೊಟ್ಟಿಕ್ಕುತ್ತ ಅಂತರ್ಜಲಕ್ಕೆ ವಿಷ ಸೇರ್ಪಡೆ ಆಗುತ್ತಿರುವುದನ್ನು ದಾಖಲಿಸುತ್ತಾರೆ.

ವಿಜ್ಞಾನಿ ಎಂದರೆ ಸಾರ್ವಕಾಲಿಕ ಸತ್ಯವನ್ನು ಸೂತ್ರರೂಪದಲ್ಲಿ ಮುಂದಿಡಬೇಕು ತಾನೆ? ಗಾಡ್ಗೀಳರು ರಾಮಚಂದ್ರ ಗುಹಾ ಅವರ ಜೊತೆ ಸೇರಿ ನಿರೂಪಿಸಿದ ‘ಗಾಡ್ಗೀಳ್–ಗುಹಾ ವಿಲೋಮ ನಿಯಮ’ ತುಂಬ ಮಜದ್ದಾಗಿದೆ. ಗ್ರಾಮ ಪಂಚಾಯಿತಿಗೆ ಚುನಾಯಿತರಾದರೆ ಕೆರೆ, ನದಿ, ಮೃಗಪಕ್ಷಿ, ಕಾಡುಮೇಡುಗಳ ಕುರಿತು ಜಾಸ್ತಿ ಕಾಳಜಿ ಇರುತ್ತದೆ. ಜಿಲ್ಲಾ ಪಂಚಾಯಿತಿ ಸದಸ್ಯರಲ್ಲಿ ಅದು ತುಸು ಕಮ್ಮಿ ಆಗುತ್ತದೆ. ಶಾಸಕರಲ್ಲಿ ಇನ್ನೂ ಕಮ್ಮಿ ಆಗುತ್ತ, ಸಂಸತ್ ಸದಸ್ಯನಾಗುವ ವೇಳೆಗೆ ಪರಿಸರ ಕಾಳಜಿ ಮಾಯವಾಗುತ್ತದೆ. ಇದು ಅವರ ವಿಲೋಮ ನಿಯಮ.

ಭಾರತದ ಅಭಿವೃದ್ಧಿ ವೈಖರಿಯನ್ನ ಗಾಡ್ಗೀಳ್ ‘ಕಬ್ಬಿಣದ ತ್ರಿಭುಜ’ದ ಮೂಲಕ ನಿರೂಪಿಸಿದ್ದಾರೆ. ರಾಜಕಾರಣಿ, ಗುತ್ತಿಗೆದಾರ/ಎಂಜಿನಿಯರ್ ಮತ್ತು ಅಧಿಕಾರಿ ವರ್ಗ ಎಂಬ ಮೂರು ತ್ರಿಭುಜಗಳಲ್ಲಿ ದೇಶದ ಇಡೀ ಸಂಪತ್ತು ಬಂದಿಯಾಗಿದೆ, ಅದು ಶೀಘ್ರ ಕರಗುತ್ತ ಮಹಲುಗಳಾಗುತ್ತಿವೆ ಎಂದು ಅನೇಕ ಸಂದರ್ಭಗಳಲ್ಲಿ ಸಾಧಾರ ಹೇಳಿದ್ದಾರೆ. ಬೃಹತ್ ಯೋಜನೆಯ ಪರಿಸರ ಪರಿಣಾಮಗಳ ಮೌಲ್ಯಮಾಪನ ಮಾಡುವಾಗ ಎಷ್ಟೊಂದು ಸುಳ್ಳುಗಳ ಸರಮಾಲೆಗಳು ಕಡತಗಳನ್ನು ಸೇರುತ್ತವೆ ಎಂದು ಸೋದಾಹರಣ ವಿವರಿಸುತ್ತಾರೆ. ಇಸ್ರೊ ಅಧ್ಯಕ್ಷ ಸತೀಶ್ ಧವನ್ ಸಲಹೆಯ ಮೇರೆಗೆ ಇವರು ‘ಥುಂಬಾ’ ಕ್ಷಿಪಣಿ ನೆಲೆಯ ಸ್ಥಾಪನೆಗೆ ಮುನ್ನ ಅದರ ಪರಿಸರ ಪರಿಣಾಮದ ಅಧ್ಯಯನಕ್ಕೆ ಹೋಗಿದ್ದಾಗ ದಟ್ಟಕಾಡಿನ ಮಧ್ಯೆ ಕಡಿದು ಸಾಗಿಸಿದ ಬೃಹತ್ ಬೀಟೆ ಮರದ ಬೊಡ್ಡೆಯಲ್ಲೇ ನಿಂತ ಅರಣ್ಯ ರಕ್ಷಣಾಧಿಕಾರಿ ‘ಇದು ವರ್ಜಿನ್ ಕಾಡು ಸಾರ್, ಯಾರೂ ಇದುವರೆಗೆ ಕಾಲಿಟ್ಟಿಲ್ಲ’ ಎಂದು ಹೇಳಿದ್ದನ್ನು ಚಿತ್ರಿಸಿದ್ದಾರೆ. ಬೇಡ್ತಿ ಯೋಜನೆಯ ಪರಿಶೀಲನೆಗೆ ಬಂದ ರಾಜಸ್ತಾನಿ ಎಂಜಿನಿಯರೊಬ್ಬ ಇಂಬಳ ಕಚ್ಚಿಸಿಕೊಂಡು ‘ಇಂಥ ಕ್ರೂರ ಕಾಡುಗಳನ್ನು ಯಾಕೆ ಉಳಿಸಬೇಕ್ರೀ?’ ಎಂದು ಚೀರಾಡಿದ್ದನ್ನು ದಾಖಲಿಸಿದ್ದಾರೆ.

ಎಂಟು ಭಾಷೆಗಳಲ್ಲಿ ಪ್ರಕಟವಾದ ಗಾಡ್ಗೀಳರ ‘ಏರುಘಟ್ಟದ ನಡಿಗೆ’ ಆತ್ಮಕಥೆಯ ಪ್ರತಿ ಅಧ್ಯಾಯದ ಆರಂಭದಲ್ಲೂ ಅವರೇ ರಚಿಸಿದ ಕವನಗಳಿವೆ. ಯೋಜನೆಗಳ ಮೌಲ್ಯಮಾಪನಗಳ ವೈಖರಿ ಕುರಿತ ಅವರ ಕವನ ಹೀಗಿದೆ (ಕನ್ನಡಕ್ಕೆ ತರ್ಜುಮೆ ನನ್ನದು):


ಈ ಮೌಲ್ಯಮಾಪನ ಅಂತಿಂಥದ್ದಲ್ಲಣ್ಣ / ಎಲ್ಲರನ್ನೂ ಏಮಾರಿಸಬಲ್ಲ ಬಹುಬಣ್ಣ/ ಬಗೆಬಗೆಯ ತಜ್ಞರಿಗಿದು ಎಂದಿದ್ದರೂ ಬೇಕು/ ಸಹಿ ಹಾಕಲೇನಡ್ಡಿ ಕಿಸೆ ತುಂಬಿದರೆ ಸಾಕು.

ಕೇರಳ ಮತ್ತು ಗೋವಾದ ಕಲ್ಲು ಕ್ವಾರಿಗಳಲ್ಲಿ ಓಡಾಡಿದ ಅನುಭವಗಳನ್ನು ದಾಖಲಿಸುವ ಅಧ್ಯಾಯಕ್ಕೆ ಅವರ ಕವನ ಹೀಗಿದೆ:

ಕಂಡಲ್ಲಿ ಕ್ವಾರಿ, ಧನದಾಹದ ಮಾರಿ/ ಬಡಜೀವಿಗಳ ಬದುಕಿಗೆ ಇನ್ನೆಲ್ಲಿದೆ ದಾರಿ?/ ಎಲ್ಲೆಲ್ಲಿ ನೋಡಿದರು ಬೆತ್ತಲೆಯೆ ವನಸ್ತ್ರೀ/ ಅದಿನ್ನೆಷ್ಟು ಸಹಿಸೀತು ಕ್ಷಮಯಾಧರಿತ್ರೀ?

ಕೇರಳದಲ್ಲಿ ಶೇ 90ರಷ್ಟು ಅನಧಿಕೃತ ಗಣಿಗಳೇ ಆಗಿದ್ದು ಅದರಿಂದ ಪರಿಸರಕ್ಕೂ, ಜೀವಜಗತ್ತಿನ ಆರೋಗ್ಯಕ್ಕೂ ಕೊನೆಗೆ ಬೊಕ್ಕಸಕ್ಕೂ ಆಗುವ ನಷ್ಟಗಳನ್ನು ವಿವರಿಸುತ್ತಾರೆ. ಗಣಿಗಾರಿಕೆ ದೂಳು ಹೆಚ್ಚಿದ್ದಲ್ಲೆಲ್ಲ ಅಬ್ಬರದ ದಿಢೀರ್ ಜಡಿಮಳೆ ಆಗುವುದಕ್ಕೆ ವೈಜ್ಞಾನಿಕ ಕಾರಣಗಳನ್ನು ನೀಡುತ್ತಾರೆ. ಅಭಿವೃದ್ಧಿಗಾಗಿ ಗಣಿಗಾರಿಕೆ ಅನಿವಾರ್ಯವೇ ಆಗಿದ್ದರೆ ಅಂಥ ಗಣಿಗಳನ್ನು ಮಾಫಿಯಾಗಳಿಂದ ಕಿತ್ತು ಆಯಾ ಊರಿನ ಸಹಕಾರಿ ಸಂಘಗಳಿಗೇ ವಹಿಸಬೇಕೆಂದು ಹೇಳುತ್ತಾರೆ. ಹಾಗೆ ವಹಿಸಿಕೊಂಡು, ಕ್ವಾರಿಗಳ ನಿರ್ವಹಣೆ ಮಾಡುತ್ತಿರುವ ಮಹಿಳಾಸಂಘಗಳನ್ನೂ ಹೆಸರಿಸುತ್ತಾರೆ.

ತಾನು ಕಲ್ಲುಮುಳ್ಳುಗಳ ಕಾಲ್ದಾರಿಯಲ್ಲಿ ಸಾಗುತ್ತ ಹೊಸ ತಲೆಮಾರಿನ ಪರಿಸರ ವಿಜ್ಞಾನಿಗಳಿಗೆಂದು ಸಂಶೋಧನೆಯ ಹೆದ್ದಾರಿಯನ್ನೇ ರೂಪಿಸಿದವರು ಗಾಡ್ಗೀಳ್. ತಳವರ್ಗದ ಜೀವಿಗಳ ಬದುಕು ಸುಸ್ಥಿರವಾಗಲೆಂದು ರೂಪುಗೊಂಡ ಇಂದಿನ ಬಹಳಷ್ಟು ಕಾನೂನುಗಳ ರಚನೆಯಲ್ಲಿ ಅವರ ಪಾತ್ರವೂ ಇತ್ತು. ಆದರೆ, ಅವೆಲ್ಲವೂ ಒಂದೊಂದಾಗಿ ಸಡಿಲಗೊಳ್ಳುತ್ತ, ಉಳ್ಳವರು ನುಗ್ಗುವ ಹೆದ್ದಾರಿಗಳಾಗಿದ್ದನ್ನು ಖೇದದಿಂದ ನೋಡುತ್ತ ಅವರು ನಮ್ಮನ್ನು ಅಗಲಿದ್ದಾರೆ.



ವಾಚಕರ ವಾಣಿ

ಮದ್ಯವ್ಯಸನ ನಿವಾರಣಾ ಕೇಂದ್ರ ತೆರೆಯಿರಿ

ರಾಜ್ಯ ಸರ್ಕಾರ ತನ್ನ ಆದಾಯ ಹೆಚ್ಚಿಸಿಕೊಳ್ಳಲು ಅಬಕಾರಿ ತೆರಿಗೆಯನ್ನು ಇತ್ತೀಚೆಗೆ ಏರಿಸಿತ್ತು. ಅದರಂತೆ ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಆದಾಯ ಬಂದಿರಬಹುದು. ಆದರೆ, ಕೆಲವು ಕುಟುಂಬಗಳ ಸದಸ್ಯರು ಮದ್ಯಕ್ಕೆ ದಾಸರಾಗಿ ಅನಾರೋಗ್ಯಕ್ಕೆ ತುತ್ತಾಗಿದ್ದಾರೆ. ಇದರಿಂದ ಅವರ ಕುಟುಂಬಸ್ಥರು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿ ಕಣ್ಣೀರಿನಲ್ಲಿ ಕೈತೊಳೆಯುವಂತಾಗಿದೆ. ಇಂತಹ ಮದ್ಯವ್ಯಸನಿಗಳನ್ನು ವ್ಯಸನಮುಕ್ತರಾಗಿಸಲು ಸರ್ಕಾರವೇ ವ್ಯಸನಮುಕ್ತ ಕೇಂದ್ರಗಳನ್ನು ಸ್ಥಾಪಿಸಬೇಕಿದೆ. ಆ ಮೂಲಕ ನೊಂದ ಕುಟುಂಬಗಳಿಗೆ ನೆಮ್ಮದಿ ಭಾಗ್ಯ ಕರುಣಿಸಬೇಕಿದೆ.

ಬೊ.ನಾ. ಮಂಜುನಾಥ, ಬೊಮ್ಮೇನಹಳ್ಳಿ

ಸರ್ಕಾರಕ್ಕಿದು ಆಟ: ಗ್ರಾಮೀಣರಿಗೆ ಸಂಕಟ

ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗೆ ಚುನಾವಣೆ ನಡೆದಿದ್ದು 2016ರಲ್ಲಿ. ಆ ಬಳಿಕ ಚುನಾವಣೆಯೇ ನಡೆದಿಲ್ಲ. ಆದರೆ, ಈ ಚುನಾವಣೆ ಬಳಿಕ ಎರಡು ಭಾರಿ ಕರ್ನಾಟಕ ವಿಧಾನಸಭೆಗೆ ಸಾರ್ವತ್ರಿಕ ಚುನಾವಣೆ ನಡೆದಿದೆ. ಪಂಚಾಯತ್‌ರಾಜ್ ವ್ಯವಸ್ಥೆಯೇ ಭಾರತದ ರಾಜಕೀಯ ವ್ಯವಸ್ಥೆಯ ಬುನಾದಿ ಎಂದು ಗಾಂಧೀಜಿ ಹೇಳಿದ್ದಾರೆ. ಅಧಿಕಾರ ವಿಕೇಂದ್ರೀಕರಣದ ಆಶಯ ಈಡೇರಲು ಪಂಚಾಯಿತಿ ಚುನಾವಣೆಗಳು ಅವಶ್ಯಕ.

ಈಗಾಗಲೇ, ಗ್ರಾಮ ಪಂಚಾಯಿತಿಗಳ ಅಧಿಕಾರದ ಅವಧಿ ಮುಗಿದಿದೆ. ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯದೆ ಹೋದರೆ ಗ್ರಾಮೀಣ ಜನರ ಸ್ಥಿತಿ ಏನು? ಹಳ್ಳಿಗರು ಕುಂದುಕೊರತೆ ಹೇಳಿಕೊಳ್ಳಲು ವಿಧಾನಸೌಧಕ್ಕೆ ಬರಬೇಕೆ? ನುಡಿದಂತೆ ನಡೆದ, ನಡೆವ ಸರ್ಕಾರ ಜವಾಬ್ದಾರಿಯಿಂದ ನುಣುಚಿಕೊಳ್ಳಬಾರದು.

ಚಂದ್ರಶೇಖರ ಎಸ್. ಚಿನಕೇಕರ, ಚಿಕ್ಕೋಡಿ

ಜವಾಹರರು ಹೇಳಿದ್ದರಲ್ಲಿ ತಪ್ಪೇನಿದೆ?

ಘಜ್ನಿ ಮಹಮ್ಮದ್ ದಾಳಿಯಿಂದ ಭಗ್ನಗೊಂಡಿದ್ದ ಗುಜರಾತ್‌ನ ಸೋಮನಾಥ ಮಂದಿರದ ಪುನರ್ ನಿರ್ಮಾಣಕ್ಕೆ ಉಪ ಪ್ರಧಾನಿಯಾಗಿದ್ದ ವಲ್ಲಭಭಾಯಿ ಪಟೇಲರು ಮುಂದಾದರು. ಅದಕ್ಕೆ ಆಗ ಪ್ರಧಾನಿಯಾಗಿದ್ದ ಜವಾಹರ ಲಾಲ್ ನೆಹರೂ ವಿರೋಧಿಸಿದ್ದರು ಎಂಬ ಮಾತು ಈಗ ಬಹುಚರ್ಚಿತವಾಗುತ್ತಿದೆ. ಅದು 1948–49ರ ಸಂಗತಿ. ಆಗಷ್ಟೇ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತ್ತು. ದೇಶದಲ್ಲಿ ಅನಕ್ಷರತೆ, ಬಡತನ, ಆಹಾರದ ಕೊರತೆ, ಆರ್ಥಿಕ ಮುಗ್ಗಟ್ಟು ತೀವ್ರವಾಗಿತ್ತು. ಇದನ್ನು ಗಮನದಲ್ಲಿಟ್ಟುಕೊಂಡು ಶಾಲೆ, ಜಲಾಶಯ, ಕಾರ್ಖಾನೆಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ಕೊಡಿ ಎಂದು ನೆಹರೂ ಹೇಳಿದ್ದರು. ಅದು ಆ ಕಾಲಘಟ್ಟದ ಅತ್ಯಂತ ಉಪಯುಕ್ತ ಸಲಹೆಯಾಗಿತ್ತು. ಅದನ್ನು ತಿರುಚಿ ಮತೀಯ ದೃಷ್ಟಿಯಿಂದ ನೋಡುವುದು ನೋವಿನ ಸಂಗತಿಯಾಗಿದೆ.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಏಕಪಕ್ಷೀಯ ನಿಲುವು ಕಾನೂನುಬಾಹಿರ

ಬೆಂಗಳೂರಿನಲ್ಲಿ ಎಸ್‌ಡಿಪಿಐ ಆಯೋಜಿಸಿರುವ ಸಮಾವೇಶಕ್ಕೆ ಅನುಮತಿ ನೀಡಬಾರದೆಂದು ಶಾಸಕ ಬಿ.ಆರ್. ಪಾಟೀಲ ಮತ್ತಿತರರು ಆಗ್ರಹಿಸಿದ್ದಾರೆ. ಅವರ ಪ್ರಕಾರ ಎಸ್‌ಡಿಪಿಐ, ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನಂತೆ ಕೋಮುವಾದಿ ಆಗಿದೆ; ಸಮಾಜದಲ್ಲಿ ಸಾಮರಸ್ಯ ಕೆಡಿಸುತ್ತಿದೆ. ಹಾಗಾಗಿ, ಎರಡೂ ಸಿದ್ಧಾಂತಗಳನ್ನು ಸಮಾನವಾಗಿ ವಿರೋಧಿಸಬೇಕು ಎಂಬುದಾಗಿದೆ. ಅವರು ಮರೆತಿರಬಹುದಾದ ಸತ್ಯವೇನೆಂದರೆ ಎಸ್‌ಡಿಪಿಐ ನೋಂದಾಯಿತ ರಾಜಕೀಯ ಪಕ್ಷವೇ ಹೊರತು ನಿಷೇಧಿತ ಸಂಘಟನೆಯಲ್ಲ. ಎಸ್‌ಡಿಪಿಐ ಕಾರ್ಯಕ್ರಮಕ್ಕೆ ಅನುಮತಿ ನೀಡಬಾರದು ಎಂದು ಹೇಳುವ ಅವರು, ಹಿಂದೆಂದೂ ಬಿಜೆಪಿಯ ರಾಜಕೀಯ ಸಮಾವೇಶ ಅಥವಾ ವಿಶ್ವ ಹಿಂದೂ ಪರಿಷತ್ ಆಯೋಜಿಸಿದ್ದ ವಿರಾಟ್ ಹಿಂದೂ ಸಮಾವೇಶಗಳಿಗೆ ಅನುಮತಿ ನೀಡಬಾರದೆಂದು ಆಗ್ರಹಿಸಿದ್ದ ದಾಖಲೆ ಇಲ್ಲ. ಹಾಗಾಗಿ, ಅವರ ಆಗ್ರಹವು ಏಕಪಕ್ಷೀಯ ಹಾಗೂ ಸಾಂವಿಧಾನಿಕ ವಿರೋಧಿಯಾಗಿದೆ.

ಭೀಮನಗೌಡ ಕಾಶಿರೆಡ್ಡಿ, ಬೆಂಗಳೂರು

ಜೀವನದಿಗಳ ಮಲಿನ ಸ್ಥಿತಿ ಕಳವಳಕಾರಿ

ರಾಜ್ಯದಲ್ಲಿ 12 ನದಿಗಳು ಮಲಿನವಾಗಿರುವ ಬಗ್ಗೆ ವರದಿಯಾಗಿದೆ. ಇದು ನಿಜಕ್ಕೂ ಆತಂಕಕಾರಿ. ಜೀವಪರಿಸರದಲ್ಲಿ ನದಿಗಳ ಪಾತ್ರ ಹಿರಿದು. ಮನುಷ್ಯ ಸೇರಿದಂತೆ ಲಕ್ಷಾಂತರ ಜೀವಿಗಳ ಬದುಕು ಅವುಗಳೊಂದಿಗೆ ಬೆಸೆದುಕೊಂಡಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ನದಿಗಳ ಬಗ್ಗೆ ಜನ ಸಮುದಾಯದಲ್ಲಿ ಯಾವುದೇ ಕಾಳಜಿ ಇಲ್ಲ. ದೇಶದ ಬಹುತೇಕ ಎಲ್ಲಾ ನದಿಗಳ ಒಡಲಿಗೆ ಒಳಚರಂಡಿ ನೀರು, ಕಾರ್ಖಾನೆ ತ್ಯಾಜ್ಯ ಸೇರುತ್ತಿದೆ. ಒಳಚರಂಡಿ ನೀರಿನ ಶುದ್ಧೀಕರಣಕ್ಕೆ ವೈಜ್ಞಾನಿಕವಾದ ಪರ್ಯಾಯ ಮಾರ್ಗ ರೂಪಿಸದ ಹೊರತು ನದಿ ಮಾಲಿನ್ಯ ತಡೆಯಲು ಸಾಧ್ಯವಿಲ್ಲ. ನದಿಗಳ ಸ್ಥಿತಿಯು ದಯನೀಯವಾಗಿದ್ದರೂ, ಆಳುವ ವರ್ಗ ಮಾತ್ರ ನದಿಗಳ ಜೋಡಣೆಗೆ ಪಣತೊಟ್ಟಿರುವುದು ದುರದೃಷ್ಟಕರ.

ಎಚ್.ಆರ್. ಪ್ರಕಾಶ್, ಮಂಡ್ಯ

ಪುಸ್ತಕ ಖರೀದಿಗೆ ಹೆಚ್ಚಿನ ಹಣ ಮೀಸಲಿಡಿ

ರಾಜ್ಯ ಸರ್ಕಾರ ಕಳೆದ ವರ್ಷದ ಬಜೆಟ್‌ನಲ್ಲಿ ಕನ್ನಡ ಪುಸ್ತಕಗಳ ಖರೀದಿಗೆ ₹10 ಕೋಟಿ ಮೀಸಲಿಟ್ಟಿದ್ದು ದಾಖಲೆಯೇ ಸರಿ. ಆದರೆ, ಇಂದು ಕನ್ನಡ ಪುಸ್ತಕಗಳ ಉದ್ಯಮವು ಹಲವು ಗಂಭೀರ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಕಚ್ಚಾವಸ್ತುಗಳ ಬೆಲೆ ಏರಿಕೆ, ಜಿಎಸ್‌ಟಿ ಮುಂತಾದ ಅಡೆತಡೆಗಳಿಂದ ಪುಸ್ತಕೋದ್ಯಮದ ಮೇಲೆ ಹೆಚ್ಚಿನ ಒತ್ತಡ ಉಂಟಾಗಿದೆ. ಇಂತಹ ಪರಿಸ್ಥಿತಿಯಲ್ಲಿಯೂ ಕನ್ನಡ ಸಾಹಿತ್ಯ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯ. ಆದರೆ, ಸರ್ಕಾರದ ಕೆಲವು ನೀತಿ ನಿರ್ಧಾರಗಳ ಕಾರಣದಿಂದ ಪುಸ್ತಕಗಳ ಖರೀದಿ ಹಾಗೂ ವಿತರಣೆ ಪ್ರಕ್ರಿಯೆ ಸಮರ್ಪಕವಾಗಿ ನಡೆಯುತ್ತಿಲ್ಲ. ಹಾಗಾಗಿ, ಈ ಬಾರಿಯ ಬಜೆಟ್ ನಲ್ಲಿ ಕನ್ನಡ ಪುಸ್ತಕಗಳ ಏಕಗವಾಕ್ಷಿ ಖರೀದಿ ಯೋಜನೆಗಾಗಿ ₹25 ಕೋಟಿ ಮೀಸಲಿಡಬೇಕಿದೆ. ಆ ಮೂಲಕ ಕನ್ನಡ ಪುಸ್ತಕೋದ್ಯಮಕ್ಕೆ ಒದಗಿರುವ ಸಂಕಷ್ಟವನ್ನು ನಿವಾರಿಸಬೇಕಾಗಿದೆ.

ಸೃಷ್ಟಿ ನಾಗೇಶ್, ಬೆಂಗಳೂರು

ಚುರುಮುರಿ



ಚಿನ್ನದ ನಿಧಿಯೇ ಅನುದಾನ!

• ಗುರು ಪಿ.ಎಸ್.

‘**ಗದುಗಿನ** ಲಕ್ಕುಂಡಿಯಲ್ಲಿ ಒಬ್ಬರಿಗೆ ಸುಮಾರು ಅರ್ಧ ಕೆಜಿಯಷ್ಟು ಬಂಗಾರ ಸಿಕ್ಕಿದೆಯಂತೆ ನೋಡ್ರೀ...’ ಪೇಪರ್ ಓದುತ್ತಾ ಖುಷಿಯಿಂದ ಹೇಳಿದಳು ಹೆಂಡತಿ.

‘ನಿನಗೇ ಚಿನ್ನ ಸಿಕ್ಕಷ್ಟು ಖುಷಿಪಡ್ತಿದ್ದೀಯಲ್ಲಮ್ಮ’ ಉತ್ಸಾಹ ಕಡಿಮೆ ಮಾಡುವಂತೆ ಹೇಳಿದೆ.

‘ಆ ಚಿನ್ನದ ಸರಗಳ ಡಿಸೈನ್ ನೋಡ್ರಿ, ಎಷ್ಟು ಚೆನ್ನಾಗಿದೆ. ನನಗೇನಾದರೂ ಸಿಕ್ಕಿದ್ರೆ, ರೇಷ್ಮೆ ಸೀರೆ ಉಟ್ಕೊಂಡು, ಆ ಜ್ಯುವೆಲ್ಸ್ ಎಲ್ಲ ಹಾಕ್ಕೊಂಡು ಫೋಟೊಶೂಟ್ ಮಾಡಿಸ್ತಿದ್ದೆ’.

‘ಓಯ್, ಅದು ನೆಲ ಅಗೆಯುವಾಗ ಸಿಕ್ಕಿರೋದು. ಭೂಮಿ ಅಡಿ ಸಿಗೋದೆಲ್ಲ ಸರ್ಕಾರದ ಸ್ವತ್ತು. ಅದನ್ನೆಲ್ಲ ಸರ್ಕಾರದ ವಶಕ್ಕೆ ತಗೊಂಡಾಯ್ತು ಆಗಲೇ...’

‘ಅದೆಂಥ ರೂಲ್ಸ್ ರೀ... ನಮ್ ಸೈಟ್‌ನಲ್ಲಿ ಸಿಕ್ಕರೆ ಅದು ನಮ್ಮದಲ್ವ’ ಎಂದ ಹೆಂಡತಿ, ‘ನನಗನಿಸುತ್ತೆ, ನಮ್ಮ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗದಲ್ಲಿ ರಾಜರ ಆಡಳಿತವೇ ಹೆಚ್ಚಾಗಿತ್ತಲ್ವ, ಹಾಗಾಗಿ, ಅಲ್ಲಿ ಗೋಲ್ಡ್ ಜಾಸ್ತಿ ಇದೆ. ಅಲ್ಲಲ್ಲಿ ಅಗೆದರೆ ಇನ್ನೂ ನಿಧಿ ಸಿಗಬಹುದು’ ಸರ್ಕಾರಕ್ಕೇ ಐಡಿಯಾ ಕೊಡುವಂತೆ ಹೇಳಿದಳು.

‘ಸುಮ್ನಿರಮ್ಮ ನೀನು, ನಮ್ಮ ಮಂತ್ರಿ ಮಹೋದಯರಿಗೆ ಮೊದಲೇ ಉತ್ತರ ಕರ್ನಾಟಕ ಅಂದ್ರೆ ನಿರ್ಲಕ್ಷ್ಯ. ಆಮೇಲೆ, ನಿಮ್ಮ ಬಳಿ ಇಷ್ಟೆಲ್ಲ ನಿಧಿ ಇದೆಯಲ್ಲ ಅಂತೇಳಿ ಅನುದಾನ ಕೊಡೋದನ್ನೇ ನಿಲ್ಲಿಸಿಬಿಟ್ಟಾರು’ ಎಂದೆ ಆತಂಕದಿಂದ.

‘ಆದರೂ ರೀ, ಈ ರೂಲ್ಸ್ ಚೇಂಜ್ ಮಾಡಬೇಕು. ಭೂಮಿ ಅಡಿ ಏನು ಸಿಕ್ಕರೂ ಸರ್ಕಾರ ತಗೊಳ್ಳಲಿ. ಚಿನ್ನ ಇದ್ದರೆ ಮಾತ್ರ ಆ ಜಾಗದ ಮಾಲೀಕರಿಗೆ ಕೊಡಲಿ ಅಂತ ಮೊದಲಿಗೆ ನಾನೇ ಆನ್‌ಲೈನ್ ಕ್ಯಾಂಪೇನ್ ಸ್ಟಾರ್ಟ್ ಮಾಡ್ತೀನಿ’ ಅಂದಳು.

‘ನೀನು ಏನೇ ಬರೆದರೂ ಕನ್ನಡದಲ್ಲಿ ಬರೆಯಮ್ಮ, ಇಂಗ್ಲಿಷ್‌ನಲ್ಲಿ ಬೇಡ’.

‘ಯಾಕ್ರೀ ಹೀಗಂತೀರಿ?’

‘ಇಂಗ್ಲಿಷ್‌ನಲ್ಲಿ ಬರೆದಿದ್ದನ್ನ ಅಮೆರಿಕ ಅಧ್ಯಕ್ಷ ಟ್ರಂಪ್ ಓದಿ, ತನ್ನ ‘ಟ್ರುತ್’ನಲ್ಲಿ, ಐದು ತಲೆಮಾರುಗಳ ಹಿಂದೆ ನಾನೇ ಲಕ್ಕುಂಡಿ ರಾಜ ಆಗಿದ್ದೆ. ಅದು, ನನ್ನದೇ ಬಂಗಾರ ಅಂತ ಪೋಸ್ಟ್ ಹಾಕಿದರೆ ಏನ್ ಮಾಡೋಣ’ ಎಂದೆ!

ಸಂಗತ

ನೋವಿಗೆ ಸ್ಪಂದಿಸಿದ ಸೃಜನಶೀಲ ತೀರ್ಪು

ಲಿವ್–ಇನ್ ಸಂದರ್ಭದಲ್ಲಿ ಹೆಣ್ಣು ಶೋಷಣೆಗೆ ಒಳಗಾದಾಗ ಕಾನೂನು ಪರಿಹಾರ ದೊರಕಿಸಿಕೊಡಲು ಅನುಕೂಲವಾಗುವಂತೆ ಹೈಕೋರ್ಟ್ ಮಹತ್ವದ ತೀರ್ಪಿತ್ತಿದೆ.

• ಶ್ರುತಿ ತಾರಗೋಡ್

‘**ಗೆದ್ದವನು** ಸೋತ, ಸೋತವನು ಸತ್ತ’ ಎನ್ನುವುದು ಯುದ್ಧದ ಭೀಕರ ಪರಿಣಾಮವನ್ನು ಹೇಳುವ ಜನಪ್ರಿಯ ಗಾದೆಮಾತು. ಇದು, ಬಹಳಷ್ಟು ಸಂದರ್ಭಗಳಲ್ಲಿ ಕಾನೂನು ಸಂಘರ್ಷಗಳಿಗೂ ಅನ್ವಯಿಸುವ ಮಾತು. ಕೆಲವು ದಾವೆಗಳಲ್ಲಿ ಪರಿಹಾರ ಕೋರಿ ಕಾನೂನಿನ ಮುಂದೆ ನಿಲ್ಲುವ ವಾದಿ, ಪ್ರತಿವಾದಿ ಇಬ್ಬರದ್ದೂ ಇದೇ ಪರಿಸ್ಥಿತಿ ಆಗಿರುತ್ತದೆ.

ಕೆಲವೊಮ್ಮೆ ಪರಿಸ್ಥಿತಿ ಎಷ್ಟು ಜಟಿಲವಾಗಿರುತ್ತದೆ ಎಂದರೆ, ಅದು ಕಾನೂನಿನ ಕೈಗೆ ಎಟಕುವುದೇ ಇಲ್ಲ. ಅಥವಾ ಎಲ್ಲಾ ಸಂದಿಗ್ಧಗಳಿಗೂ, ಜಟಿಲತೆಗಳಿಗೂ, ಸಮಸ್ಯೆಗಳಿಗೂ ಕಾನೂನಿನಲ್ಲಿ ಪರಿಹಾರ ಇದ್ದೇ ಇದೆ ಎಂದೂ ಹೇಳಲಾಗದು. ಕೆಲವೊಮ್ಮೆ ಹೊಸ ಸಮಸ್ಯೆ ಎದುರಾದಾಗ ಅದಕ್ಕೊಂದು ಹೊಸ ಕಾನೂನು, ವಿಶ್ಲೇಷಣೆ ಹುಟ್ಟಿಕೊಳ್ಳುತ್ತದೆ. ಒಂದು ಕಾನೂನು ಶಾಸನವಾಗಿ ಅದು ನಮಗೆ ಪರಿಹಾರ ಒದಗಿಸಲು ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಆದರೆ, ಸಮಸ್ಯೆ ಹಾಗೇ ನಿಲ್ಲುತ್ತದೆಯೆ? ಅಂತಹ ಸಂದರ್ಭದಲ್ಲಿ ‘ನ್ಯಾಯಾಂಗ ಕ್ರಿಯಾಶೀಲತೆ’ ನಮಗೆ ನ್ಯಾಯ ಒದಗಿಸುವ ಕೆಲಸ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಬಂದ ಕರ್ನಾಟಕ ಹೈಕೋರ್ಟ್‌ನ ಒಂದು ತೀರ್ಪು ಗಮನಾರ್ಹ ಮತ್ತು ಸ್ವಾಗತಾರ್ಹ.

ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರು, ಡಿಸೆಂಬರ್ 2, 2025ರಂದು ಒಂದು ಮಹತ್ವದ ತೀರ್ಪನ್ನು ನೀಡಿದರು. ಆ ತೀರ್ಪಿನ ಮೂಲಕ, ಭಾರತೀಯ ದಂಡ ಸಂಹಿತೆಯ ‘ಸೆಕ್ಷನ್ 498ಎ’ ಸಾಧ್ಯತೆಗಳಿಗೆ ಈ ಕಾಲಕ್ಕೆ ಅಗತ್ಯವಾದ ವಿಸ್ತಾರ ದೊರೆತಂತಾಯಿತು. ಅಂದರೆ, ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ (ಡೊಮೆಸ್ಟಿಕ್ ವಯಲೆನ್ಸ್ ಆ್ಯಕ್ಟ್) ಅನ್ನು ಲಿವ್–ಇನ್ ಸಂಬಂಧಗಳಿಗೂ ಅನ್ವಯವಾಗುತ್ತದೆಂದು ಹೇಳುವ ಮೂಲಕ, ಸಮಕಾಲೀನ ಸಮಾಜದ ಬಿಕ್ಕಟ್ಟುಗಳನ್ನೂ ಕಾಯ್ದೆಯಡಿ ವಿಶ್ಲೇಷಿಸಲು ಸಾಧ್ಯವಾಯಿತು.

ಡೊಮೆಸ್ಟಿಕ್ ವಯಲೆನ್ಸ್ ಆ್ಯಕ್ಟ್ ವೈವಾಹಿಕ ಸಂಬಂಧಗಳಲ್ಲಿ ಉಂಟಾಗಬಹುದಾದ ಕ್ರೌರ್ಯಕ್ಕೆ ಸಂಬಂಧಿಸಿದ ಕಾಯ್ದೆ. ವಿವಾಹ ಸ್ವರೂಪದ ಸಂಬಂಧ ಎನ್ನಬಹುದಾದ ಲಿವ್ ಇನ್ ರಿಲೇಶನ್‌ಶಿಪ್ ಮತ್ತು ಅಮಾನ್ಯ ಮತ್ತು ರದ್ದುಗೊಳಿಸಬಹುದಾದ ವಿವಾಹಗಳಿಗೂ ಡೊಮೆಸ್ಟಿಕ್ ವಯಲೆನ್ಸ್ ಆ್ಯಕ್ಟ್ ಅನ್ವಯವಾಗುತ್ತದೆ ಎಂದು ಹೇಳುವುದರ ಮೂಲಕ ಕಾಯ್ದೆಗೆ ಮಹತ್ವದ ತಾತ್ವಿಕ ಬೆಳವಣಿಗೆ ದೊರಕಿದಂತಾಗಿದೆ.

ಭಾರತೀಯ ಕೌಟುಂಬಿಕ ಕಾನೂನು, ಸಮಾಜದಲ್ಲಿ ಮಾನ್ಯಗೊಂಡ ವಿವಾಹ ಸಂಬಂಧಕ್ಕೆ ಮಾತ್ರ ಅನ್ವಯವಾಗುತ್ತದೆ. ಮದುವೆಯ ಸಂಬಂಧದಿಂದ ಉದ್ಭವಿಸಿದ ಸಮಸ್ಯೆ ಅಥವಾ ಶೋಷಣೆಗೆ ಮಾತ್ರ ರಕ್ಷಣೆ ನೀಡುತ್ತದೆ. ಆದರೆ ನಮ್ಮ ಸಮಾಜ, ಸಂಬಂಧದ ಸ್ವರೂಪಗಳು ಕಾಲಕಾಲಕ್ಕೆ ಬದಲಾಗಿವೆ, ಆಗುತ್ತಿವೆ. ಮದುವೆ ಆಗದೆಯೇ ದಂಪತಿಯಂತೆ ಒಟ್ಟಿಗೆ ಬಾಳುವವರ ಸಂಖ್ಯೆ ಹೆಚ್ಚಾಗುತ್ತಿದೆ ಮತ್ತು ಈ ಬಗೆಯ ಸಂಬಂಧವನ್ನು ಸಮಾಜವೂ ನಿಧಾನವಾಗಿ ಒಪ್ಪಿಕೊಳ್ಳುತ್ತಿದೆ. ಆದರೆ, ಇಂಥ ಸಂಬಂಧಗಳಲ್ಲಿ ಸಮಸ್ಯೆ ಎದುರಾದಾಗ ಅದಕ್ಕೆ ಕಾನೂನಿನಿಂದ ಪರಿಹಾರ ದೊರೆಯುವುದು ಇಲ್ಲಿಯವರೆಗೆ ಕಷ್ಟದ ವಿಷಯವಾಗಿತ್ತು.



ಮಹಿಳೆಯರು ಅನುಭವಿಸುವ ಭಾವನಾತ್ಮಕ ಹಿಂಸೆ, ಆರ್ಥಿಕ ವಂಚನೆ, ಮಾನಸಿಕ ವೇದನೆ, ದೈಹಿಕ ಶೋಷಣೆ, ಲೈಂಗಿಕ ಶೋಷಣೆ, ಮುಂತಾದ ದೌರ್ಜನ್ಯಗಳು ವಿವಾಹೇತರ, ವಿವಾಹಿತ ಅಥವಾ ಅವಿವಾಹಿತ ಸಂಬಂಧಗಳಲ್ಲಿ ಸಾಮಾನ್ಯವಾಗಿದ್ದು ಯಾವುದೇ ವ್ಯತ್ಯಾಸ ಇರುವುದಿಲ್ಲ. ಎಷ್ಟೋ ಮಹಿಳೆಯರು ಶೋಷಿತರಾಗಿದ್ದರೂ ಸಹ, ವಿವಾಹದ ಮಾನ್ಯತೆಯನ್ನು ರುಜುವಾತು ಪಡಿಸಲು ಸಾಧ್ಯವಿಲ್ಲ ಎನ್ನುವ ಒಂದೇ ಕಾರಣದಿಂದಾಗಿ, ನ್ಯಾಯಾಲಯದಿಂದ ಪರಿಹಾರ ಸಿಗದೆ ವಂಚಿತರಾಗುತ್ತಾರೆ. ಇಂತಹ ಪ್ರಕರಣಗಳಲ್ಲಿ ಆರೋಪಿಗಳು, ಸಿಂಧುತ್ವದ ವಿವಾಹ ಇಲ್ಲದ ಸಂಬಂಧಗಳ ಸಂದರ್ಭದಲ್ಲಿ ತಮ್ಮಿಂದ ಘಟಿಸಿದ್ದು ದೌರ್ಜನ್ಯವೇ ಅಲ್ಲ ಎಂಬ ವಾದ ಮುಂದಿಟ್ಟು, ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇಂತಹ ಸಂಕುಚಿತ ವ್ಯಾಖ್ಯಾನಕ್ಕೆ ಅವಕಾಶ ಕಲ್ಪಿಸದೆ, ಸಮಾನತೆಯೊಂದಿಗೆ ಸಂವಿಧಾನಾತ್ಮಕ ನೈತಿಕತೆಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರ ತೀರ್ಪು ಎತ್ತಿ ಹಿಡಿದಿದೆ.

ಡೊಮೆಸ್ಟಿಕ್ ವಯಲೆನ್ಸ್ ಆ್ಯಕ್ಟ್‌ಗೆ ಸಂಬಂಧಿಸಿದಂತೆ ವಿಸ್ತರಿಸಲಾಗಿರುವ ವ್ಯಾಖ್ಯಾನವನ್ನು ದುರುಪಯೋಗ ಮಾಡಿಕೊಳ್ಳಬಹುದಾದ ಸಾಧ್ಯತೆಗಳೂ ಇವೆ. ಈ ಸಾಧ್ಯತೆಗಳು ಮತ್ತು ಆತಂಕವನ್ನು ಮನಗಂಡಿರುವ ನ್ಯಾಯಮೂರ್ತಿ ಅವರು, ತಮ್ಮ ತೀರ್ಪಿನಲ್ಲಿ ಅದಕ್ಕೂ ಪರಿಹಾರ ನೀಡಿದ್ದಾರೆ. ಇಂತಹ ಸಂದರ್ಭದಲ್ಲಿ, ಒಟ್ಟಿಗೆ ಬಾಳುವ ಸಂಬಂಧದ ಅಸ್ತಿತ್ವ ರುಜುವಾತು ಪಡಿಸುವುದಷ್ಟೇ ಅಲ್ಲದೇ, ಆರೋಪಿಯ ಕ್ರೌರ್ಯದ ವರ್ತನೆಯನ್ನೂ ಸಾಬೀತುಪಡಿಸಬೇಕು ಎಂದು ತೀರ್ಪಿನಲ್ಲಿ ಹೇಳಲಾಗಿದೆ. ಹಾಗೆಯೇ, ತೀರ್ಪು ನೀಡುವ ನ್ಯಾಯಾಲಯಗಳು ಸಂಬಂಧದ ಸ್ವಭಾವ, ಅವಧಿ ಹಾಗೂ ಇತರ ಮುಖ್ಯ ವಿಷಯಗಳನ್ನು ಮೌಲ್ಯಮಾಪನ ಮಾಡಬೇಕು ಎಂಬ ಮಾರ್ಗದರ್ಶಿ ಸೂತ್ರ ಅಥವಾ ಎಚ್ಚರಿಕೆಯ ಮಾತನ್ನೂ ಹೇಳಿದೆ.

ಸಾಂಗತ್ಯದಲ್ಲಿ ವಂಚನೆಗೊಳಗಾಗುವ ಸಂತ್ರಸ್ತ ಹೆಣ್ಣಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರು ನೀಡಿರುವ ತೀರ್ಪು ಹೊಸ ಕಾಲದ ತವಕತಲ್ಲಣಗಳಿಗೆ ಸ್ಪಂದಿಸುವ ಸೂಕ್ಷ್ಮ ಸಂವೇದನೆಯ ಸಂಕೇತವಾಗಿದೆ ಹಾಗೂ ಸಾಮಾಜಿಕ ಮಹತ್ವವನ್ನೂ ಒಳಗೊಂಡಿದೆ. ಕಾನೂನು ಬರೀ ವಿಧಿಗಳಿಗಷ್ಟೇ ಕಣ್ಣಾಗದೆ ನೋವಿಗೂ ಕಿವಿಗೊಡಬೇಕು ಎನ್ನುವುದನ್ನೂ ಈ ತೀರ್ಪು ಧ್ವನಿಸುವಂತಿದೆ.

ಲೇಖಕಿ: ವಕೀಲರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ದೇಶದ ಕ್ರೀಡಾ ಕ್ಷೇತ್ರಕ್ಕೆ ಕಪ್ಪುಚುಕ್ಕೆ ಡೋಪಿಂಗ್

ಕ್ರೀಡಾಪಟುವಿನ ಬದುಕು ನುಂಗುವ ಮದ್ದು



ಜೀವನಪೂರ್ತಿ ಪರಿಶ್ರಮ ಪಟ್ಟು ಉನ್ನತ ಸಾಧನೆಯ ಕನಸು ಕಾಣುವ ಕೆಲವು ಕ್ರೀಡಾಪಟುಗಳು ಉದ್ದೀಪನ ಮದ್ದು ಸೇವನೆ ಪಿಡುಗಿಗೆ ಬಲಿಯಾಗುತ್ತಿದ್ದಾರೆ. ಭಾರತವು ಅತಿ ಹೆಚ್ಚು ಡೋಪಿಂಗ್ ಪ್ರಕರಣಗಳು ವರದಿಯಾದ ದೇಶ. ವಾಡಾ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ. ಅಥ್ಲೆಟಿಕ್ಸ್, ಕುಸ್ತಿ, ವೇಟ್‌ಲಿಫ್ಟಿಂಗ್, ಬಾಕ್ಸಿಂಗ್ ಸೇರಿದಂತೆ ಹಲವು ಕ್ರೀಡೆಗಳಲ್ಲಿ ಈ ಪಿಡುಗು ವ್ಯಾಪಕವಾಗಿದೆ. ಇದಕ್ಕೆ ಕಡಿವಾಣ ಹಾಕುವ ತುರ್ತು ಅಗತ್ಯ ಈಗ ಇದೆ

● ಗಿರೀಶ ದೊಡ್ಡಮನಿ

ತಮಿಳುನಾಡಿನ ಗುಂಡೂರಿನ ಧನಲಕ್ಷ್ಮೀ ಶೇಖರ್ ಬಡತನದ ಬೇಗೆಯಲ್ಲಿ ಬೆಂದ ಕುಟುಂಬದಲ್ಲಿ ಅರಳಿದ ಅಥ್ಲೀಟ್. ಬಾಲ್ಯದಲ್ಲಿಯೇ ಪಿತೃವಿಯೋಗದ ನೋವು ಅನುಭವಿಸಿದ ಹುಡುಗಿ. ಅವರ ತಾಯಿ ಬೇರೆಯವರ ಮನೆಗಳಲ್ಲಿ ಕಸಮುಸುರೆ ಕೆಲಸ ಮಾಡಿ ಕುಟುಂಬದ ಪೋಷಣೆ ಮಾಡಿದ್ದರು. ಅದೆಷ್ಟೋ ರಾತ್ರಿ ಉಪವಾಸ ಮಲಗಿದ್ದರೂ ಧನಲಕ್ಷ್ಮೀಯ ಕಾಲುಗಳಲ್ಲಿ ಅಪಾರ ಶಕ್ತಿ ಇತ್ತು. ಗಟ್ಟಿ ಮನೋಬಲವಿತ್ತು. ಅದಕ್ಕಾಗಿ 100ಮೀ. ಮತ್ತು 200 ಮೀ. ಓಟಗಳಲ್ಲಿ ಜಿಂಕೆಯಂತೆ ಓಡುತ್ತಿದ್ದರು. ಶಾಲೆಯ ಕೂಟಗಳು ಮತ್ತು ಸ್ಥಳೀಯ ಕ್ರೀಡಾಕೂಟಗಳಲ್ಲಿ ಬಹುಬೇಗ ಹೆಸರು ಮಾಡಿದರು. ಮಣಿಕಂಠನ್ ಆರ್ಮುಗಂ ಕೋಚಿಂಗ್‌ನಲ್ಲಿ ಬೆಳೆದರು. ಅವರ ಅದೃಷ್ಟಕ್ಕೆ 2020ರ ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಭಾರತ ರಿಲೆ ತಂಡವನ್ನು ಪ್ರತಿನಿಧಿಸುವ ಅವಕಾಶವೂ ದೊರೆಯಿತು. 2021ರಲ್ಲಿ ಫೆಡರೇಷನ್ ಕಪ್ ಕೂಟದ 200 ಮೀ. ಓಟದಲ್ಲಿ ದ್ಯುತಿ ಚಾಂದ್ ಮತ್ತು ಹಿಮಾ ದಾಸ್ ಅವರನ್ನು ಹಿಂದಿಕ್ಕಿ ಸುದ್ದಿ ಮಾಡಿದರು. ಇಲ್ಲಿಯವರೆಗೆ ಎಲ್ಲವೂ ಸರಿಯಿತ್ತು.



ಆದರೆ 2022ರಲ್ಲಿ ಅವರು ಉದ್ದೀಪನ ಮದ್ದು ಸೇವನೆ ಪ್ರಕರಣದಲ್ಲಿ ಸಿಕ್ಕಿಬಿದ್ದರು. ಮೂರು ವರ್ಷ ವಾಡಾದಿಂದ (ವಿಶ್ವ ಉದ್ದೀಪನ ಮದ್ದು ತಡೆ ಸಂಸ್ಥೆ) ಅಮಾನತು ಶಿಕ್ಷೆಗೊಳಗಾದರು. ಹೋದ ವರ್ಷ ಶಿಕ್ಷೆ ಮುಗಿಸಿ ಬಂದರು. ರಾಷ್ಟ್ರೀಯ ಕೂಟದಲ್ಲಿ 100 ಮೀ ಓಟದಲ್ಲಿ 11.36 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಆದರೆ ಈಚೆಗಷ್ಟೇ ನಿಷೇಧಿತ ಉದ್ದೀಪನ ಮದ್ದು 'ಡ್ರಾಸ್ಟಾನೊಲೊನ್' ಸೇವನೆ ಮಾಡಿದ್ದು ಸಾಬೀತಾಗಿ ಮತ್ತೆ 8 ವರ್ಷಗಳಿಗೆ ಅಮಾನತುಗೊಂಡರು. ಅಲ್ಲಿಗೆ ಅವರ ವೃತ್ತಿಜೀವನವೇ ಮುಗಿದಂತಾಯಿತಲ್ಲವೇ?

❖ ❖ ❖

15 ವರ್ಷಗಳ ಹಿಂದೆ ಧಾರವಾಡ ಜಿಲ್ಲೆಯಲ್ಲಿ ಒಬ್ಬ ದೇಹದಾರ್ಢ್ಯಪಟು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ಹತ್ತಾರು ಪ್ರಶಸ್ತಿ, ಪದಕಗಳು ಅವರಿಗೆ ಒಲಿದಿದ್ದವು. ಒಳ್ಳೆಯ ಸರ್ಕಾರಿ ನೌಕರಿಯೂ ಸಿಕ್ಕಿತ್ತು. ಜೀವನದಲ್ಲಿ ಎಲ್ಲವೂ ಸುಖಮಯವಾಗಿ ನಡೆಯುವ ಸಂಭ್ರಮವೂ ಮನೆಮಾಡಿತ್ತು. ಆದರೆ ಕ್ರಮೇಣ ಆರೋಗ್ಯದಲ್ಲಿ ಏರುಪೇರುಗಳು ಶುರುವಾದವು. ಎದೆಯ ಮಾಂಸಖಂಡಗಳಲ್ಲಿ ಹಾಲಿನ ಗ್ರಂಥಿಗಳು ಕುಡಿಯೊಡೆದವು. ಜೀರ್ಣಶಕ್ತಿ ಏರುಪೇರಾಯಿತು. ಧ್ವನಿ ಬದಲಾಗತೊಡಗಿತು. ಗಾಬರಿಯಿಂದ ವೈದ್ಯರ ಬಳಿ ಓಡಿದರು. ತಪಾಸಣೆಯಿಂದ ಹೊರಬಂದ ಸತ್ಯ ಮೈನಡುಗಿಸುವಂತದ್ದು. ದೇಹದಾರ್ಢ್ಯ ಅಭ್ಯಾಸದ ಸಂದರ್ಭದಲ್ಲಿ ಸೇವಿಸಿದ ನಿಷೇಧಿತ ಮದ್ದುಗಳ ಅಡ್ಡಪರಿಣಾಮದ ಫಲವಾಗಿ ಆರೋಗ್ಯ ಕೈಕೊಟ್ಟಿತ್ತು. ಇಡೀ ಜೀವನ ಔಷಧೋಪಚಾರದಲ್ಲಿಯೇ ಇರುವ ಅನಿವಾರ್ಯ ಬಂದೊದಗಿತು.

❖ ❖ ❖

ಈ ಉದಾಹರಣೆಗಳು ಉದ್ದೀಪನ ಮದ್ದು ಪಿಡುಗಿನ ಎರಡು ಮುಖಗಳಷ್ಟೇ. ಆದರೆ ಡೋಪಿಂಗ್‌ಗೆ ಹಲವಾರು ಕರಾಳ ಮುಖಗಳಿವೆ. ಕ್ರೀಡಾಪಟುವಿನ ವೃತ್ತಿ ಮತ್ತು ವೈಯಕ್ತಿಕ ಜೀವನವನ್ನು ನುಂಗಿಹಾಕುವ ರಾಕ್ಷಸನಂತಿದೆ. ಕ್ರೀಡಾಳುಗಳು ಪಟ್ಟ ಪರಿಶ್ರಮ, ದೇಶದ ಕ್ರೀಡಾವಲಯವು ಇಟ್ಟ ವಿಶ್ವಾಸ ಮತ್ತು ಅವರ ಮೇಲೆ ವಿನಿಯೋಗಿಸಿದ ಸಂಪನ್ಮೂಲಗಳೆಲ್ಲವೂ ವ್ಯರ್ಥವಾಯಿತು. ಇವತ್ತಿಗೂ ಕ್ರೀಡಾಪಟುಗಳಲ್ಲಿ ಕಾಣದ ಕೈಗಳು ಮಾಡಿದ ಹುನ್ನಾರವೇ ಅಥವಾ ವ್ಯವಸ್ಥೆಯ ಲೋಪವೇ ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಉತ್ತರ ಹುಡುಕುತ್ತ ಹೋದರೆ. ಈ ಎಲ್ಲವೂ ಇವೆ.

ನೂರಾರು ಅಥ್ಲೀಟ್‌ಗಳು ಈ ಪಿಡುಗಿಗೆ ಬಲಿಯಾಗುತ್ತಲೇ ಇದ್ದಾರೆ. ಸತತ ನಾಲ್ಕು ವರ್ಷಗಳಿಂದ ವಿಶ್ವದಲ್ಲಿಯೇ ಹೆಚ್ಚು ಡೋಪಿಂಗ್ ಪ್ರಕರಣಗಳು ಪತ್ತೆಯಾದ ದೇಶಗಳ ಪಟ್ಟಿಯಲ್ಲಿ ಭಾರತ ಅಗ್ರಸ್ಥಾನದಲ್ಲಿದೆ. 2024ರ ಡೋಪಿಂಗ್ ಪರೀಕ್ಷೆಯ ವರದಿ ಕಳೆದ ತಿಂಗಳು ಬಂದಿದ್ದು, ಭಾರತದಲ್ಲಿ ಉದ್ದೀಪನ ಮದ್ದು ಸೇವನೆ ಪ್ರಮಾಣ ಶೇ 3.6ರಷ್ಟು ದಾಖಲಾಗಿದೆ.

ಈ ವರ್ಷ ಜಪಾನಿನಲ್ಲಿ ಏಷ್ಯನ್ ಕ್ರೀಡಾಕೂಟ ನಡೆಯಲಿದೆ. ಆದ್ದರಿಂದ ಭಾರತ ತಂಡವನ್ನು ಸಿದ್ಧಗೊಳಿಸುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಈ ಹೊತ್ತಿನಲ್ಲಿ ಇಂತಹ ಪ್ರಕರಣಗಳು ವರದಿಯಾಗುತ್ತಿರುವುದು ಆತಂಕದ ವಿಷಯ. ಅಲ್ಲದೇ 2030ರಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಆತಿಥ್ಯಕ್ಕೂ ಭಾರತ ಸಿದ್ಧತೆ ಮಾಡಿಕೊಳ್ಳುತ್ತಿದೆ. 2036ರ ಒಲಿಂಪಿಕ್ ಕೂಟದ ಆಯೋಜನೆಗೂ ಭಾರತ ಬಿಡ್ ಪಡೆಯಲು ಪ್ರಯತ್ನಿಸುತ್ತಿದೆ. ಇಂತಹ ಸಂದರ್ಭದಲ್ಲಿ ಡೋಪಿಂಗ್ ನಿಯಂತ್ರಣ ಮಾಡದೇ ಹೋದರೆ ದೊಡ್ಡ ಹಿನ್ನಡೆ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮುಖಭಂಗ ಅನುಭವಿಸುವ ಅಪಾಯವಿದೆಯಲ್ಲವೇ?

ಅದಕ್ಕಾಗಿಯೇ ಹೋದ ವರ್ಷ ಡೋಪಿಂಗ್ ತಡೆ ನಿಯಂತ್ರಣಕ್ಕೆ ಕೇಂದ್ರ ಸರ್ಕಾರವು ಮಸೂದೆಯನ್ನು ಕೂಡ ಮಂಡಿಸಿದೆ. ಆದರೆ ಇನ್ನೂ ಪೂರ್ಣವಾಗಿ ಕಾರ್ಯಗತಗೊಂಡಿಲ್ಲ. ಈ ಪಿಡುಗು ಸುಲಭಕ್ಕೆ ನಿಯಂತ್ರಣಕ್ಕೆ ಬರುವಂತೆ ಕಾಣುತ್ತಿಲ್ಲವೆಂಬುದನ್ನು ಅಂಕಿ ಸಂಖ್ಯೆಗಳೇ ಸಾಬೀತು ಮಾಡುತ್ತವೆ. ಹಾಗಿದ್ದರೆ ವರ್ಷದಿಂದ ವರ್ಷಕ್ಕೆ ಪ್ರಕರಣಗಳು ಹೆಚ್ಚಾಗಲು ಕಾರಣಗಳೇನು?

'ಮೂಲತಃ ಕ್ರೀಡಾಪಟುಗಳಲ್ಲಿ ನಿಷೇಧಿತ ಮದ್ದುಗಳ ಕುರಿತ ಅರಿವು ಕಡಿಮೆ. ಪ್ರೌಢಶಾಲೆ ಮಟ್ಟದಿಂದಲೇ ಈ ಕುರಿತು ಜಾಗೃತಿ ಆರಂಭವಾಗಬೇಕು. ಎಲ್ಲಕ್ಕಿಂತ ಮುಖ್ಯವಾಗಿ ದೈಹಿಕ ಶಿಕ್ಷಣ ಶಿಕ್ಷಕರಿಗೆ ಅರಿವು ಮೂಡಿಸಬೇಕು. ಅವರ ಮೂಲಕ ಮಕ್ಕಳಿಗೆ ಶಿಕ್ಷಣ ನೀಡಬೇಕು. ಇವತ್ತು ಭಾರತದಲ್ಲಿ ಕ್ರೀಡಾರಂಗ ಅಪಾರವಾಗಿ ಬೆಳೆಯುತ್ತಿದೆ. ದುಡ್ಡು, ಸೌಲಭ್ಯಗಳು ಮತ್ತು ನೌಕರಿಗಳ ಅವಕಾಶಗಳೂ ಹೆಚ್ಚುತ್ತಿವೆ. ಆದ್ದರಿಂದ ಅಡ್ಡಹಾದಿಯ ಮೂಲಕ ಯಶಸ್ಸು ಸಾಧಿಸುವ ದುರಾಸೆಗೆ ಮಕ್ಕಳು ಬಲಿಯಾಗುತ್ತಿದ್ದಾರೆ. ಮದ್ದು ಪರೀಕ್ಷಾ ವಿಧಾನಗಳು ಬಹಳ ಮುಂದುವರಿದಿವೆ. ತಂತ್ರಜ್ಞಾನ ಬಹಳಷ್ಟು ಸುಧಾರಣೆಯಾಗಿದೆ. ಯಾವುದೇ ನಿಷೇಧಿತ ಮದ್ದು ಸೇವನೆ ಮಾಡಿದರೂ ಒಂದಿಲ್ಲೊಂದು ಹಂತದಲ್ಲಿ ಸಿಕ್ಕಿಬೀಳುವುದು ಖಚಿತ. ಮದ್ದು ತೆಗೆದುಕೊಂಡು ಗೆದ್ದ ನಂತರ ಸಿಕ್ಕಿಹಾಕಿಕೊಂಡು ಗೌರವ ಮತ್ತು ಪದಕ ಕಳೆದುಕೊಳ್ಳುವುದಕ್ಕಿಂತ ಸೋಲುವುದೇ ಮೇಲು ಎಂಬ ತಿಳಿವಳಿಕೆ ಮೂಡಬೇಕು' ಎಂದು ಫಿಫಾ ಮತ್ತು ಏಷ್ಯಾ ಫುಟ್‌ಬಾಲ್ ಕಾನ್ಫೆಡರೇಷನ್ (ಎಎಫ್‌ಸಿ) ಡೋಪಿಂಗ್ ನಿಯಂತ್ರಣ ಅಧಿಕಾರಿ ಹಾಗೂ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ವೈದ್ಯಕೀಯ ಸಮಿತಿ ಮುಖ್ಯಸ್ಥ ಡಾ. ಕಿರಣ ಕುಲಕರ್ಣಿ ಹೇಳುತ್ತಾರೆ.

ಭಾರತದಲ್ಲಿ ಇಂದಿಗೂ ಬಹುತೇಕ ಕ್ರೀಡೆಗಳಿಗೆ ಗ್ರಾಮಾಂತರ ಪ್ರದೇಶಗಳಿಂದ ಬರುತ್ತಾರೆ. ಅವರಿಗೆ ಸಾಧನೆ ಮಾಡುವ ಗುರಿ, ಸಾಮರ್ಥ್ಯ ಮತ್ತು ಛಲ ಇರುತ್ತದೆ. ಆದರೆ ಕ್ರೀಡಾಪಟುಗಳು ಸೇವಿಸಬೇಕಾದ ಆಹಾರ, ಅನಾರೋಗ್ಯದಲ್ಲಿ ಬಳಸಬೇಕಾದ ಔಷಧಿಗಳ ಕುರಿತು ಅರಿವು ಇರುವುದಿಲ್ಲ. ತಮ್ಮೊಂದಿಗೆ ಇರುವ ಹಿರಿಯರು ಅಥವಾ ಇನ್ನಾರದೋ ಮಾತು ಕೇಳಿ ತಪ್ಪುದಾರಿ ತುಳಿಯುವವರೇ ಹೆಚ್ಚು. ಆದ್ದರಿಂದ ಪ್ರತಿಯೊಂದು ಹಂತದಲ್ಲಿಯೂ ಕೋಚ್‌ಗಳು, ಕ್ರೀಡಾಪಟುಗಳು ಮತ್ತು ಆಯೋಜಕರಿಗೆ ತಿಳಿವಳಿಕೆ ಕೊಡಬೇಕಿದೆ.

ತಮ್ಮ ಬಳಿ ಬರುವ ಬಹಳಷ್ಟು ಕ್ರೀಡಾಪಟುಗಳಿಗೆ ಇವತ್ತಿಗೂ ನಾಡಾ, ಫೆಡರೇಷನ್‌ಗಳಿಂದ ಬಂದ ಇಮೇಲ್‌ಗಳನ್ನು ಓದಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಇಲ್ಲ. ಅಂತಹ ಮಕ್ಕಳಿಗೆ ಶಿಕ್ಷಣ ನೀಡುವುದು ಮುಖ್ಯವಾಗುತ್ತದೆ ಎಂದೂ ವೈದ್ಯರು ಪ್ರತಿಪಾದಿಸುತ್ತಾರೆ.


ಬುಧವಾರ ಮುಂಬೈನಲ್ಲಿ ಉದ್ದೀಪನ ಮದ್ದು ತಡೆಗೆ ಸಂಬಂಧಿಸಿದ ಕಾರ್ಯಾಗಾರದಲ್ಲಿಯೂ ವಾಡಾ ಹೊಸದಾಗಿ ಕೆಲವು ನಿಷೇಧಿತ ಮದ್ದುಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಅದರ ತಿಳಿವಳಿಕೆ ತಳಮಟ್ಟದವರೆಗೂ ಮುಟ್ಟಬೇಕು. ಆದರೆ ಭಾರತದ ವ್ಯವಸ್ಥೆಯಲ್ಲಿ ಇದು ಸುಲಭ ಸಾಧ್ಯವಲ್ಲ?

ಈ ಹಿಂದೆ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕದ ಕಾರ್ಯನಿರ್ವಹಣೆ ಕುರಿತು ವಾಡಾ ಚಾಟಿಯನ್ನೂ ಬೀಸಿತ್ತು. ಕೆಲವು ತಿಂಗಳು ನಿಷೇಧ ಕೂಡ ಹೇರಿತ್ತು.




ಇಲಾಖೆಗಳ ನಡುವಣ ಸಮನ್ವಯ ಕೂಡ ಕಷ್ಟ. ಈಚೆಗೆ ಟಾಪ್ಸ್‌ಗೆ (ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆ) ಆಯ್ಕೆ ಪ್ರಕ್ರಿಯೆ ನಡೆಯಿತು. ಆ ಪಟ್ಟಿಯಲ್ಲಿ ಕುಸ್ತಿಪಟು ರಿತಿಕಾ ಹೂಡಾ ಅವರು ಇದ್ದರು. ಈಚೆಗೆ ಉದ್ದೀಪನ ಮದ್ದು ಪ್ರಕರಣದಲ್ಲಿ ಅಮಾನತಾಗಿರುವ ಕುಸ್ತಿಪಟು ಅವರು. ಅವರು ಟಾಪ್ಸ್ ಸೌಲಭ್ಯ ಪಡೆಯಲು ಹೇಗೆ ಅರ್ಹರಾಗುತ್ತಾರೆ? ಆದರೂ ಅವರು ಪಟ್ಟಿಯಲ್ಲಿ ಸ್ಥಾನ ಪಡೆದಿದ್ದರು. ನಂತರ ಅವರನ್ನು ಅನರ್ಹಗೊಳಿಸಲಾಯಿತು. ಇದು ಫೆಡರೇಷನ್‌ಗಳ ಕಾರ್ಯವೈಖರಿಗೆ ಹಿಡಿದ ಕನ್ನಡಿ.

ರಾಜ್ಯ ಸಂಸ್ಥೆಗಳು, ಫೆಡರೇಷನ್, ಭಾರತ ಕ್ರೀಡಾ ಪ್ರಾಧಿಕಾರ ಮತ್ತು ಕೇಂದ್ರ ಕ್ರೀಡಾ ಸಚಿವಾಲಯಗಳು ಒಟ್ಟಾಗಿ ಕಾರ್ಯನಿರ್ವಹಿಸಿದರೆ ಡೋಪಿಂಗ್ ಪಿಡುಗಿಗೆ ಕಡಿವಾಣ ಹಾಕಲು ಸಾಧ್ಯವಾಗಬಹುದು. ಇಲ್ಲದಿದ್ದರೆ ಸಾಧನೆಯ ಶಿಖರದಲ್ಲಿ ಮೆರೆಯಬೇಕಾದ ಪ್ರತಿಭೆಗಳು ಮಣ್ಣುಪಾಲಾಗುತ್ತವೆ. ದೇಶದ ಕ್ರೀಡಾ ವ್ಯವಸ್ಥೆ ನಲುಗುತ್ತದೆಯಲ್ಲವೇ? ❖



* ಪರೀಕ್ಷೆ ನಡೆಸಿರುವ 7113 ಮಾದರಿಗಳಲ್ಲಿ 6,576 ಮೂತ್ರದ ಮಾದರಿಗಳು ಮತ್ತು 537 ರಕ್ತದ ಮಾದರಿಗಳು



ಕಿಟ್ ಉತ್ಪಾದನೆ ದೇಶಿಯವಾಗಲಿ



ಭಾರತವು ಜಾಗತಿಕ ಮಟ್ಟದಲ್ಲಿ ಕ್ರೀಡೆಯ ಶಕ್ತಿ ಕೇಂದ್ರವಾಗಿದೆ. ನಮ್ಮ ಕ್ರೀಡಾಪಟುಗಳು ಅಡೆತಡೆಗಳನ್ನು ಮೀರಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕಗಳನ್ನು ಪಡೆದಿದ್ದಾರೆ ಮತ್ತು ಲಕ್ಷಾಂತರ ಜನರಿಗೆ ಸ್ಫೂರ್ತಿಯಾಗಿದ್ದಾರೆ. ಆದರೆ ಉದ್ದೀಪನ ಮದ್ದಿನ ಬಳಕೆಯು ನ್ಯಾಯಯುತ ಆಟ, ಕ್ರೀಡಾಳುಗಳ ಆರೋಗ್ಯ ಮತ್ತು ದೇಶದ ಘನತೆಯ ಮೇಲೆ ಪರಿಣಾಮ ಬೀರುತ್ತದೆ. ನಿಷೇಧಿತ ಉದ್ದೀಪನ ಮದ್ದು ಸೇವನೆಯನ್ನು ಪತ್ತೆ ಮಾಡುವ ಉತ್ತಮ ಗುಣಮಟ್ಟದ ಕಿಟ್‌ಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಇದರಿಂದಾಗಿ ಅಧಿಕ ವೆಚ್ಚ, ಪರೀಕ್ಷೆಯಲ್ಲಿ ವಿಳಂಬ ಮತ್ತು ಇತರ ಏಜೆನ್ಸಿಗಳ ಮೇಲೆ ಅವಲಂಬಿತರಾಗಬೇಕಾಗುತ್ತದೆ. ಕಿಟ್‌ಗಳು ಅಗ್ಗವಾದರೆ ತಳಮಟ್ಟದ ಕ್ರೀಡಾಕೂಟಗಳಿಂದ ಬಳಕೆಗೆ ಅನುಕೂಲವಾಗಬಹುದು.

ಪಿ.ಟಿ. ಉಷಾ, ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ

ಕಠಿಣ ಶಿಕ್ಷೆ ಬೇಕು



ವಾಡಾವು ಪ್ರತಿಯೊಂದು ದೇಶಕ್ಕೂ ಒಂದೇ ಅಂತರರಾಷ್ಟ್ರೀಯ ಪ್ರಯೋಗಾಲಯ ಮಂಜೂರು ಮಾಡುತ್ತದೆ. ನಮ್ಮ ದೇಶದ ಪ್ರಯೋಗಾಲಯ ಚೆನ್ನಾಗಿದೆ. ಇಷ್ಟು ಪ್ರಕರಣಗಳು ವರದಿಯಾಗುತ್ತಿವೆ ಎಂದರೆ, ಅಷ್ಟು ಪರೀಕ್ಷೆಗಳು ಕಟ್ಟುನಿಟ್ಟಾಗಿ ನಡೆಯುತ್ತಿವೆ ಎಂದು ಅರ್ಥ. ಆದರೆ, ನಾಡಾದಲ್ಲಿ ಕಾರ್ಯನಿರ್ವಹಿಸಲು ನುರಿತ ಮತ್ತು ಪರಿಣತ ವೈದ್ಯರನ್ನು ನೇಮಕ ಮಾಡಿಕೊಳ್ಳಬೇಕಿದೆ. ಇದರಿಂದಾಗಿ ಮಾದರಿ ಸಂಗ್ರಹ, ಪರೀಕ್ಷೆಗಳ ಗುಣಮಟ್ಟವನ್ನು ಸುಧಾರಿಸಬಹುದಾಗಿದೆ. ಎಲ್ಲದರೊಂದಿಗೆ ತಪ್ಪಿತಸ್ಥರಿಂದ ಕೇವಲ ಪದಕ ಕಿತ್ತುಕೊಳ್ಳುವುದಷ್ಟೇ ಶಿಕ್ಷೆಯಾಗಬಾರದು. ಅವರಿಗೆ ನೀಡಿರುವ ಎಲ್ಲ ಸೌಲಭ್ಯ ಮತ್ತು ಉದ್ಯೋಗಗಳನ್ನೂ ಕಿತ್ತುಕೊಳ್ಳಬೇಕು.

ಡಾ. ಕಿರಣ ಕುಲಕರ್ಣಿ, ಎಎಫ್‌ಸಿ ಡೋಪಿಂಗ್ ನಿಯಂತ್ರಣ ಅಧಿಕಾರಿ

ರಾಷ್ಟ್ರೀಯ

'ಪೊಂಗಲ್ ಜಾಗತಿಕ ಹಬ್ಬ'



ನವದೆಹಲಿಯಲ್ಲಿ 'ಪೊಂಗಲ್' ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರು ಪೂಜೆ ನೆರವೇರಿಸಿದರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): 'ಸಂಕ್ರಾಂತಿ ಅಥವಾ ಪೊಂಗಲ್ ಜಾಗತಿಕ ಹಬ್ಬ. ಇದು ಜಗತ್ತಿನ ಅತಿ ಪುರಾತನ ನಾಗರಿಕತೆಯನ್ನು ಪ್ರತಿನಿಧಿಸುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಶ್ಲಾಘಿಸಿದರು.

ರಾಜಧಾನಿಯಲ್ಲಿ ಕೇಂದ್ರ ಸಚಿವ ಎಲ್.ಮುರುಗನ್ ಅವರ ನಿವಾಸದಲ್ಲಿ ಆಯೋಜಿಸಿದ್ದ 'ಪೊಂಗಲ್' ಹಬ್ಬದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಈ ಹಬ್ಬವು ರೈತರ ಕಠಿಣ ಪರಿಶ್ರಮದ ಪ್ರತಿಬಿಂಬ. ಸಂಕ್ರಾಂತಿ ಆಚರಣೆ ಮೂಲಕ ಭೂಮಿ ಮತ್ತು ಸೂರ್ಯನಿಗೆ ಕೃತಜ್ಞತೆ ಸಲ್ಲಿಸುತ್ತೇವೆ' ಎಂದರು.

ಜಗತ್ತಿನಾದ್ಯಂತ ಇರುವ ತಮಿಳು ಸಮುದಾಯ ಮತ್ತು ತಮಿಳು ಸಂಸ್ಕೃತಿಯನ್ನು ಪ್ರೀತಿಸುವವರು 'ಪೊಂಗಲ್' ಹಬ್ಬವನ್ನು ಅತ್ಯಂತ ಸಂಭ್ರಮದಿಂದ ಆಚರಿಸುತ್ತಾರೆ. ಅವರ ನಡುವೆ ಇರುವ ಬಗ್ಗೆ ಹೆಮ್ಮೆ ಇದೆ' ಎಂದು ಹೇಳಿದರು.

'ತಮಿಳು ಸಂಸ್ಕೃತಿಯು ಅಸ್ತಿತ್ವದಲ್ಲಿರುವ ಜಗತ್ತಿನ ಅತಿ ಪುರಾತನ ನಾಗರಿಕತೆಗಳಲ್ಲೊಂದು. ಶತಮಾನಗಳ ಜ್ಞಾನ ಮತ್ತು ಸಂಪ್ರದಾಯವನ್ನು ಇದು ಒಳಗೊಂಡಿದೆ. ಈ ಪರಂಪರೆಯಿಂದ ಪ್ರೇರಿತವಾಗಿ ಭಾರತವು ಮುನ್ನಡೆಯುತ್ತಿದೆ. ಇಂಥ ಸಾಂಸ್ಕೃತಿಕ ಬೇರುಗಳಿಂದ ದೇಶವು ಮತ್ತಷ್ಟು ಬಲಿಷ್ಠವಾಗಿದೆ' ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ಕೇಂದ್ರ ಸಚಿವರಾದ ಜಿ.ಕಿಶನ್ ರೆಡ್ಡಿ ಮತ್ತು ರಾಮ್ ಮೋಹನ್ ನಾಯ್ಡು ಅವರು ಭಾಗಿಯಾಗಿದ್ದರು.

ಪತ್ರದ ಮೂಲಕ ಶುಭ ಕೋರಿಕೆ: ಪ್ರಧಾನಿ ಮೋದಿ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಮುನ್ನ ಪೊಂಗಲ್ ಹಬ್ಬಕ್ಕೆ 'ಎಕ್ಸ್'ನಲ್ಲಿ ಪತ್ರ ಬರೆದು ಶುಭ ಕೋರಿದ್ದರು.

'ಪರಾಶಕ್ತಿ' ಸಿನಿ ತಂಡದೊಂದಿಗೆ ಆಚರಣೆ

ಪ್ರಧಾನಿ ನರೇಂದ್ರ ಮೋದಿ ಅವರು ತಮಿಳಿನ 'ಪರಾಶಕ್ತಿ' ಸಿನಿಮಾ ತಂಡದೊಂದಿಗೆ ಬುಧವಾರ 'ಪೊಂಗಲ್' ಹಬ್ಬವನ್ನು ಆಚರಿಸಿದರು.

ನಟರಾದ ಶಿವಕಾರ್ತಿಕೇಯನ್, ರವಿ ಮೋಹನ್ ಮತ್ತು ಸಂಗೀತ ಸಂಯೋಜಕ ಜಿ.ವಿ.ಪ್ರಕಾಶ್ ಕುಮಾರ್ ಅವರು ಕೇಂದ್ರ ಸಚಿವ ಎಲ್.ಮುರುಗನ್ ಅವರ ನಿವಾಸದಲ್ಲಿ ಪ್ರಧಾನಿಯನ್ನು ಭೇಟಿಯಾದರು.

ನೀಟ್ ಪಿಜಿ: ಅರ್ಹತಾ ಅಂಕ ಕಡಿತ

ನವದೆಹಲಿ (ಪಿಟಿಐ): ದೇಶದಾದ್ಯಂತ 18 ಸಾವಿರಕ್ಕೂ ಹೆಚ್ಚು ಸ್ನಾತಕೋತ್ತರ ವೈದ್ಯಕೀಯ ಸೀಟುಗಳು ಖಾಲಿ ಉಳಿದಿರುವುದರಿಂದ ರಾಷ್ಟ್ರೀಯ ವೈದ್ಯಕೀಯ ವಿಜ್ಞಾನ ಪರೀಕ್ಷಾ ಮಂಡಳಿಯು (ಎನ್‌ಬಿಇಎಂಎಸ್) 2025ರ ನೀಟ್–ಪಿಜಿ ಪ್ರವೇಶದ ಅರ್ಹತಾ ಅಂಕಗಳನ್ನು ಕಡಿತಗೊಳಿಸಿದೆ.

ಎನ್‌ಬಿಇಎಂಎಸ್ ಮಂಗಳವಾರ ಪ್ರಕಟಿಸಿದ ಆದೇಶದ ಪ್ರಕಾರ, ಮೀಸಲು ವರ್ಗದ ಅಭ್ಯರ್ಥಿಗಳಿಗೆ ನಿಗದಿಪಡಿಸಿದ್ದ ಶೇ 40ರಷ್ಟು ಅರ್ಹತಾ ಅಂಕಗಳನ್ನು ಶೂನ್ಯಕ್ಕೆ ಇಳಿಸಲಾಗಿದೆ. ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಶೇ 50ರಿಂದ ಶೇ 7ಕ್ಕೆ ಇಳಿಸಲಾಗಿದೆ. ಎರಡನೇ ಸುತ್ತಿನ ಕೌನ್ಸೆಲಿಂಗ್ ಪೂರ್ಣಗೊಂಡ ನಂತರ ಈ ನಿರ್ಧಾರ ಕೈಗೊಳ್ಳಲಾಗಿದೆ.

ವೈದ್ಯಕೀಯ ಸೀಟುಗಳನ್ನು ಖಾಲಿ ಬಿಡುವುದರಿಂದ ಆರೋಗ್ಯ ಸೇವೆಯನ್ನು ಸುಧಾರಿಸುವ ಪ್ರಯತ್ನಗಳು ದುರ್ಬಲಗೊಳ್ಳುತ್ತವೆ. ಶೈಕ್ಷಣಿಕ ಸಂಪನ್ಮೂಲಗಳ ನಷ್ಟಕ್ಕೆ ಕಾರಣವಾಗುತ್ತದೆ. ತಜ್ಞವೈದ್ಯರ ಸಂಖ್ಯೆ ಹೆಚ್ಚಿಸಲು ಲಭ್ಯವಿರುವ ಸೀಟುಗಳ ಬಳಕೆಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಈ ಪರಿಷ್ಕರಣೆ ಮಾಡಲಾಗಿದೆ ಅಧಿಕೃತ ಎಂದು ಮೂಲಗಳು ತಿಳಿಸಿವೆ.

ವೈದ್ಯಕೀಯ ಸೀಟುಗಳು ವ್ಯರ್ಥವಾಗುವುದನ್ನು ತಡೆಗಟ್ಟಲು ಹಾಗೂ ಆರೋಗ್ಯ ಸೇವೆಗಳನ್ನು ಬಲಪಡಿಸಲು ಅರ್ಹತಾ ಅಂಕಗಳನ್ನು ಪರಿಷ್ಕರಿಸಬೇಕು ಎಂದು ಭಾರತೀಯ ವೈದ್ಯಕೀಯ ಸಂಘವು ಜನವರಿ 12ರಂದು ಮನವಿ ಮಾಡಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ ಜಪಾನ್‌ನಲ್ಲಿ ಹೊಸ ಮೆಟ್ರೊಕ್ಕೆ ಚಾಲನೆ ನೀಡುವುದಕ್ಕೂ ಮೊದಲು ಜಪಾನಿನ ಅಧಿಕಾರಿಗಳು ಹಿಂದೂ ಸಂಪ್ರದಾಯದಂತೆ ಮೆಟ್ರೊಕ್ಕೆ ಪೂಜೆ ಸಲ್ಲಿಸಿದ್ದಾರೆ ಎಂದು ಪ್ರತಿಪಾದಿಸುತ್ತಾ ಮೆಟ್ರೊ ರೈಲಿಗೆ ಆರತಿ ಬೆಳಗುವ, ತೆಂಗಿನಕಾಯಿ ಒಡೆಯುವ ವಿಡಿಯೊವನ್ನು ಬಳಕೆದಾರರೊಬ್ಬರು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ. ಇದರೊಂದಿಗೆ, ವಿಜ್ಞಾನ–ತಂತ್ರಜ್ಞಾನದಲ್ಲಿ ಭಾರತಕ್ಕಿಂತ ಜಪಾನ್ ಮುಂದಿದೆ. ಇದಕ್ಕೆ ಮುಖ್ಯ ಕಾರಣ ಎಂದರೆ, ಜಪಾನ್ ಈಗಲೂ ಸನಾತನ ಧರ್ಮವನ್ನು ಪಾಲಿಸುತ್ತಿದೆ. ಅಲ್ಲಿ ಪ್ರತಿಯೊಂದು ಕೆಲಸವನ್ನೂ ವೇದ ಕಾಲದ ಸನಾತನ ಹಿಂದೂ ಧರ್ಮದ ಅನುಸಾರ ಮಾಡಲಾಗುತ್ತಿದೆ' ಎಂಬ ಒಕ್ಕಣೆಯನ್ನೂ ಬರೆದಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



✓ ಇನ್‌ವಿಡ್ ಟೂಲ್ ಮೂಲಕ ವಿಡಿಯೊದಿಂದ ಕೀಫ್ರೇಮ್‌ಗಳನ್ನು ಪ್ರತ್ಯೇಕಿಸಿ ಒಂದು ಫ್ರೇಮ್ ಅನ್ನು ಗೂಗಲ್ ಲೆನ್ಸ್ ಬಳಸಿಕೊಂಡು ಹುಡುಕಾಡಿದಾಗ, ಸಾಮಾಜಿಕ ಜಾಲತಾಣಗಳ ಹಲವು ಬಳಕೆದಾರರು ಇದೇ ಪ್ರತಿಪಾದನೆಯೊಂದಿಗೆ ಪೋಸ್ಟ್ ಹಂಚಿರುವುದು ಕಂಡು ಬಂತು. ಹುಡುಕಾಟವನ್ನು ಮುಂದುವರಿಸಿದಾಗ, HK_Fotage_Pro ಎಂಬ ಯೂಟ್ಯೂಬ್ ಚಾನೆಲ್‌ನಲ್ಲಿ 2024ರ ಮಾರ್ಚ್ 9ರಂದು ಇದೇ ವಿಡಿಯೊವನ್ನು ಅಪ್‌ಲೋಡ್ ಮಾಡಿರುವುದು ಕಂಡು ಬಂತು. ವಿಡಿಯೊವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಅದು ಜಪಾನಿಗೆ ಸಂಬಂಧಿಸಿದ ವಿಡಿಯೊ ಅಲ್ಲ. ಬೆಂಗಳೂರು ಮೆಟ್ರೊದ ಹಳದಿ ಮಾರ್ಗಕ್ಕೆ (ಆರ್‌ವಿ ರಸ್ತೆ– ಎಲೆಕ್ಟ್ರಾನಿಕ್ ಸಿಟಿ) ಪೂರೈಸಲಾದ ಚಾಲಕರಹಿತ ಮೆಟ್ರೊ ರೈಲಿಗೆ ಸಂಬಂಧಿಸಿದ್ದಾಗಿತ್ತು. ಬೆಂಗಳೂರಿನ ಹಳದಿ ಮಾರ್ಗದ ಚಾಲಕರಹಿತ ಮೆಟ್ರೊಕ್ಕೆ ಪೂಜೆ ಎಂಬ ಶೀರ್ಷಿಕೆಯನ್ನೂ ಕೊಡಲಾಗಿತ್ತು.

ಮೊದಲ ಮೆಟ್ರೊ ಕೋಚ್ ಬೆಂಗಳೂರಿಗೆ ಬಂದಾಗ 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಸೇರಿದಂತೆ ಎಲ್ಲ ಪತ್ರಿಕೆಗಳೂ ವರದಿ ಮಾಡಿದ್ದವು. ಚೀನಾದ ಸರ್ಕಾರಿ ಸ್ವಾಮ್ಯದ ಸಿಆರ್‌ಆರ್‌ಸಿ ನಂಜಿಂಗ್ ಪುಝೆನ್ ಕೊ.ಲಿ. ಕಂಪನಿಯು ಈ ರೈಲನ್ನು ನಿರ್ಮಿಸಿದೆ. ಬೆಂಗಳೂರಿನ ವಿಡಿಯೊವನ್ನು ಜಪಾನಿನಲ್ಲಿ ನಡೆದ ವಿಡಿಯೊ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ. ಈ ವಿಡಿಯೊಕ್ಕೂ ಜಪಾನ್‌ಗೂ ಸಂಬಂಧವಿಲ್ಲ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಅಪ್ಪ ಹಾಕಿದ ಮರ

ನುಡಿ ಬೆಳಗು



ಪಿ.ಚಂದ್ರಿಕಾ

ಕೃಷ್ಣಪ್ಪ ತಾನು ಹದಿಮೂರು ವರ್ಷಗಳ ಹಿಂದೆ ಅಪ್ಪ ಹಾಕಿದ್ದ ಮಾವಿನ ಮರಗಳನ್ನು ಕಡಿಯುತ್ತಿದ್ದ. ಅವನ ಕೈಗಳಿಗೆ ಎಂಥದ್ದೋ ಶಕ್ತಿ-ಮನಸ್ಸಿಗೆ ಏನನ್ನೋ ಮಾಡುವ ಹುಮ್ಮಸ್ಸು. ಅವನಿಗೆ ಈಗ ಹಣ ಮಾಡುವುದಷ್ಟೇ ಬೇಕಿರುವ ವಿಷಯ. ಕಣ್ಣೆದುರಿಗೆ ತನ್ನ ಹಾಗೆ ಇರುವ ರೈತರು ತಕ್ಷಣಕ್ಕೆ ಅಗತ್ಯ ಇರುವುದನ್ನು ಬೆಳೆದು ಹಣ ಮಾಡುತ್ತಿರುವುದು ಕಾಣುತ್ತಿತ್ತು. ಹಾಕಿದ್ದ ಬಂಡವಾಳವನ್ನು ದುಪ್ಪಟ್ಟುಗೊಳಿಸಿ ಮತ್ತಷ್ಟು ದುಡಿವ ಹುಮ್ಮಸ್ಸಿನಿಂದಿದ್ದ.

'ಮಾವು ನೆರಳಾಗುತ್ತಿದೆಯಲ್ಲೋ ಕೃಷ್ಣಪ್ಪ, ಅದರ ಕೆಳಗೆ ಏನನ್ನು ಬೆಳೀತೀಯ? ಮರದ ಗಬೆಗೆ ಇಟ್ಟ ಎಲ್ಲಾ ಬೆಳೆ ಸೀದುಹೋಗುತ್ತೆ' ಎಂದವರ ಮಾತಿಗೆ ಹೂಂಗುಡುತ್ತಾ ತೋಳಿನ ಕಸುವಿಗೆ ಹೇಳಿದ್ದು ಒಂದೇ ಮಾತು, 'ಎಲ್ಲ ಮರಗಳನ್ನು ಕಡಿ'. ಕೈ ಬೊಬ್ಬೆ ಬಂದರೂ ಬಿಡಲಿಲ್ಲ. ಗುರಿಯೊಂದೇ ಎನ್ನುವಂತೆ ಕಡಿದ. ದಾರಿಯಲ್ಲಿ ಹೋಗುವ ಒಬ್ಬ ವಯಸ್ಸಾದವ, 'ಅಲ್ಲಪ್ಪಾ, ಈ ಮರಗಳು ನಿನಗೇನು ಮಾಡಿದ್ದವು? ಇವನ್ಯಾಕೆ ಕಡಿಯುತ್ತಿರುವೆ' ಎಂದ. ಅದಕ್ಕವ, 'ಈ ಮರಗಳು ವರ್ಷಕ್ಕೊಮ್ಮೆ ಫಲ ಕೊಡುತ್ತವೆ. ಸದ್ಯದ ನನ್ನ ಅಗತ್ಯವನ್ನು ನೀಗಿಸಲ್ಲ. ಅದಕ್ಕೆ ಯಾವುದಾದರೂ ತಕ್ಷಣ ದುಡ್ಡು ಬರುವ ಬೆಳೆಯನ್ನು ಇಡುವೆ' ಎಂದ.

'ಬೆಳೆದ ಮರಗಳನ್ನು ಕಡಿಯುವುದು ಮೂರ್ಖತನ ಅಷ್ಟು ಬೆಳೆಯಲು ಎಷ್ಟು ಸಮಯ ತೆಗೆದುಕೊಂಡಿವೆ. ಅವುಗಳನ್ನು ಭೂಮಿ ಪ್ರೀತಿಯಿಂದ ಸಲಹಿದೆ. ಆಕಾಶ ಅಕ್ಕರೆಯಿಂದ ಮಳೆ ಎರೆದಿದೆ. ಗಾಳಿ ಅದು ಬೆಳೆಯಲು ಉಸಿರುಕೊಟ್ಟಿದೆ. ನಿನ್ನಪ್ಪ ತನ್ನ ಕನಸ ಕೂಸುಗಳೋ ಎಂಬಂತೆ ಬೆಳೆಸಿದ್ದಾನೆ. ನೀನು ಇವನ್ನು ಅಡ್ಡ ಎನ್ನುತ್ತಿರುವೆ. ಬೇಕಿದ್ದರೆ ರೆಂಬೆಗಳನ್ನು ಕತ್ತರಿಸು ಮರ ಉಳಿಸಿಕೋ. ಎಂದಾದರೂ ಬೆಳೆ ಕೊಟ್ಟೇ ಕೊಡುತ್ತವೆ. ಈಗ ಮಧ್ಯದಲ್ಲಿ ಆಗುವಷ್ಟನ್ನು ಬೆಳಿ' ಎಂದ ವೃದ್ಧ. ಮಾತು ಗಾಳಿಗೆ ತೂರಿತ್ತು. ಮಾವಿನ ಮರಗಳು ನೆಲಕ್ಕುರುಳಿ ಇಡೀ ತೋಟ ಬಯಲಾಯಿತು. ಅಂದುಕೊಂಡ, 'ಇನ್ನು ನಾನು ಏನನ್ನು ಬೇಕಾದರೂ ಬೆಳೆಯಬಲ್ಲೆ'.

ಸುತ್ತಮುತ್ತಲ ರೈತರಂತೆ ಕೃಷ್ಣಪ್ಪನೂ ಟೊಮೆಟೊವನ್ನೇ ಬೆಳೆದ. ಹೋದ ಸಲ ಅದರಿಂದಲೇ ಹಣ ಮಾಡಿದವರಿದ್ದರು. ಈ ಸಲ ಎಲ್ಲರೂ ಒಂದನ್ನೇ ಬೆಳೆದದ್ದರಿಂದ ಬೆಲೆ ಇಳಿದುಹೋಯಿತು. ಬೆಳೆದದ್ದು ಹೋಗಲಿ; ಗಿಡದಿಂದ ಕಾಯಿ ಕಿತ್ತ ಕೂಲಿಯೂ ಹುಟ್ಟಲಿಲ್ಲ. ಟೊಮೆಟೊಗಳನ್ನು ಕೇಳುವವರಿಲ್ಲದಾಗಿ ಟನ್‌ಗಟ್ಟಲೆ ರಸ್ತೆಗೆ ಸುರಿದು ರೈತರು ಪ್ರತಿಭಟಿಸಿದರು. ಎಲ್ಲರ ಸ್ಥಿತಿಯೂ ಒಂದೇ ಆದ ಮೇಲೆ ಗೋಳು ಹೇಳಿಕೊಳ್ಳುವುದು ಯಾರಲ್ಲಿ? ಆ ವರ್ಷ ಕೃಷ್ಣಪ್ಪನ ದುರದೃಷ್ಟ ಎನ್ನುವಂತೆ ಸುತ್ತಮುತ್ತ ಮಾವು ಬೇರೆ ಕಡೆಗಿಂತ ಅದ್ಭುತವಾಗಿ ಬಂದಿತ್ತು. ಬೆಲೆಯೂ ಏರಿಕೆಯಾಗಿತ್ತು. ಕೃಷ್ಣಪ್ಪ ಅನಾಥನಾದ- ಈಗ ಮಾವಿನ ಮರಗಳನ್ನು ನೆಟ್ಟು ಬೆಳೆಸುವ ಶಕ್ತಿ, ಸಮಯ ಅವನ ಬಳಿಯಿಲ್ಲ. ಅವನು ಮುಂದೆ ಏನನ್ನಾದರೂ ಬೆಳೆಯಬಹುದು. ಹೋದ ಮರ, ಸಮಯ ಎರಡೂ ಬರುವುದಿಲ್ಲ.

ಅಪ್ಪ ಹಾಕಿದ ಮರಕ್ಕೆ ಜೋತುಬೀಳುಬಾರದು, ಅದನ್ನು ಕಾಪಾಡಿಕೊಳ್ಳಬೇಕು ಎನ್ನುವುದೂ ಮುಖ್ಯವೇ. ಇರುವುದು ಉಳಿಸಿಕೊಂಡು, ಅದರ ಜೊತೆ ಏನಾದರೂ ಮಾಡಿ ಸಾಧಿಸುವ ಹಾಗಾದರೆ ಬದುಕು ಸಹನೀಯವಲ್ಲವೇ. ❖

ಪದಬಂಧ 6285


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಾದ ನಡೆಯುತ್ತಿದ್ದಾಗಲೇ ಈ ಭಾಷಾಂತರ! (4)
3.ರಾಯರಿಗೆ ಆಭಾರಿಯಾಗಿರುವ ರಾಜಪ್ರತಿನಿಧಿ! (4)
5.ಮಣಿ ಧರಿಸಿರುವ ಚಲುವೆ (3)
6.ಯಮನ ಜೊತೆ ಕಳೆದ ಕಾಲ (3)
8.ಜೇನು ತುಪ್ಪ ಇಲ್ಲಿದೆ (3)
9.ವರ ನೀಡಿದ ವಿಸ್ತಾರ ಹೇಳಿಕೆ (3)
10.ಪೂಜಾ ವೇಳೆಯಲ್ಲಿ ನೀರು ತುಂಬಿದ ಚೊಂಬು (3)
12.ಜಲದೊಳಗೆ ಸಂಕೀರ್ಣ! (3)
14.ನೆಮ್ಮದಿ ಈ ರೀತಿ ಬಂದಿದೆ (4)
15.ಪರದೆಯ ಹಿಂದಿರುವ ಗುಟ್ಟು (4)

ಮೇಲಿಂದ ಕೆಳಕ್ಕೆ

1.ಬಟ್ಟೆಗಳನ್ನು ಮಡಿಮಾಡುವವನು (3)
2.ದರಬಾರಿನಲ್ಲಿ ವಿಧಿಸಿದ ಬೆಲೆ (2)
3.ರಾಜನ ಹೆಂಡತಿ (2)
4.ದುರಸ್ತಿಯನ್ನು ಹೀಗೆನ್ನಿ (3)
7.ಮೃತ್ಯುದೇವತೆಯ ಆಳು (5)
8.ನಯವಾದ ಮಾತಿನಲ್ಲೇ ಮೋಸ ಮಾಡಿದವ (5)
9.ಸರಸದ ವಿರುದ್ಧ ಪದ (3)
11.ಅಕ್ಕರೆಯಿಂದ ತಿನ್ನಿಸಿದ ಸಿಹಿ (3)
12.ಜವಾನನ ಸುತ್ತ ನೆರೆದಿರುವ ಮಂದಿ (2)
13.ಮರಕ್ಕೆ ಹಬ್ಬಿದ ಬಳ್ಳಿ (2)



6284ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಪರಂಧಾಮ 5.ಅವಿನಾಭಾವ 7.ಚರಕ 8.ಅಜ 9.ಬಹುರೂಪಿಚೌಡಯ್ಯ 10.ಅಲೆ 11.ವಿಷಮ 13.ಹಯವದನ 14.ನಡುಮನೆ

ಮೇಲಿಂದ ಕೆಳಕ್ಕೆ: 1.ನವಿಲು 3.ರಂಜಕ 4.ಮಹಾರಾಜ 6.ವಚನಪಿತಾಮಹ 8.ಅಯ್ಯ 9.ಬಲೆ 10.ಅವಮಾನ 11.ವಿದ್ರುಮ 12.ಸಾದರ

ಸುಡೊಕು 6669

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2			5		8	4	
8			3		9			1
	4			1				7
	3	2				7		6
				7			9	
7	9							5
3	1		9				7	
	7			8		1	6	9
	6	9			1		3	

6668 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

15 ಜನವರಿ 2026 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣ ದ್ವಾದಶಿ ಗಂ 20-17 ನಕ್ಷತ್ರ: ಜ್ಯೇಷ್ಠ ಗಂ 29-48 ಯೋಗ: ವೃದ್ಧಿ ಗಂ. 20-38 ಕರಣ: ಕೌಲವ ಗಂ. 7-07 ಮಕರ ಮಾಸದ 01 ನೇ ದಿನ. ಮಳೆ ನಕ್ಷತ್ರ : ಉತ್ತರಾಷಾಢ 2 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 -03-00, ಸೂರ್ಯೋದಯ : 07-01 ಸೂರ್ಯಾಸ್ತ : 06-19, ಮುಸ್ಲಿಂ ದಿನಾಂಕ : 25 ರಜಬ್, ದಿನ ವಿಶೇಷ : ಮಕರ ಸಂಕ್ರಾಂತಿ, ಅದೃಷ್ಟ ಸಂಖ್ಯೆ : 5, 8

ಮೇಷ: ಸಾಂಸಾರಿಕ ವಿಚಾರಕ್ಕೆ ಸಂಬಂಧಿಸಿದಂತೆ ಆತುರದಿಂದ ಯಾವುದೇ ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ. ಅನ್ಯರ ಸಹಾಯ, ಸಹಕಾರವೆಂಬುವುದು ಈ ದಿನ ಇಲ್ಲವಾಗುವುದು.

ವೃಷಭ: ಅವಶ್ಯಕತೆಗಿಂತ ಹೆಚ್ಚಾಗಿ ಹಣ ವ್ಯಯವಾಗುವುದು. ಮದುವೆ ವಿಷಯದಲ್ಲಿ ಮನೆಯವರಿಂದ ಒತ್ತಡ ಬರಲಿದೆ. ಕುಟುಂಬದಲ್ಲಿ ನಿಮ್ಮ ನಿಲುವುಗಳೇನು ಎಂಬುದನ್ನು ಸ್ಪಷ್ಟ ಪಡಿಸಬೇಕಾಗುವುದು.

ಮಿಥುನ: ವಿವೇಚನೆಯಿಂದ ಆಲೋಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಉತ್ತಮ. ಬಾಕಿ ಉಳಿದ ಕೆಲಸ ಪೂರ್ತಿಗೊಳಿಸಲು ಪ್ರಶಸ್ತವಾಗಿದೆ. ಧ್ಯಾನ ಹಾಗೂ ಯೋಗದ ಅಭ್ಯಾಸದಿಂದ ಅನುಕೂಲ.

ಕರ್ಕಾಟಕ: ಹಿತಶತ್ರುಗಳ ವಿದ್ರೋಹ ಅನುಭವಕ್ಕೆ ಬಂದೀತು. ಹೆದರುವ ಅವಶ್ಯಕತೆ ಇಲ್ಲ. ಹಾಲಿನ ಉತ್ಪನ್ನಗಳ ಮಾರಾಟಗಾರರಿಗೆ ಲಾಭ ಬರುವುದು. ಗೃಹ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವುದು.

ಸಿಂಹ: ವಿರೋಧಿಗಳ ಅಥವಾ ಸಂಬಂಧಿಕರ ಟೀಕೆಗಳಿಗೆ ಕಿವಿಯೊಡ್ಡಿದರೆ ಉಪಯೋಗವಾಗುವುದಿಲ್ಲ, ಕೇವಲ ಸಮಯ ಹಾಳಾಗುವುದು ಎಂದು ತಿಳಿದಿರಲಿ. ಸಾಮಾಜಿಕ ಗಲಭೆಯಿಂದ ದೂರವಿರಿ.

ಕನ್ಯಾ: ಹೊಸ ಮನೆಯ ಅಥವಾ ನಿವೇಶನದ ದಾಖಲೆ ಕೆಲಸಗಳಿಗಾಗಿ ಓಡಾಟ ನಡೆಸ ಬೇಕಾಗುವುದು. ರಾಜಕೀಯ ರಂಗದಲ್ಲಿ ಬಹಳ ದಿನಗಳ ನಂತರ ಯಶಸ್ಸು ದೊರೆಯಲಿದೆ.

ತುಲಾ: ಸಿಹಿ ತಿಂಡಿ ತಯಾರಕರಿಗೆ ಕಾರ್ಮಿಕರ ಕೊರತೆ ಎದುರಾಗುವ ಸಾಧ್ಯತೆ ಇದೆ. ಅಧಿಕಾರಿಗಳಿಗೆ ಬೇಡಿಕೆಗಳನ್ನು ಸ್ಪಷ್ಟವಾಗಿ ತಿಳಿಸಿದರೆ, ಬಯಕೆ ಈಡೇರುವುದು. ಶ್ರೀರಾಮ ನಾಮ ಸ್ಮರಣೆ ಮಾಡಿ.

ವೃಶ್ಚಿಕ: ವೈಯಕ್ತಿಕ ವಿಚಾರಗಳನ್ನು ಆಪ್ತರೊಬ್ಬರಲ್ಲಿ ಹೇಳಿಕೊಳ್ಳಲೇಬೇಕಾದ ಸಂದರ್ಭ ಬರಲಿದೆ. ಹಗುರಾಗುವಿರಿ. ಜೀವನಕ್ರಮದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ.

ಧನು: ಹಿರಿಯರಲ್ಲಿ ಮುಖ್ಯವಾದ ವಿಚಾರ ಮಾತನಾಡುವಾಗ ಪರಿಸ್ಥಿತಿಯನ್ನು ತಪ್ಪಾಗಿ ಅರ್ಥೈಸದೆ ಮನದ ಭಾವನೆಯನ್ನು ಸ್ಪಷ್ಟವಾಗಿ ತೆರೆದಿಡಿ. ಬಂಧುಗಳ ಆಗಮನ ಸಂತಸ ತರಲಿದೆ.

ಮಕರ: ಹಳೆಯ ಸ್ನೇಹಿತನೊಬ್ಬನ ಆಕಸ್ಮಿಕ ಭೇಟಿ ಸಂತಸ ತರಲಿದೆ. ಆರೋಗ್ಯ ಸುಧಾರಿಸಿ ಎಂದಿನಂತೆ ಕೆಲಸಕ್ಕೆ ತೆರಳುವಂತಾಗುತ್ತದೆ. ತೊಂದರೆಗಳನ್ನು ಎದುರಿಸುವಾಗ ಧೈರ್ಯಗೆಡದಿರಿ.


ಕುಂಭ: ವೃತ್ತಿಯಲ್ಲಿ ಸಮಸ್ಯೆಗಳು ಎದುರಾಗುವ ಪ್ರಸಂಗ ಬಂದರೂ ಧೈರ್ಯದಿಂದ ಎದುರಿಸಿ. ನಿಮ್ಮ ಕಾರ್ಯದೊತ್ತಡದಲ್ಲಿ ಮನೆಯ ವಿಚಾರಗಳತ್ತ ಗಮನಹರಿಸುವುದು ಮುಖ್ಯವಾಗುವುದು.

ಮೀನ: ಪ್ರಾಮಾಣಿಕತೆಯನ್ನು ದುರುಪಯೋಗಪಡಿಸಿಕೊಂಡು ಲಾಭ ಮಾಡಿಕೊಳ್ಳಬಹುದು. ನಷ್ಟಗಳನ್ನು ಸುಧಾರಿಸಿಕೊಂಡು ಹೋಗುವ ಧೈರ್ಯವಿರಲಿ. ಕೆಲಸಗಳು ನಿಧಾನವಾಗಿ ಸಾಗಲಿವೆ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,732
ಇಂದಿನ ಅಂತ್ಯ:	25,665
ದಿನದ ಕುಸಿತ:	66

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹605
12 ಕ್ಕೆ	₹90
ಮೈಸೂರು: 100 ಕ್ಕೆ	₹605

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹184
ಆರ್‌ಎಸ್‌ಎಸ್-5	₹179
ಗುಡ್ ಲಾಟ್	₹167.50

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹455-749
ದ್ವಿತಳಿ (ಬಿ.ವಿ)	₹310-899

ಮುದ್ರಮನೆ ಕಾಫಿ

ಎಪಿ	₹26250
ಎಸಿ	₹14420
ಆರ್‌ಪಿ	₹17000
ಆರ್‌ಸಿ	₹10200

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಳೆಯ ವಹಿವಾಟಿನ ದರ) (10 ಕೆ.ಜಿ.)

ಶೇಂಗಾ (ರಿಫೈನ್ಡ್)	₹1630 (1630)
ಸೋಯಾ (ರಿಫೈನ್ಡ್)	₹1340 (1335)
ಸೂರ್ಯಕಾಂತಿ (ರಿಫೈನ್ಡ್)	₹1580 (1560)
ಪಾಮೊಲೀನ್	₹1280 (1275)

ಅಡಿಕೆ ಧಾರಣೆ

ಪುತ್ತೂರು		ಸಿದ್ದಾಪುರ		ಶಿರಸಿ	
ಕೋಕ	20000-35500	ಬಿಳೇಗೋಟು	25619-39309	ಚಾಲಿ	34699-53299
ಹೊಸತು	26000-46000	ಚಾಲಿ	42679-49319	ಬಿಳೇಗೋಟು	22109-41599
ಶಿವಮೊಗ್ಗ		ಕೋಕ	20699-28119	ಚಾಲಿ	43429-51111
ಬೆಟ್ಟೆ	54999-67789	ಹೊಸಚಾಲಿ	40000-43089	ಕೆಂಪುಗೋಟು	28699-36399
ಗೊರಬಲು	19040-42209	ಕೆಂಪುಗೋಟು	32099-32099	ರಾಶಿ	51099-58399
ರಾಶಿ	44299-56189	ರಾಶಿ	48099-54269	ಮಂಗಳೂರು	
ಸರಕು	57009-97999	ತಟ್ಟೆಬೆಟ್ಟೆ	41699-48699	ಹಳತು	36000-54500

ಬೆಳ್ಳಿ ಧಾರಣೆ ₹15 ಸಾವಿರ ಜಿಗಿತ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

ಬೆಳ್ಳಿ ದರವು ಕೆ.ಜಿಗೆ ₹15 ಸಾವಿರ ಹೆಚ್ಚಳವಾಗಿ, ₹2.86 ಲಕ್ಷದಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹1,500 ಏರಿಕೆಯಾಗಿ, ₹1,46,500ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಕಳೆದ ನಾಲ್ಕು ದಿನದ ವಹಿವಾಟಿನಲ್ಲಿ ಬೆಳ್ಳಿ ದರದಲ್ಲಿ ₹42,500 (ಶೇ 17.45ರಷ್ಟು) ಹೆಚ್ಚಳವಾಗಿದೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟು ಕೊನೆ ಆಗದಿರುವುದು, ಡಾಲರ್ ಮೌಲ್ಯ ಇಳಿಕೆ ಮತ್ತು ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತ ಮಾಡುವ ನಿರೀಕ್ಷೆ ಹೆಚ್ಚಳದಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯತ್ತ ಮುಖ ಮಾಡಿದ್ದಾರೆ. ಇದು ಚಿನ್ನ ಮತ್ತು ಬೆಳ್ಳಿ ದರ ಏರಿಕೆಗೆ ಕಾರಣ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ) 14-01-2026

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8000-8100
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತಿರಗಿ ಬಿಟ್ಟು)	1640 (1640)
ಒಂದು ಬಾರಿ ಫಿಲ್ಟರ್	1635 (1635)
ಸಾಮಾನ್ಯ ಡಬ್ಬದಲ್ಲಿ	1278 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1510 (1475)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿ)	
ಅಪರಂಜಿ ಚಿನ್ನ 10 ಗ್ರಾಂ	1,41,600 (1,40,700)
ಬೆಳ್ಳಿ ಕೆ.ಜಿಗೆ	2,81,000 (2,67,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಇನ್ಫೋಸಿಸ್ ವರಮಾನ ಹೆಚ್ಚಳ

ಡಿಸೆಂಬರ್ ತ್ರೈಮಾಸಿಕದ ಲಾಭದಲ್ಲಿ ಶೇ 2.2ರಷ್ಟು ಇಳಿಕೆ



ನಾವು ಈಗ ಎ.ಐ. ಸಂಬಂಧಿತ 4,600 ಯೋಜನೆಗಳಲ್ಲಿ ಕೆಲಸ ಮಾಡುತ್ತಿದ್ದೇವೆ. ನಮ್ಮ ತಂಡಗಳು ಎ.ಐ. ಬಳಸಿ 2.8 ಕೋಟಿ ಸಾಲುಗಳಷ್ಟು ಕೋಡ್ ಸೃಷ್ಟಿಸಿವೆ
ಸಲೀಲ್ ಪಾರೇಖ್, ಸಿಇಒ, ಇನ್ಫೋಸಿಸ್

ನವದೆಹಲಿ (ಪಿಟಿಐ): ಐ.ಟಿ. ಸೇವಾ ವಲಯದಲ್ಲಿ ದೇಶದ ಎರಡನೆಯ ಅತಿದೊಡ್ಡ ಕಂಪನಿಯಾದ ಇನ್ಫೋಸಿಸ್‌ನ ಡಿಸೆಂಬರ್ ತ್ರೈಮಾಸಿಕದ ಲಾಭವು ಶೇ 2.2ರಷ್ಟು ಕಡಿಮೆ ಆಗಿದ್ದು, ₹6,654 ಕೋಟಿಗೆ ತಲುಪಿದೆ.

ಕಾರ್ಮಿಕ ಸಂಹಿತೆಗಳ ಅನುಷ್ಠಾನದ ಪರಿಣಾಮವಾಗಿ ಕಂಪನಿಯು ಒಂದು ಬಾರಿಗೆ ₹1,289 ಕೋಟಿ ಮೊತ್ತ ಭರಿಸಬೇಕಾಯಿತು. ಇದು ಲಾಭದ ಪ್ರಮಾಣ ಕಡಿಮೆ ಆಗುವುದಕ್ಕೆ ಮುಖ್ಯ ಕಾರಣ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ₹6,806 ಕೋಟಿ ಲಾಭಗಳಿಸಿತ್ತು.

ಆದರೆ ಈ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ಕಾರ್ಯಾಚರಣೆ ವರಮಾನವು ಶೇ 8.9ರಷ್ಟು ಹೆಚ್ಚಾಗಿದ್ದು ₹45,479 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಾರ್ಯಾಚರಣೆ ವರಮಾನವು ₹41,764 ಕೋಟಿ ಆಗಿತ್ತು.

ಕಂಪನಿಯು ಪ್ರಸಕ್ತ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ತನ್ನ ವರಮಾನದಲ್ಲಿನ ಏರಿಕೆಯ ಅಂದಾಜನ್ನು ಪರಿಷ್ಕರಿಸಿದ್ದು, ಶೇ 3-3.5ಕ್ಕೆ ಹೆಚ್ಚಿಸಿದೆ. ಇದು ಈ ಮೊದಲು ಶೇ 2-3ರ ಮಟ್ಟದಲ್ಲಿತ್ತು.

ಕಾರ್ಮಿಕ ಸಂಹಿತೆಗಳ ಜಾರಿಯ ಕಾರಣದಿಂದಾಗಿ ಕಂಪನಿಯು ₹2,128 ಕೋಟಿ 'ಶಾಸನಾತ್ಮಕ ವೆಚ್ಚ' ಮಾಡಬೇಕಾಗಿ ಬಂದಿದೆ ಎಂದು ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಈ ವಾರದ ಆರಂಭದಲ್ಲಿ ಹೇಳಿತ್ತು. ಎಚ್‌ಸಿಎಲ್ ಟೆಕ್ ಕಂಪನಿಯು ₹719 ಕೋಟಿ ವೆಚ್ಚ ಮಾಡಬೇಕಾಯಿತು.

ಡಿಸೆಂಬರ್ ತ್ರೈಮಾಸಿಕದಲ್ಲಿ 'ಇನ್ಫೋಸಿಸ್ ಕಂಪನಿಯು ₹43 ಸಾವಿರ ಕೋಟಿ ಮೌಲ್ಯದ ಗುತ್ತಿಗೆಗಳನ್ನು ತನ್ನದಾಗಿಸಿಕೊಂಡಿದೆ. ಇದರಲ್ಲಿ ಶೇ 57ರಷ್ಟು ಸಂಪೂರ್ಣವಾಗಿ ಹೊಸ ಗುತ್ತಿಗೆಗಳು.

ಕೃತಕ ಬುದ್ಧಿಮತ್ತೆ ವಲಯದಲ್ಲಿ ಮುಂಚೂಣಿಯಲ್ಲಿ ಇರುವ ಸಾಮರ್ಥ್ಯವು ಕಂಪನಿಗೆ ಇದೆ ಎಂಬ ವಿಶ್ವಾಸ ವ್ಯಕ್ತಪಡಿಸಿರುವ ಸಿಇಒ ಸಲೀಲ್ ಪಾರೇಖ್, 'ಇನ್ಫೋಸಿಸ್ ಗ್ರಾಹಕರು ಹೆಚ್ಚಿನ ಪ್ರಮಾಣದಲ್ಲಿ ಎ.ಐ. ಅಳವಡಿಕೆ ಮಾಡಿಕೊಳ್ಳುತ್ತಿರುವುದು ಕಂಡುಬಂದಿದೆ' ಎಂದು ತಿಳಿಸಿದ್ದಾರೆ.

ಪ್ರಸಕ್ತ ಹಾಗೂ ಮುಂದಿನ ಹಣಕಾಸು ವರ್ಷದಲ್ಲಿ ಕಂಪನಿಯ ಸೇವೆಗಳಿಗೆ ಉತ್ತಮ ಬೇಡಿಕೆ ಇರಲಿದೆ ಎಂದು ಪಾರೇಖ್ ಅಂದಾಜು ಮಾಡಿದ್ದಾರೆ.

ಸುದ್ದಿ 2 ನಿಮಿಷ

ಸಗಟು ಹಣದುಬ್ಬರ ಏರಿಕೆ

ನವದೆಹಲಿ (ಪಿಟಿಐ): ದೇಶದ ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರಿತ ಹಣದುಬ್ಬರವು 2025ರ ಡಿಸೆಂಬರ್ ತಿಂಗಳಿನಲ್ಲಿ ಶೇ 0.83ರಷ್ಟು ಆಗಿದೆ ಎಂದು ಕೇಂದ್ರ ಕೈಗಾರಿಕಾ ಸಚಿವಾಲಯ ಬುಧವಾರ ತಿಳಿಸಿದೆ. ಇದು ಎಂಟು ತಿಂಗಳ ಗರಿಷ್ಠ ಮಟ್ಟದ ಏರಿಕೆಯಾಗಿದೆ.

ಆಹಾರ ಪದಾರ್ಥಗಳು, ಆಹಾರೇತರ ಪದಾರ್ಥಗಳು ಮತ್ತು ತಯಾರಿಕಾ ವಸ್ತುಗಳ ಬೆಲೆಯಲ್ಲಿನ ಹೆಚ್ಚಳವೇ ಸಗಟು ಹಣದುಬ್ಬರ ಏರಿಕೆಗೆ ಕಾರಣ ಎಂದು ತಿಳಿಸಿದೆ.

ನವೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಸಗಟು ಹಣದುಬ್ಬರವು ಕ್ರಮವಾಗಿ (–) ಶೇ 0.32 ಮತ್ತು (–) ಶೇ 1.02ರಷ್ಟಾಗಿತ್ತು. 2024ರ ಡಿಸೆಂಬರ್‌ನಲ್ಲಿ ಶೇ 2.57ರಷ್ಟು ದಾಖಲಾಗಿತ್ತು.

ಆಹಾರ ಪದಾರ್ಥಗಳ ಹಣದುಬ್ಬರವು ಡಿಸೆಂಬರ್‌ನಲ್ಲಿ ಶೇ 0.43 ಮತ್ತು ತರಕಾರಿಗಳ ಹಣದುಬ್ಬರ ಶೇ 3.50ರಷ್ಟರ ಎಂದು ತಿಳಿಸಿದೆ.

ಆಹಾರೇತರ ಪದಾರ್ಥಗಳ ಹಣದುಬ್ಬರ ನವೆಂಬರ್‌ನಲ್ಲಿ ಶೇ 2.27ರಷ್ಟಿತ್ತು. ಇದು ಡಿಸೆಂಬರ್‌ನಲ್ಲಿ ಶೇ 2.95ಕ್ಕೆ ಏರಿಕೆ ಆಗಿದೆ. ತಯಾರಿಕಾ ವಸ್ತುಗಳ ಹಣದುಬ್ಬರವು ಶೇ 1.33ರಿಂದ ಶೇ 1.82ಕ್ಕೆ ಹೆಚ್ಚಳವಾಗಿದೆ ಎಂದು ತಿಳಿಸಿದೆ.



ಆಹಾರ ಪದಾರ್ಥಗಳ ಬೆಲೆ ಏರಿಕೆಯಿಂದ ಚಿಲ್ಲರೆ ಹಣದುಬ್ಬರವು ಡಿಸೆಂಬರ್‌ನಲ್ಲಿ ಶೇ 1.33ರಷ್ಟು ದಾಖಲಾಗಿತ್ತು. ಇದು ಮೂರು ತಿಂಗಳ ಗರಿಷ್ಠ ಹೆಚ್ಚಳವಾಗಿತ್ತು.

ಬೆಂಗಳೂರಿನಲ್ಲಿ ಟೆಸ್ಲಾದ 'ಮಾಡೆಲ್ ವೈ' ಪ್ರದರ್ಶನ

ಬೆಂಗಳೂರು (ಪಿಟಿಐ): ಬೆಂಗಳೂರಿನ ಕೂಡ್ಲು ಗೇಟ್ ಬಳಿ ಇರುವ 'ಎಕೊ ವರ್ಲ್ಡ್' ಸೇವಾ ಕೇಂದ್ರದಲ್ಲಿ ಟೆಸ್ಲಾ ಕಂಪನಿಯ 'ಮಾಡೆಲ್ ವೈ' ಪ್ರದರ್ಶನ ಜನವರಿ 15ರಿಂದ 31ರವರೆಗೆ ಇರಲಿದ್ದು ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ ಎಂದು 'ಎಕೊ' ಕಾರ್ಯನಿರ್ವಾಹಕ ಉಪಾಧ್ಯಕ್ಷ ಆಶಿಶ್ ಮಿಶ್ರಾ ಹೇಳಿದ್ದಾರೆ.

ನಗರದಲ್ಲಿ ಇದೇ ಮೊದಲ ಬಾರಿಗೆ, ಟೆಸ್ಲಾದ 'ಮಾಡೆಲ್ ವೈ' ವಾಹನವನ್ನು ವೀಕ್ಷಿಸಬಹುದಾಗಿದೆ. ಈ ಪ್ರದರ್ಶನದಲ್ಲಿ ಟೆಸ್ಲಾ ಕಂಪನಿಯ ತಜ್ಞರು ಸಂದರ್ಶಕರಿಗೆ ವಾಹನದ ವೈಶಿಷ್ಟ್ಯ, ವಿನ್ಯಾಸ, ತಂತ್ರಜ್ಞಾನ ಸೇರಿದಂತೆ ವಿವಿಧ ಮಾಹಿತಿ ನೀಡಲಿದ್ದಾರೆ.

ಆಸಕ್ತ ಗ್ರಾಹಕರು ವಾಹನದ ಟೆಸ್ಟ್ ಡ್ರೈವ್ ಸಹ ಮಾಡಬಹುದಾಗಿದೆ. ಇದಕ್ಕಾಗಿ ಟೆಸ್ಲಾ ಇಂಡಿಯಾ ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಈ ವಾಹನವು ಅತ್ಯುತ್ತಮ ಸುರಕ್ಷತಾ ರೇಟಿಂಗ್ ಮತ್ತು ತ್ವರಿತ ಚಾರ್ಜಿಂಗ್ ಸಾಮರ್ಥ್ಯವನ್ನು ಹೊಂದಿದೆ ಎಂದು ತಿಳಿಸಿದ್ದಾರೆ.

ಏಪ್ರಿಲ್‌ಗೆ ಮತ್ತೆ ವಿದ್ಯುತ್ ಬರೆ

ಒಂದೇಟಿ ಪುಟದಿಂದ...

ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳಿಗೆ ನಿಗದಿಪಡಿಸುವ ವಿದ್ಯುತ್ ದರವನ್ನು ಜಾಸ್ತಿ ಮಾಡಿ, ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ನಿಗದಿಪಡಿಸಿರುವ ದರವನ್ನು ಕಡಿಮೆ ಮಾಡಬೇಕು ಎಂಬುದು ಎಸ್ಕಾಂಗಳ ಬೇಡಿಕೆಯಾಗಿದೆ.

ಯಾಕೆ ಈ ಬೇಡಿಕೆ?: ಕೃಷಿ ಪಂಪ್‌ಸೆಟ್‌ಗಳಿಗೆ ಪೂರೈಸುವ ಪ್ರತಿ ಯೂನಿಟ್ ವಿದ್ಯುತ್‌ಗೆ ₹6.80 ಇದ್ದ ದರವನ್ನು ಆಯೋಗವು ₹8.25ಕ್ಕೆ ಹೆಚ್ಚಿಸಿತ್ತು. ಪಂಪ್‌ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್ ನೀಡುವ ಕಾರಣ, ಇದರ ವೆಚ್ಚವನ್ನು ಸಹಾಯಧನದ ರೂಪದಲ್ಲಿ ಸರ್ಕಾರ ಎಸ್ಕಾಂಗಳಿಗೆ ತುಂಬಿಕೊಡಬೇಕು.

ಕಳೆದ ವರ್ಷ ದರ ಪರಿಷ್ಕರಣೆ ಆಗುವ ಮುನ್ನ ಸರ್ಕಾರ ಸುಮಾರು ₹18 ಸಾವಿರ ಕೋಟಿ ಸಹಾಯಧನವನ್ನು ನೀಡುತ್ತಿತ್ತು. ಪರಿಷ್ಕರಣೆ ನಂತರ ಇದು ಸುಮಾರು ₹21 ಸಾವಿರ ಕೋಟಿಗೆ ಹೆಚ್ಚಾಗಿದೆ. ಇಷ್ಟೊಂದು ಹಣವನ್ನು ಸಹಾಯಧನ ರೂಪದಲ್ಲಿ ನೀಡುವುದು ಕಷ್ಟ ಎಂಬ ಕಾರಣಕ್ಕಾಗಿ ಸರ್ಕಾರದ ಸೂಚನೆಯಂತೆ ಎಸ್ಕಾಂಗಳು ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿವೆ ಎಂದು ಮೂಲಗಳು ತಿಳಿಸಿವೆ.

ಪಂಪ್‌ಸೆಟ್‌ಗಳಿಗೆ ಪೂರೈಕೆಯಾಗುವ ವಿದ್ಯುತ್ ದರವನ್ನು ಕಡಿಮೆ ಮಾಡಿ, ಕೈಗಾರಿಕೆ, ವಾಣಿಜ್ಯ ಸಂಸ್ಥೆಗಳು ಇತ್ಯಾದಿಗಳಿಗೆ ಪೂರೈಸುವ ವಿದ್ಯುತ್ ದರವನ್ನು ಹೆಚ್ಚಿಸಬೇಕು ಎಂದು ಕೋರಲಾಗಿದೆ. ಇದನ್ನು ಕೆಇಆರ್‌ಸಿ ಒಪ್ಪಿದರೆ, ಸರ್ಕಾರಕ್ಕೆ ಸಹಾಯಧನ ರೂಪದಲ್ಲಿ ನೀಡುವ ಹಣ ಸ್ವಲ್ಪಮಟ್ಟಿಗೆ ಉಳಿಯಲಿದೆ. ಆದರೆ, ಕೈಗಾರಿಕೆಗಳು, ಕಾರ್ಖಾನೆಗಳಿಗೆ ಹೊರೆಯಾಗಲಿದೆ.

ತ್ವರಿತ ಡೆಲಿವರಿ ಬಗ್ಗೆ ಕ್ವಿಕ್ ಕಾಮರ್ಸ್ ವಲಯದ ಕಂಪನಿಗಳ ವಿವರಣೆ

ನಿಮಿಷಗಳಲ್ಲಿ ಡೆಲಿವರಿಗೆ ತಂತ್ರಜ್ಞಾನ ಕಾರಣ

• ವಿಜಯ್ ಜೋಷಿ

ಬೆಂಗಳೂರು: ಹಣ್ಣು, ತರಕಾರಿ ಹಾಗೂ ವಿವಿಧ ಬಗೆಯ ಗ್ರಾಹಕ ಬಳಕೆ ಉತ್ಪನ್ನಗಳನ್ನು ಮನೆ ಬಾಗಿಲಿಗೆ ಕೆಲವೇ ನಿಮಿಷಗಳಲ್ಲಿ ತಲುಪಿಸುವ ಕ್ವಿಕ್ ಕಾಮರ್ಸ್ ವಲಯದ ಕಂಪನಿಗಳು '10 ನಿಮಿಷಗಳಲ್ಲಿ ಡೆಲಿವರಿ' ಎಂಬ ಘೋಷವಾಕ್ಯವನ್ನು ಹಿಂಪಡೆದಿದ್ದರೂ, ಗ್ರಾಹಕರಿಗೆ ಉತ್ಪನ್ನವನ್ನು ತಲುಪಿಸುವ ವ್ಯವಸ್ಥೆಯಲ್ಲಿ ದೊಡ್ಡ ಬದಲಾವಣೆ ಆಗದು.

ಕ್ವಿಕ್ ಕಾಮರ್ಸ್ ವಲಯದ ಕಂಪನಿಗಳ ಡಾರ್ಕ್ ಸ್ಟೋರ್‌ನಿಂದ ಗ್ರಾಹಕರ ವಿಳಾಸಕ್ಕೆ ಉತ್ಪನ್ನಗಳನ್ನು ತಲುಪಿಸಲು ಮೊದಲಿನ ಷ್ಟು ನಿಮಿಷಗಳು ಬೇಕಾಗುತ್ತವೆ, ಈಗಲೂ ಅಷ್ಟೇ ನಿಮಿಷಗಳು ಸಾಕಾಗುತ್ತವೆ. 'ನಾವು ಉತ್ಪನ್ನಗಳನ್ನು ತ್ವರಿತವಾಗಿ ತಲುಪಿಸುವುದರ ಹಿಂದೆ ನಮ್ಮ ಡೆಲಿವರಿ ಕಾರ್ಮಿಕರಿಗೆ ಮೊದಲೂ ಒತ್ತಡ ಹೇರುತ್ತಿರಲಿಲ್ಲ, ಈಗಲೂ ಒತ್ತಡ ಹೇರುತ್ತಿಲ್ಲ. ಮುಂದೆಯೂ ಒತ್ತಡ ಹೇರುವುದಿಲ್ಲ' ಎಂದು ಕಂಪನಿಯೊಂದರ ಪ್ರತಿನಿಧಿ 'ಪ್ರಜಾವಾಣಿ'ಗೆ ತಿಳಿಸಿದರು.

ಕಂಪನಿಯ ಡಾರ್ಕ್ ಸ್ಟೋರ್ (ಕ್ವಿಕ್ ಕಾಮರ್ಸ್ ಕಂಪನಿಯು ವಿವಿಧ ಉತ್ಪನ್ನಗಳನ್ನು ಇರಿಸಿಕೊಳ್ಳುವ ಸ್ಥಳ) ಗ್ರಾಹಕರೊಬ್ಬರ ಮನೆಗೆ ಹತ್ತಿರದಲ್ಲಿ ಇದೆ ಎಂದಾದರೆ, ಆ ಗ್ರಾಹಕನಿಗೆ ಉತ್ಪನ್ನವು ಬಹಳ ಬೇಗನೆ ಸಿಗುತ್ತದೆ. ಇದಕ್ಕೆ ಕಾರಣ ಡಾರ್ಕ್ ಸ್ಟೋರ್ ಹತ್ತಿರ ಇರುವಿಕೆಯೇ ಹೊರತು, ಡೆಲಿವರಿ ಕಾರ್ಮಿಕರ ಮೇಲೆ ಒತ್ತಡ ತಂದು ಉತ್ಪನ್ನವನ್ನು ಬೇಗನೆ ತಲುಪಿಸುವ ಪದ್ಧತಿ ಇಲ್ಲ ಎಂದು ಅವರು ವಿವರಿಸಿದರು. ಕಂಪನಿಗಳು ಉತ್ಪನ್ನಗಳನ್ನು ತ್ವರಿತವಾಗಿ ತಲುಪಿಸಲು ಕೃತಕ ಬುದ್ಧಿಮತ್ತೆಯ (ಎ.ಐ) ನೆರವನ್ನೂ ಪಡೆಯುತ್ತಿವೆ.

'ಬೆಂಗಳೂರಿನಲ್ಲಿ ಒಂದು ಡಾರ್ಕ್ ಸ್ಟೋರ್ ಸಾಮಾನ್ಯವಾಗಿ 2 ಕಿ.ಮೀ ಅಥವಾ 3 ಕಿ.ಮೀ ವ್ಯಾಪ್ತಿಯಲ್ಲಿನ ಗ್ರಾಹಕರ ಅಗತ್ಯಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತದೆ. ಡಾರ್ಕ್ ಸ್ಟೋರ್ ಆರಂಭಿಸುವ ಸ್ಥಳವನ್ನು ಯೋಜಿತವಾಗಿ ಆಯ್ಕೆ ಮಾಡಲಾಗುತ್ತದೆ. ಡಾರ್ಕ್ ಸ್ಟೋರ್‌ನಲ್ಲಿ ಯಾವ ಉತ್ಪನ್ನವನ್ನು ಎಲ್ಲಿ ಇರಿಸಬೇಕು ಎಂಬುದನ್ನು ತೀರ್ಮಾನಿಸಲು ಎ.ಐ ಬಳಸಿಕೊಳ್ಳಲಾಗುತ್ತದೆ. ಇದಲ್ಲದೆ ನಮ್ಮ ಕಾರ್ಯವಿಧಾನದಲ್ಲಿ ನೆರವಾಗುತ್ತದೆ' ಎಂದು ಅವರು ಹೇಳಿದರು.

'ಗ್ರಾಹಕರು ಮತ್ತೆ ಮತ್ತೆ ಖರೀದಿ ಮಾಡುವ ಉತ್ಪನ್ನಗಳನ್ನು ಡಾರ್ಕ್ ಸ್ಟೋರ್‌ನಲ್ಲಿ ತಕ್ಷಣಕ್ಕೆ ಲಭ್ಯವಾಗುವ ಸ್ಥಳದಲ್ಲಿ ಇರಿಸಲಾಗುತ್ತದೆ. ಹೀಗಾಗಿ, ಆ ಉತ್ಪನ್ನಕ್ಕೆ ಹೊಸ ಬೇಡಿಕೆ ಬಂದಾಗ ಅದಕ್ಕೆ ತಕ್ಷಣ ಸ್ಪಂದಿಸಲು ಸಾಧ್ಯವಾಗುತ್ತದೆ' ಎಂದು 'ಜೆಪ್ಟೊ' ಕಂಪನಿಯ ಪ್ರತಿನಿಧಿಯೊಬ್ಬರು ತಿಳಿಸಿದರು.

ಬೇರೆ ಬೇರೆ ಸಂದರ್ಭಗಳಲ್ಲಿ ಯಾವ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಬರಬಹುದು ಎಂಬುದನ್ನು ಎ.ಐ. ನೆರವಿನಿಂದ ಅಂದಾಜಿಸಿ, ಡಾರ್ಕ್ ಸ್ಟೋರ್‌ಗಳಲ್ಲಿ ಆ ಉತ್ಪನ್ನಗಳನ್ನು ಹೆಚ್ಚಿನ ಪ್ರಮಾಣದಲ್ಲಿ ದಾಸ್ತಾನು ಇರಿಸುವ ಕೆಲಸವನ್ನೂ ಕಂಪನಿಗಳು ಮಾಡುತ್ತಿವೆ. ಇದು ಕೂಡ ಅವುಗಳಿಗೆ ತ್ವರಿತವಾಗಿ ಉತ್ಪನ್ನ ತಲುಪಿಸಲು ನೆರವಾಗುತ್ತಿದೆ.

ಡಾರ್ಕ್ ಸ್ಟೋರ್‌ನಿಂದ ಉತ್ಪನ್ನವನ್ನು ಗ್ರಾಹಕರಿಗೆ ತಲುಪಿಸಲು ಇರುವ ಅತ್ಯಂತ ಸಹಜದ ಮಾರ್ಗ ಯಾವುದು ಎಂಬುದನ್ನು ತಂತ್ರಜ್ಞಾನದ ನೆರವಿನಿಂದ ತೀರ್ಮಾನಿಸಲಾಗುತ್ತದೆ. ಇದು ಉತ್ಪನ್ನಗಳನ್ನು ತ್ವರಿತವಾಗಿ ತಲುಪಿಸುವಲ್ಲಿ ನೆರವಾಗುತ್ತಿದೆ ಎಂದು ಹೇಳಿದರು.

'ದಂಡ ವಿಧಿಸಿದ್ದೂ ಇದೆ'

ಆದರೆ ಕಂಪನಿ ಪ್ರತಿನಿಧಿಗಳ ಹೇಳಿಕೆಗೆ ಭಿನ್ನವಾದ ವಿವರವನ್ನು ಗಿಗ್ ಕಾರ್ಮಿಕರ ಸಂಘಟನೆಗಳ ನಾಯಕರು ನೀಡಿದ್ದಾರೆ. 'ಉತ್ಪನ್ನ ತಲುಪಿಸುವುದು ತಡವಾದರೆ ದಂಡ ವಿಧಿಸಿದ, ತಲುಪಿಸುವುದು ಮತ್ತೆ ತಡವಾದಾಗ ಆ್ಯಪ್‌ನಿಂದ ಆಗುವುದನ್ನು ತಡೆದ (ಅಂದರೆ, ಕಾರ್ಮಿಕನನ್ನು ಅಮಾನತಿನಲ್ಲಿ ಇಡುವುದು) ನಿದರ್ಶನಗಳು ಇವೆ. ಉತ್ಪನ್ನಗಳನ್ನು ಬೇಗನೆ ತಲುಪಿಸಬೇಕು ಎಂಬ ಒತ್ತಡವು ಕಾರ್ಮಿಕರ ಮೇಲೆ ಇರುವುದು ನಿಜ' ಎಂದು ಯುನೈಟೆಡ್ ಫುಡ್ ಡೆಲಿವರಿ ಪಾರ್ಟ್ನರ್ಸ್ ಯೂನಿಯನ್ ಅಧ್ಯಕ್ಷ ವಿನಯ್ ಸಾರಥಿ ಹೇಳಿದರು.

'ಐಡಿಇ ಒತ್ತಡದ ಸಂದರ್ಭಗಳು ಕಾರ್ಮಿಕರಿಗೆ ಎದುರಾಗುತ್ತಲೇ ಇರುತ್ತವೆ. ಅವು ಕಾರ್ಮಿಕರನ್ನು ಅಪಾಯದ ಅಂಚಿಗೆ ನೂಕುತ್ತವೆ. ಐಡಿಇ ಸನ್ನಿವೇಶ ಸೃಷ್ಟಿಸುವ ಯೋಜನೆಗಳಿಗೆ ಸರ್ಕಾರಗಳು ಕಡಿವಾಣ ಹಾಕಬೇಕು. ಒತ್ತಡದ ಕಾರಣದಿಂದಾಗಿಯೇ ಅವರು ಸಂಚಾರ ನಿಯಮಗಳನ್ನು ಉಲ್ಲಂಘಿಸಿದ ಉದಾಹರಣೆಗಳು ಇವೆ' ಎಂದರು.

ಟ್ರಂಪ್ ಪ್ರತಿ ಸುಂಕ: ಶೀಘ್ರ ಮಹತ್ವದ ತೀರ್ಪು


ಟ್ರಂಪ್

ವಾಷಿಂಗ್ಟನ್: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಭಾರತವೂ ಸೇರಿದಂತೆ ವಿವಿಧ ದೇಶಗಳ ಮೇಲೆ ಹೇರಿರುವ ಹೆಚ್ಚುವರಿ ಸುಂಕದ ಕಾನೂನು ಸಿಂಧುತ್ವವನ್ನು ಪ್ರಶ್ನಿಸಿರುವ ಪ್ರಕರಣದ ವಿಚಾರಣೆ ಇನ್ನೂ ಬಾಕಿ ಇರುವಾಗಲೇ, ಅಲ್ಲಿನ ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಲು ಮುಂದಾಗಿದೆ.

ಯಾವ ವಿಷಯಕ್ಕೆ ಸಂಬಂಧಿಸಿದ ತೀರ್ಪು ಪ್ರಕಟಗೊಳ್ಳಲು ಉದ್ದೇಶಿಸಲಾಗಿದೆ ಎನ್ನುವುದನ್ನು ಸುಪ್ರೀಂ ಕೋರ್ಟ್ ಮುಂಚಿತವಾಗಿ ಹೇಳಿಲ್ಲ. ಆದರೆ, 'ಇದು ಹೆಚ್ಚಾಗಿ ಟ್ರಂಪ್ ಸುಂಕಕ್ಕೆ ಸಂಬಂಧಿಸಿದ್ದಾಗಿರಬಹುದು' ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಟ್ರಂಪ್ ವಿರುದ್ಧದ ಸುಂಕ ಪ್ರಕರಣದಲ್ಲಿ, ಅಮೆರಿಕ ಅಧ್ಯಕ್ಷರ ಅಧಿಕಾರ ವ್ಯಾಪ್ತಿಯನ್ನು ಸುಪ್ರೀಂ ಕೋರ್ಟ್ ಪರಿಶೀಲಿಸಿದೆ. ಈಗ ಹಲವೆಡೆಯ ಕೆಳ ನ್ಯಾಯಾಲಯಗಳು ಸುಂಕ ಹೇರಿಕೆ ವಿಚಾರದಲ್ಲಿ ಟ್ರಂಪ್ ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿದ್ದಾರೆ ಎಂದು ತೀರ್ಪು ನೀಡಿವೆ.

2025ರಲ್ಲಿ ಅಧಿಕಾರಕ್ಕೆ ಮರಳಿದ ನಂತರ ಟ್ರಂಪ್, ಹಲವು ಸಂದರ್ಭಗಳಲ್ಲಿ ಅಧ್ಯಕ್ಷೀಯ ಅಧಿಕಾರ ವ್ಯಾಪ್ತಿಯನ್ನು ಉಲ್ಲಂಘಿಸಿದ್ದಾರೆ. ಇದು ಜಾಗತಿಕ ಆರ್ಥಿಕ ವ್ಯವಸ್ಥೆಯ ಮೇಲೂ ನಕಾರಾತ್ಮಕ ಪರಿಣಾಮ ಬೀರಿದೆ ಎಂಬ ಆರೋಪವಿದೆ.

ರಾಷ್ಟ್ರೀಯ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಬಳಸುವ 1977ರ ಆರ್ಥಿಕ ಅಧಿಕಾರ ಕಾಯ್ದೆ ಜಾರಿಗೊಳಿಸುವ ಮೂಲಕ ಟ್ರಂಪ್, ಅಮೆರಿಕದ ಬಹುತೇಕ ವ್ಯಾಪಾರ ಪಾಲುದಾರ ದೇಶಗಳ ಮೇಲೆ, ಪ್ರಮುಖವಾಗಿ ಚೀನಾ, ಕೆನಡಾ, ಮೆಕ್ಸಿಕೊದ ಮೇಲೆ ಪ್ರತಿ ಸುಂಕ ವಿಧಿಸಿದ್ದಾರೆ ಎಂದು ವ್ಯಾಪಾರೋದ್ಯಮಿಗಳು ವಾದಿಸಿದ್ದರು.

ಈ ಪ್ರಕರಣದ ವಿಚಾರಣೆ ನವೆಂಬರ್ 5ರಂದು ನಡೆದಿತ್ತು. ಸಂಪ್ರದಾಯವಾದಿ ಹಾಗೂ ಉದಾರವಾದಿ ನ್ಯಾಯಮೂರ್ತಿಗಳು ಸಂದೇಹ ವ್ಯಕ್ತಪಡಿಸಿದ್ದರು. ಜನವರಿ 9ರಂದು ಇನ್ನೊಂದು ಪ್ರಕರಣದಲ್ಲಿ ಸುಪ್ರೀಂಕೋರ್ಟ್ ತೀರ್ಪು ನೀಡಿತ್ತು. ಆದರೆ, ಅದರಲ್ಲಿ ಸುಂಕ ವಿಷಯ ಪ್ರಸ್ತಾಪ ಆಗಿರಲಿಲ್ಲ.

ಗ್ರೀನ್‌ಲ್ಯಾಂಡ್ ವಶ: ಪುನರುಚ್ಚಾರ

ನುವುಕ್ (ಗ್ರೀನ್‌ಲ್ಯಾಂಡ್) (ಎಪಿ): 'ಗ್ರೀನ್‌ಲ್ಯಾಂಡ್ ವಶಕ್ಕೆ ಪಡೆಯಲು ಅಮೆರಿಕಕ್ಕೆ ನ್ಯಾಟೊ (ಉತ್ತರ ಅಟ್ಲಾಂಟಿಕ್ ಒಪ್ಪಂದ ಸಂಸ್ಥೆ-ಮಿಲಿಟರಿ ಮೈತ್ರಿಕೂಟ) ಸಹಕರಿಸಬೇಕು. ಅಮೆರಿಕದ ನಿಯಂತ್ರಣದಲ್ಲಿ ಯಾವುದೂ ಇಲ್ಲ ಎನ್ನುವುದನ್ನು ಒಪ್ಪಲಾಗದು' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಹೇಳಿದ್ದಾರೆ.

ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರು ಡೆನ್ಮಾರ್ಕ್ ಮತ್ತು ಗ್ರೀನ್‌ಲ್ಯಾಂಡ್ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸುವುದಕ್ಕೂ ಮುನ್ನ ಟ್ರಂಪ್ ಅವರ ಈ ಹೇಳಿಕೆ ಹೊರಬಿದ್ದಿದೆ.

ತಮ್ಮದೇ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, 'ರಾಷ್ಟ್ರೀಯ ಸುರಕ್ಷತೆಯ ಉದ್ದೇಶದಿಂದ ಗ್ರೀನ್‌ಲ್ಯಾಂಡ್ ಅನ್ನು ಬಯಸುತ್ತಿದ್ದೇವೆ. ಅದನ್ನು ಪಡೆಯಲು ನ್ಯಾಟೊ ದಾರಿ ಮಾಡಿಕೊಡದಿದ್ದರೆ ರಷ್ಯಾ ಅಥವಾ ಚೀನಾ ಪಡೆಯುವುದು ನಿಶ್ಚಿತವಾಗಿದೆ. ಅದಕ್ಕೆ ಅವಕಾಶ ನೀಡುವುದಿಲ್ಲ' ಎಂದು ಪುನರುಚ್ಚರಿಸಿದ್ದಾರೆ.

ಬಲಪ್ರಯೋಗದಿಂದ ಆರ್ಕ್‌ಟಿಕ್ ದ್ವೀಪವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವುದನ್ನೂ ಅಮೆರಿಕ ತಳ್ಳಿಹಾಕಿಲ್ಲ.

ಪಿಎಸ್‌ಎಲ್‌ವಿ–ಸಿ62ನಲ್ಲಿದ್ದ ಕಿಡ್‌ನಿಂದ ದತ್ತಾಂಶ ರವಾನೆ–ಸ್ಪೇನ್ ಸಂಸ್ಥೆ

ಚೆನ್ನೈ (ಪಿಟಿಐ): ವಿಫಲಗೊಂಡ ಪಿಎಸ್‌ಎಲ್‌ವಿ–ಸಿ62 ಮಿಷನ್‌ನಲ್ಲಿ ಮಹತ್ವದ ಬೆಳವಣಿಗೆಯೊಂದು ನಡೆದಿದೆ. ಇಸ್ರೊ ರಾಕೆಟ್ ಹೊತ್ತೊಯ್ದಿದ್ದ ಕೆಸ್ಟ್ರೆಲ್ 'ಇನಿಷಿಯಲ್ ಟೆಕ್ನಾಲಜಿ ಡೆಮಾನ್‌ಸ್ಟ್ರೇಟರ್ (ಕಿಡ್– ಮರು ಪ್ರವೇಶ ಕ್ಯಾಪ್ಸೂಲ್)' 'ನಾಶವಾಗದೆ ಉಳಿದಿದೆ ಮತ್ತು ದತ್ತಾಂಶವನ್ನು ರವಾನೆ ಮಾಡಿದೆ' ಎಂದು ಸ್ಪೇನ್‌ನ ಏರೋಸ್ಪೇಸ್ ಸ್ಟಾರ್ಟ್‌ಅಪ್ 'ಆರ್ಬಿಟಲ್ ಪ್ಯಾರಡೈಮ್' ಹೇಳಿಕೊಂಡಿದೆ.

ಆದರೆ ಇಸ್ರೊ ಜನವರಿ 13ರಂದು 'ಎಕ್ಸ್'ನಲ್ಲಿ ತಾನು ನೀಡಿದ್ದ ಮಾಹಿತಿಯಲ್ಲಿ, ಸ್ಪೇನ್ ಕಂಪನಿಯ ಪ್ರತಿಪಾದನೆ ಬಗ್ಗೆ ಪ್ರತಿಕ್ರಿಯಿಸಿಲ್ಲ ಅಥವಾ ಖಚಿತಪಡಿಸಿಲ್ಲ.

ಪಿಎಸ್‌ಎಲ್‌ವಿ–ಸಿ62 ಹೊತ್ತೊಯ್ದಿದ್ದ 16 ಉಪಗ್ರಹಗಳಲ್ಲಿ 25 ಕೆಜಿ ತೂಕದ ಕಿಡ್ ಕೂಡಾ ಒಂದಾಗಿತ್ತು. ಕಿಡ್ 16ನೇ ಪೇಲೋಡ್ (ಉಪಗ್ರಹವಾಹಕ) ಆಗಿತ್ತು. ಜನವರಿ 12ರಂದು ಉಡ್ಡಯನ ವಿಫಲವಾಗಿತ್ತು.

'ರಾಕೆಟ್‌ನಿಂದ ಬೇರ್ಪಟ್ಟ ಕಿಡ್ ಸ್ವಿಚ್ ಆನ್ ಆಗಿದೆ. ದತ್ತಾಂಶ ರವಾನಿಸಿದೆ. ಅದರ ಪಥವನ್ನು ನಾವು ಪುನರ್‌ರೂಪಿಸುತ್ತಿದ್ದೇವೆ' ಎಂದು ಸ್ಪೇನ್ ಸ್ಟಾರ್ಟ್ ಅಪ್ ಹೇಳಿದೆ.

ಅಮೆರಿಕ: 75 ದೇಶಗಳ ವೀಸಾ ಪ್ರಕ್ರಿಯೆ ಸ್ಥಗಿತ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಆಶ್ರಮ ವಲಸಿಗರ ಮೇಲೆ ಕಠಿಣ ಕ್ರಮ ಕೈಗೊಳ್ಳುವ ಭಾಗವಾಗಿ ಅಮೆರಿಕವು ಸುಮಾರು 75 ದೇಶಗಳ ನಾಗರಿಕರಿಗೆ ವೀಸಾ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿದೆ.

'ಹೊಸ ವಲಸಿಗರು ಅಮೆರಿಕದ ಜನರ ಸಂಪತ್ತು ಕಸಿದುಕೊಳ್ಳುವುದಿಲ್ಲ ಎನ್ನುವುದನ್ನು ಅಮೆರಿಕ ಖಚಿತಪಡಿಸಿಕೊಳ್ಳುವವರೆಗೆ ಈ ನಿರ್ಬಂಧವು ಮುಂದುವರಿಯಲಿದೆ' ಎಂದು ಅಲ್ಲಿನ ವಿದೇಶಾಂಗ ಇಲಾಖೆ 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದೆ.

ಸೊಮಾಲಿಯಾ, ಹೈಟಿ, ಇರಾನ್, ಎರಿಟ್ರಿಯಾ ಸೇರಿದಂತೆ ಹಲವು ದೇಶಗಳ ನಾಗರಿಕರ ವೀಸಾ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ.

'ವಲಸಿಗರು ಅಮೆರಿಕದ ಜನರ ಔದಾರ್ಯವನ್ನು ದುರುಪಯೋಗಪಡಿಸಿಕೊಳ್ಳದಂತೆ ನಾವು ಕೆಲಸ ಮಾಡುತ್ತಿದ್ದೇವೆ. ಅಮೆರಿಕವೇ ಮೊದಲು ಎನ್ನುವುದು ಟ್ರಂಪ್ ಆಡಳಿತದ ಧ್ಯೇಯ' ಎಂದಿದೆ.

ಗಾಯಕ ಜುಬಿನ್ ಮದ್ಯ ಕುಡಿದಿದ್ದರು: ತನಿಖಾ ತಂಡ

ಸಿಂಗಪುರ (ಪಿಟಿಐ): ಗಾಯಕ ಜುಬಿನ್ ಗರ್ಗ್ ಅವರು ಸ್ಕೂಬಾ ಡೈವಿಂಗ್ ಮಾಡುತ್ತಿದ್ದ ವೇಳೆ ಹೆಚ್ಚು ಮದ್ಯ ಕುಡಿದಿದ್ದರು ಹಾಗೂ ಲೈಫ್ ಜಾಕೆಟ್ ಧರಿಸಲು ನಿರಾಕರಿಸಿದ್ದರು ಎಂದು ತನಿಖಾ ತಂಡವು ಸಿಂಗಪುರದ ನ್ಯಾಯಾಲಯಕ್ಕೆ ಬುಧವಾರ ತಿಳಿಸಿತು.

ಮೂರು ದಿನಗಳ 'ನಾರ್ತ್ ಈಸ್ಟ್ ಫೆಸ್ಟಿವಲ್' ಕಾರ್ಯಕ್ರಮದ ನಾಲ್ಕನೇ ಆವೃತ್ತಿಯಲ್ಲಿ ಭಾಗವಹಿಸಲು ಜುಬಿನ್ ಸಿಂಗಪುರಕ್ಕೆ ತೆರಳಿದ್ದರು. ಅದರ ಹಿಂದಿನ ದಿನ ಲಾಜರಸ್ ದ್ವೀಪದ ಸಮುದ್ರದಲ್ಲಿ ಸ್ಕೂಬಾ ಡೈವಿಂಗ್ ಮಾಡುತ್ತಿದ್ದ ವೇಳೆ ಸಾವಿಗೀಡಾಗಿದ್ದರು.

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1400-1700
ಮಧ್ಯಮ	₹800-1400
ಸಣ್ಣ	₹400-800

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹27815-27815
ದಾವಣಗೆರೆ	₹11350-11450
ತುಮಕೂರು	₹6000-22500

ತ್ವರಿತ ವಿಚಾರಣೆ, ಗಲ್ಲು ಶಿಕ್ಷೆಗೆ ಇರಾನ್ ಉತ್ಸುಕತೆ

ದುಬೈ (ಎಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಎಚ್ಚರಿಕೆ ನಡುವೆಯೂ, ಬಂಧಿತ ಪ್ರತಿಭಟನಕಾರರ ವಿರುದ್ಧ ತ್ವರಿತವಾಗಿ ವಿಚಾರಣೆ ನಡೆಸಿ, ಮರಣ ದಂಡನೆ ವಿಧಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಇರಾನ್‌ನ ನ್ಯಾಯಾಂಗ ಮುಖ್ಯಸ್ಥ ಘೋಲಮ್ ಹುಸೇನ್ ಮೊಹ್ಸೆನಿ-ಎಜೆಯಿ ಬುಧವಾರ ಸುಳಿವು ನೀಡಿದ್ದಾರೆ.

'ಇರಾನ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ 2,572 ಮಂದಿ ಪ್ರತಿಭಟನಕಾರರು ಮೃತಪಟ್ಟಿದ್ದಾರೆ. ಅಲ್ಲದೆ 10,000ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ' ಎಂದು ಮಾಹಿತಿಯಿದೆ.

'ಪ್ರತಿಭಟನಕಾರರ ವಿರುದ್ಧ ಮರಣದಂಡನೆಯಂತಹ ಕ್ರಮಗಳನ್ನು ತೆಗೆದುಕೊಂಡರೆ, ಅಮೆರಿಕ ಬಲವಾದ ಕ್ರಮಗಳನ್ನು ತೆಗೆದುಕೊಳ್ಳುತ್ತದೆ' ಎಂದು ಟ್ರಂಪ್ ನೀಡಿದ ಎಚ್ಚರಿಕೆ ಬೆನ್ನಲ್ಲೇ ಘೋಲಮ್ ಅವರು ಈ ಸುಳಿವು ನೀಡಿದ್ದಾರೆ.

'ನಾವು ಏನನ್ನಾದರೂ ಮಾಡಬಯಸಿದ್ದರೆ, ಈಗಲೇ ಮಾಡಬೇಕು. ಅದಕ್ಕಾಗಿ ಎರಡು, ಮೂರು ತಿಂಗಳು ಕಾದರೆ, ಅದರ ಪರಿಣಾಮಗಳು ಬೇರೆಯೇ ಆಗಬಹುದು. ಅದಕ್ಕೆ ಅವಕಾಶ ನೀಡದೆ, ತ್ವರಿತವಾಗಿ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ಘೋಲಮ್ ಹೇಳಿದ್ದಾರೆ.

ಗುಡುಗಿದ ಟ್ರಂಪ್: ಜನರ ಪ್ರತಿಭಟನೆ ಹತ್ತಿಕ್ಕುತ್ತಿರುವ ಇರಾನ್ ಆಡಳಿತದ ವಿರುದ್ಧ ಟ್ರಂಪ್ ಕಟುವಾಗಿ ಮಾತನಾಡಿದ್ದಾರೆ. ಪ್ರತಿಭಟನಕಾರರ ಸಾವಿನ ಸಂಖ್ಯೆ ಕುರಿತು ಮಾಹಿತಿ ತಿಳಿದ ಕೂಡಲೇ, ಅವರು ಇರಾನ್ ಜತೆಗಿನ ಎಲ್ಲ ಮಾತುಕತೆ ರದ್ದುಪಡಿಸಿದ್ದಾರೆ. ಜತೆಗೆ ಪ್ರತಿಭಟನಕಾರರಿಗೆ ಮರಣದಂಡನೆ ವಿಧಿಸಿದರೆ, ಅದಕ್ಕೆ ಅನುಗುಣವಾದ ತಾನೂ ಕಾರ್ಯ ನಿರ್ವಹಿಸಬೇಕಾಗುತ್ತದೆ ಎಂದಿದ್ದಾರೆ.

ಇರಾನ್ ತ್ಯಜಿಸುತ್ತಿರುವ ವಿದೇಶಿ ವಿದ್ಯಾರ್ಥಿಗಳು: ಅಂತರರಾಷ್ಟ್ರೀಯ ವಿದ್ಯಾರ್ಥಿಗಳಿಗೆ ದೇಶ ತೊರೆಯಲು ಇರಾನ್‌ನ ವಿಶ್ವವಿದ್ಯಾಲಯಗಳು ಅನುಮತಿ ನೀಡಿವೆ ಎಂದು ಇರಾನ್‌ನ ಪಾಕಿಸ್ತಾನದ ರಾಯಭಾರಿ ಮುದಾಸಿರ್ ಟಿಪ್ಪು ತಿಳಿಸಿದ್ದಾರೆ.

ಉಚಿತ ಇಂಟರ್‌ನೆಟ್ ಸೇವೆ ಆರಂಭ: ಉಪಗ್ರಹದ ಮೂಲಕ ಇಂಟರ್‌ನೆಟ್ ಪೂರೈಸುವ ಸ್ಟಾರ್‌ಲಿಂಕ್, ತನ್ನ ಕಂಪನಿಯ ರಿಸೀವರ್‌ಗಳನ್ನು ಹೊಂದಿರುವ ಇರಾನ್ ಜನರಿಗೆ ಉಚಿತ ಇಂಟರ್‌ನೆಟ್ ಸೇವೆ ಆರಂಭಿಸಿದೆ.

ಜನವರಿ 8ರಿಂದ ದೇಶದಲ್ಲಿ ಇರಾನ್ ಸರ್ಕಾರ ದೇಶದಲ್ಲಿ ಇಂಟರ್‌ನೆಟ್ ಸ್ಥಗಿತಗೊಳಿಸಿದೆ. ಇದೀಗ ಸ್ಟಾರ್‌ಲಿಂಕ್ ಮೂಲಕ ಇಂಟರ್‌ನೆಟ್ ಸಂಪರ್ಕ ಸಾಧ್ಯವಾಗಿದೆ ಎಂದು ಮೂಲಗಳು ತಿಳಿಸಿವೆ.

'ಮಾನವೀಯತೆ ಪ್ರದರ್ಶಿಸಿ'

ವಾಷಿಂಗ್ಟನ್ (ಪಿಟಿಐ): 'ಇರಾನ್ ಸರ್ಕಾರದಲ್ಲಿ ಮೃದುತ್ವ ಮತ್ತು ಬಂಧನಕ್ಕೊಳಗಾದ ನಾಗರಿಕರ ಕುರಿತು ಕಾಳಜಿ ಪಡೆಯಲು ಹಾಗೂ ಇರಾನ್‌ನೊಂದಿಗೆ ಮುಂದಿನ ಕ್ರಮಗಳ ಕುರಿತು ಚರ್ಚಿಸಲು ಟ್ರಂಪ್ ಅವರು ತಮ್ಮ ರಾಷ್ಟ್ರೀಯ ಭದ್ರತಾ ತಂಡದೊಂದಿಗೆ ಮಂಗಳವಾರ ಮಾತುಕತೆ ನಡೆಸಿದರು.

'ಇರಾನ್ ಸರ್ಕಾರವು ಕೆಟ್ಟದಾಗಿ ವರ್ತಿಸುತ್ತಿದೆ. ಅದಕ್ಕೆ ತಕ್ಕಂತೆ ತನ್ನ ಆಡಳಿತವು ಕ್ರಮ ಕೈಗೊಳ್ಳಲಿದೆ' ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಸಂಕ್ರಾಂತಿ: ಕಾಂತಿ ಶಾಂತಿಗಳ ಹಬ್ಬ


• ಎಸ್. ಸೂರ್ಯಪ್ರಕಾಶ ಪಂಡಿತ್

ನಮ್ಮ ಹಬ್ಬಗಳಿಗೆ ಮೂಲ ಎಂದರೆ ನಮ್ಮ ಪ್ರಕೃತಿಯೇ. ಈ ಪ್ರಕೃತಿಗೂ ಎರಡು ಆಯಾಮಗಳು: ಒಂದು: ಒಳಗಿನ ಪ್ರಕೃತಿ; ಇನ್ನೊಂದು: ಹೊರಗಿನ ಪ್ರಕೃತಿ.

ಒಳಗಿನ ಪ್ರಕೃತಿ ಎಂದರೆ ನಮ್ಮ ಸ್ವಭಾವ; ನಡೆ-ನುಡಿ, ಆಚಾರ-ವಿಚಾರಗಳು. ಹೊರಗಿನ ಪ್ರಕೃತಿ ಎಂದರೆ ಋತುಗಳು, ಗ್ರಹಸಂಚಾರ, ಗಿಡ-ಮರಗಳು, ನದಿ-ಗಿರಿಗಳು, ಮುಂತಾದವು. ನಮ್ಮೊಳಗಿನ ಪ್ರಕೃತಿಗೂ ಒಳಗಿನ ಪ್ರಕೃತಿಗೂ ನೇರ ನಂಟಿರುವುದೂ ಸ್ಪಷ್ಟ. ಇದುವರೆಗಿಂದಲೇ ಈ ಎರಡು ಪ್ರಕೃತಿಗಳ ನಡುವೆ ಸಾಮರಸ್ಯವೂ ಏರ್ಪಡಬೇಕು.

ಆಗಲೇ ನಮ್ಮ ಜೀವನವು ಸುಂದರವೂ ಸುಖಮಯವೂ ಆಗುತ್ತದೆ. ಇಂಥ ವಿವೇಕವೇ ನಮ್ಮ ಸಂಸ್ಕೃತಿ ಕಾಣಿಸಿರುವ ಹಬ್ಬ-ಹರಿದಿನಗಳ ಕೇಂದ್ರದಲ್ಲಿರುವುದು. ಸುಗ್ಗಿಯ ಹಬ್ಬವಾಗಿ ನಾವು ಆಚರಿಸುವ ಸಂಕ್ರಾಂತಿಯಲ್ಲಿ ಈ ಎರಡೂ ಪ್ರಕೃತಿಗಳ ಸಾಮರಸ್ಯವನ್ನು ಕಾಣಬಹುದು.

ಸೂರ್ಯನ ಸಂಚಾರವೇ ಸಂಕ್ರಾಂತಿ ಹಬ್ಬದ ಆಚರಣೆಯನ್ನು ನಿರ್ಧರಿಸುವುದುಂಟು. ಸೂರ್ಯ ಒಂದು ರಾಶಿಯಿಂದ ಇನ್ನೊಂದು ರಾಶಿಗೆ 'ಪ್ರವೇಶಿಸುವುದೇ ಸಂಕ್ರಮಣ'; ಇದನ್ನೇ 'ಸಂಕ್ರಾಂತಿ' ಎನ್ನುವುದು. ಹೀಗೆ ಅವನು ಮಕರರಾಶಿಯನ್ನು ಪ್ರವೇಶಿಸುವ ಸಮಯವನ್ನೇ 'ಮಕರಸಂಕ್ರಾಂತಿ' ಎಂದು ಕರೆಯುವುದು. ಈ ಮಕರಸಂಕ್ರಾಂತಿಗೇ ವಿಶೇಷ ಪ್ರಾಶಸ್ತ್ಯ. ಈ ಸಂಕ್ರಾಂತಿಯಿಂದ ನಡೆಯುವ ಸೂರ್ಯನ ಸಂಚಾರದಲ್ಲಿ ವಿಶೇಷವುಂಟು. ಸೂರ್ಯ ತನ್ನ ಸಂಚಾರದ ಪಥವನ್ನು ದಕ್ಷಿಣದಿಂದ ಉತ್ತರಕ್ಕೆ ಬದಲಾಯಿಸುತ್ತಾನೆ. ಹೀಗಾಗಿ ಇದೊಂದು ಪರ್ವಕಾಲ ಎಂಬುದು ನಮ್ಮ ಪೂರ್ವಜರ ಎಣಿಕೆ; ವಿಜ್ಞಾನವೊಂದಿಂದ ದೇವಯಾನದ ಕಡೆಗೆ ನಡಿಗೆ ಎಂಬುದು ಇಲ್ಲಿರುವ ಸಂದೇಶ. ವಿಜ್ಞಾನ ಎಂದರೆ ಬದುಕು–ಸಾಮಾನ್ಯ ಚಕ್ರ; ದೇವಯಾನ ಎಂದರೆ ಅಧ್ಯಾತ್ಮದ ಸಾಧನೆ.



ಸಂಕ್ರಾಂತಿ ಹಬ್ಬದ ಆಚರಣೆಗಳನ್ನು ಜನಸಾಮಾನ್ಯರು ಆಚರಿಸುವ ಕ್ರಮದಲ್ಲಿ ಹೆಚ್ಚಿನ ಕಾಲದಲ್ಲಿಯೂ ನಿಲುಗಡೆ. ಹೀಗಾಗಿಯೇ ಭೀಷ್ಮರು ಶರೀರವನ್ನು ಬಿಡಲು ಈ ಕಾಲವನ್ನೇ ಕಾದದ್ದು. ಇದು ಪುಣ್ಯಕಾಲ; ಎಂದರೆ ಮಕರಸಂಕ್ರಾಂತಿ; ಮುಕ್ತಿಗಾಗಿ ಅರಿಕೆಗೊಂಡ ಕಾಲವಾಗಿದೆ.

ಎಲ್ಲೋ ದೂರದ 'ಪ್ರಕೃತಿ'ಯಲ್ಲಿ ನಡೆಯುವ ವಿದ್ಯಮಾನಗಳಿಗೂ ನಮ್ಮ ಹಬ್ಬಕ್ಕೂ ಇರುವ ಸಂಬಂಧದ ಕೆಲವು ವಿವರಗಳು ಇವು. ಆದರೆ ನಮ್ಮ ಹತ್ತಿರಕ್ಕೆ ಗೋಚರವಾಗುವ ಪ್ರಕೃತಿಯ ಹಲವು ವಿವರಗಳನ್ನೂ ಸಂಕ್ರಾಂತಿಯ ಹಬ್ಬದಲ್ಲಿ ಕಾಣಬಹುದು. ಹೊಲ-ಗದ್ದೆಗಳಲ್ಲಿ ಬೆಳೆದು ನಿಂತಿರುವ ಪೈರು–ತೆನೆಗಳನ್ನು ಕಂಡು ಸಂತೋಷಿಸುವುದು; ಅವುಗಳಿಗೆ ಪೂಜಿಸುವುದು. ದವಸ-ಧಾನ್ಯ-ಕಾಳುಗಳನ್ನು ವಿವಿಧ ಬಗೆಯ ಖಾದ್ಯಗಳನ್ನಾಗಿ ಮಾಡಿಕೊಂಡು ಸವಿಯುವುದು; ಆತ್ಮೀಯರಿಗೆ ಅವನ್ನು ಹಂಚುವುದು; ಕೃಷಿಗೆ ಪೂರಕವಾಗಿರುವ ದನ–ಕರುಗಳನ್ನು ಸಿಂಗರಿಸಿ, ಪೂಜಿಸುವುದು. ಪ್ರಕೃತಿಗೂ ನಮಗೂ ಇರುವ ಸಾಮರಸ್ಯ ಸಂಬಂಧದ ಬಲವನ್ನು ತಿಳಿಸುವ ಸಾಂಕೇತಿಕತೆಯನ್ನು ಸಂಕ್ರಾಂತಿಯ ಆಚರಣೆಯ ಉದ್ದಕ್ಕೂ ಕಾಣಬಹುದು.

ಮನೆಯಲ್ಲಿರುವ ಪುಟ್ಟ ಮಕ್ಕಳಿಗೆ ಆರತಿಯನ್ನು ಬೆಳಗಿ, ಸಂಭ್ರಮಿಸುವುದೂ ಉಂಟು. ಇಂದು ನಮ್ಮ ಸಮಾಜದ ಪ್ರತಿರೂಪ, ನಮ್ಮತನದ ಮುಂದುವರಿಕೆಯ ಚಕ್ರರೂಪ. ಮಾತ್ರವಲ್ಲ, ಮಕ್ಕಳು ಸೃಷ್ಟಿಯ ಬೆರಗು; ಆ ಬೆರಗನ್ನು ಉತ್ಸಾಹ–ಕುತೂಹಲಗಳಿಂದ ಕಾಣಬೇಕೆಂಬ ತಾಯಿ ತಂದೆಯರ ಅಭಿಲಾಷೆಯನ್ನು ಈ ಹಬ್ಬದಲ್ಲಿ ಕಾಣಬಹುದು. ಸೂರ್ಯೋಪಾಸನೆಯೇ ಸಂಕ್ರಾಂತಿಯ ಪ್ರಧಾನತತ್ತ್ವ. ಸೂರ್ಯನನ್ನು ನಮ್ಮ ಸಂಸ್ಕೃತಿಯಲ್ಲಿ ದೊಡ್ಡ ಸಂಕೇತ. ಅವನು ಆರೋಗ್ಯದ ಮೂರ್ತಿ: ನಮ್ಮ ಹೊರಗಿನ ಆರೋಗ್ಯಕ್ಕೂ, ಒಳಗಿನ ಆರೋಗ್ಯಕ್ಕೂ ಕಾರಣನಾದ ದೇವತೆ. ಈ ಹಬ್ಬದಲ್ಲಿ ಸೂರ್ಯನ ಆರಾಧನೆ ನಡೆಯುವುದರ ತಾತ್ಪರ್ಯ ಇದೇ.

'ಎಳ್ಳು-ಬೆಲ್ಲ ತಿಂದು ಒಳ್ಳೇ ಮಾತಾಡು' ಎಂಬುದು ಸಂಕ್ರಾಂತಿಯ ಘೋಷವಾಕ್ಯ. ಒಳ್ಳೆಯ ಮಾತು-ಒಳ್ಳೆಯ ಕೆಲಸಗಳು ಸಮಾಜದ ಸಾಮರಸ್ಯಕ್ಕೆ ಒಳಗಿನ ಪ್ರಕೃತಿಯ ಪ್ರತೀಕ. ಅಂಥ ಮಾತುಗಳನ್ನು ಆಡಬೇಕು; ಕೆಟ್ಟದಾದ ಮಾತಾದರೂ ಸಮಾಜದಲ್ಲಿ ನೆಲೆಗೊಳ್ಳಬಾರದು ಎಂಬ ಆಶಯವೇ ಸಂಕ್ರಾಂತಿಯ ಸಂದೇಶ. ಶಾಂತಿಯ ಸಂಕೇತ ಕಾಂತಿಯ ಹಬ್ಬ. ಅಂದರೆ ಕಾಂತಿ ಮತ್ತು ಶಾಂತಿ.

‘ವಿಲನ್ ಪಾತ್ರಕ್ಕೆ ಕರೆಗಳು ಹೆಚ್ಚಾಗಿವೆ’

• ಅಭಿಲಾಷ್ ಪಿ.ಎಸ್.

‘ಜೋಶ್’ ಸಿನಿಮಾ ಮೂಲಕ ನಟನಾಗಿ ಚಿತ್ರರಂಗ ಪ್ರವೇಶಿಸಿದ ರಾಕೇಶ್ ಅಡಿಗ ನಿರ್ದೇಶಕರಾಗಿಯೂ ಗುರುತಿಸಿಕೊಂಡವರು. ‘ಮರ್ಯಾದೆ ಪ್ರಶ್ನೆ’, ‘ನಾನು ಮತ್ತು ಗುಂಡ-2’ ಸಿನಿಮಾ ಮೂಲಕ ಪ್ರೇಕ್ಷಕರಿಗೆ ಮತ್ತಷ್ಟು ಹತ್ತಿರವಾಗಿದ್ದರು ರಾಕೇಶ್. ಇದೀಗ ದುನಿಯಾ ವಿಜಯ್ ನಟನೆಯ ‘ಲ್ಯಾಂಡ್‌ಲಾರ್ಡ್’ನಲ್ಲಿ ವಿಲನ್ ಆಗಿ ತೆರೆ ಮೇಲೆ ಬರಲಿದ್ದಾರೆ. ಸಿನಿಮಾ ಜ.23ಕ್ಕೆ ರಿಲೀಸ್ ಆಗುತ್ತಿದ್ದು ಈ ಹೊಸ್ತಿಲಲ್ಲಿ ಅವರು ಮಾತಿಗೆ ಸಿಕ್ಕಾಗ...

‘ನಾನು ಸಿನಿಮಾದಲ್ಲಿ ರಾಜ್ ಬಿ.ಶೆಟ್ಟಿ ಅವರ ತಮ್ಮನ ಪಾತ್ರದಲ್ಲಿ ಅಭಿನಯಿಸಿದ್ದೇನೆ. ಒಂದು ಆಳುವ ಮನಃಸ್ಥಿತಿಯ, ಜಮೀನ್ದಾರಿ ಕುಟುಂಬದ ಹುಡುಗ ಈತ. ಆಗಿನ ಕಾಲದಲ್ಲಿ ಹೇಗಿತ್ತೋ ಹಾಗೆಯೇ ಸಿಕ್ಕಾಪಟ್ಟೆ ದಬ್ಬಾಳಿಕೆ ಮಾಡುವಾತ. ಕಿರುಚಾಟ, ಅರ್ಭಟ, ದುಷ್ಟತನ ಹೆಚ್ಚಿರುವ ಪಾತ್ರವಿದು. ಈ ಹಿಂದೆ ‘ಅಲೆಮಾರಿ’ ಸಿನಿಮಾದಲ್ಲಿ ಓರ್ವ ಪುಡಿ ರೌಡಿ ಪಾತ್ರ ಮಾಡಿದ್ದೆ. ಆದರೆ ಇದರಲ್ಲಿ ಪಕ್ಕಾ ರೌಡಿಯೇ’ ಎನ್ನುತ್ತಾ ಮಾತು ಆರಂಭಿಸಿದರು ರಾಕೇಶ್.

‘80–90ರ ದಶಕದ ಕೋಲಾರ ಸೊಗಡಿನಲ್ಲಿ ಈ ಸಿನಿಮಾವಿದೆ. ನನ್ನ ಹಿಂದಿನ ಸಿನಿಮಾಗಳಲ್ಲಿದ್ದ ಪಾತ್ರಗಳು ಮುಗ್ಧವಾಗಿದ್ದವು. ‘ಮರ್ಯಾದೆ ಪ್ರಶ್ನೆ’ಯಲ್ಲಿ ಮಧ್ಯಮ ವರ್ಗದ ಹುಡುಗರಿಗೆ ಬಹಳ ಕನೆಕ್ಟ್ ಆಗುವ ಪಾತ್ರವಿತ್ತು. ಈ ಪಾತ್ರಕ್ಕೆ ಆಕ್ರಮಣಕಾರಿ ಸ್ವಭಾವವೂ ಜೊತೆಗೆ ಮುಗ್ಧತೆಯೂ ಇತ್ತು. ಆದರೆ ‘ಲ್ಯಾಂಡ್‌ಲಾರ್ಡ್’ನಲ್ಲಿ ಪೂರ್ಣ ಕ್ರೂರಿಯಾಗಿದ್ದೇನೆ. ಜನರಿಗೆ ಈ ಪಾತ್ರ ನೋಡಿ ಖಂಡಿತವಾಗಿಯೂ ಸಿಟ್ಟು ಬರಲಿದೆ. ಅವರು ಈ ಪಾತ್ರವನ್ನು ದ್ವೇಷಿಸಲಿದ್ದಾರೆ. ಈ ಪಾತ್ರದಿಂದಾಗಿ ಈಗಾಗಲೇ ವಿಲನ್



ರಾಕೇಶ್ ಅಡಿಗ

ಪಾತ್ರಕ್ಕೆ ಕರೆಗಳು ಬರಲಾರಂಭಿಸಿವೆ. ಆದರೆ ನಾನು ಒಪ್ಪಿಕೊಳ್ಳುತ್ತಿಲ್ಲ. ನಟನಾಗಿ ಹಲವು ಬಗೆಯ ಪಾತ್ರಗಳನ್ನು ಅನ್ವೇಷಿಸಿಯಾಗಿದೆ. ಮುಂದೆ ಒಂದಿಷ್ಟು ಹಾಸ್ಯ ಪಾತ್ರಗಳನ್ನು ಅನ್ವೇಷಿಸುವ ಆಸಕ್ತಿಯಿದೆ. ಇಂತಹ ಪಾತ್ರಕ್ಕೆ ಹಲವು ಆಫರ್‌ಗಳೂ ಬಂದಿವೆ. ‘ಲ್ಯಾಂಡ್‌ಲಾರ್ಡ್’ ಪಾತ್ರವು ದೊಡ್ಡ ಮಟ್ಟದ ಪರಿಣಾಮ ಬೀರಿ ವಿಲನ್ ಪಾತ್ರಕ್ಕೇ ಹೆಚ್ಚಿನ ಆಫರ್‌ಗಳು ಬಂದರೆ ಅಂತಹ ಪಾತ್ರದ ಗ್ರಾಫ್ ನೋಡುತ್ತೇನೆ. ವಿಲನ್ ಪಾತ್ರ ಭಯಾನಕವಾಗಿರುವುದರ ಜೊತೆಗೆ ಅದಕ್ಕೊಂದು ಆಳವಾದ ಕಥೆಯೂ ಮುಖ್ಯ ಎನ್ನುವುದು ನನ್ನ ಅಭಿಮತ’ ಎನ್ನುತ್ತಾರೆ ರಾಕೇಶ್.

ಮದ್ವೆ ಮನೆ ಕಥೆ

‘ನಮ್ಮದೇ ತಂಡದಿಂದ ಒಂದು ಹೊಸ ಸಿನಿಮಾ ಕೈಗೆತ್ತಿಕೊಂಡಿದ್ದೇನೆ. ಇದರಲ್ಲಿ ನಟಿಸಿ, ಕ್ರಿಯೇಟಿವ್ ಹೆಡ್ ಆಗಿ ಕಾರ್ಯನಿರ್ವಹಿಸಿದ್ದೇನೆ. ಕಥೆಯ ಬರವಣಿಗೆಯಲ್ಲೂ ಭಾಗಿಯಾಗಿದ್ದೇನೆ. ಶಮಂತ್ ಇದನ್ನು ನಿರ್ದೇಶಿಸುತ್ತಿದ್ದು, ಒಂದು ಒಳ್ಳೆಯ ತಂಡ ರೂಪಿಸುವ ದೃಷ್ಟಿಯಿಂದ ಈ ಹೆಜ್ಜೆ ಇಟ್ಟಿದ್ದೇನೆ. ಇದು ಪೂರ್ಣ ಪ್ರಮಾಣದ ಹಾಸ್ಯ ಪ್ರಧಾನ ಚಿತ್ರ. ಇಡೀ ಸಿನಿಮಾ ಮದುವೆ ಮನೆಯಲ್ಲಿ ನಡೆಯುವ ಗೊಂದಲದ ಸುತ್ತವಿದೆ. ಮೂರು ಮುಖ್ಯ ಪಾತ್ರಗಳು ಇದರಲ್ಲಿದ್ದು ಅದರಲ್ಲಿ ನಾನೂ ಒಂದು ಪಾತ್ರ ನಿಭಾಯಿಸಿದ್ದೇನೆ. ಒಬ್ಬರು ನಾಯಕಿ ಇರಲಿದ್ದಾರೆ’ ಎಂದು ತಮ್ಮ ನಿರ್ದೇಶನದ ಮತ್ತೊಂದು ಸಿನಿಮಾದತ್ತ ಮಾತು ಹೊರಳಿಸಿದರು.

‘ಸೆಪ್ಟೆಂಬರ್‌ನಲ್ಲಿ ನನ್ನ ನಿರ್ದೇಶನದ ಸಿನಿಮಾ ಕೈಗೆತ್ತಿಕೊಳ್ಳಲಿದ್ದಾನೆ. ಜನ ಸಿನಿಮಾ ನೋಡಿದ ಬಳಿಕ ಯಾವುದಾದರೂ ಒಂದು ಸಂದೇಶ ತೆಗೆದುಕೊಂಡು ಹೋಗಬೇಕು. ಇದುವೇ ನನ್ನ ಹೊಸ ಪ್ರಯತ್ನ. ನಗರ ಜೀವನದಲ್ಲಿ ಕೌಟುಂಬಿಕ ಸಮಸ್ಯೆ, ಖಿನ್ನತೆ, ಸಾಮಾಜಿಕ ಒತ್ತಡ ಹೆಚ್ಚಾಗುತ್ತಿದೆ. ಇವುಗಳಿಗೆಲ್ಲ ಒಂದು ಕನ್ನಡಿ ಹಿಡಿದಂತೆ ಒಂದು ಪ್ರಯತ್ನವಿದು’ ಎಂದರು ರಾಕೇಶ್.


ಸಂಚಿತ್ ಸಂಜೀವ್

‘ಅರಗಿಣಿ’ಗೆ ಸಾನ್ವಿ ಸುದೀಪ್ ಧ್ವನಿ

ಸುದೀಪ್ ಅಳಿಯ ಸಂಚಿತ್ ಸಂಜೀವ್ ನಾಯಕನಾಗಿ ನಟಿಸಿರುವ ‘ಮ್ಯಾಂಗೋ ಪಚ್ಚ’ ಚಿತ್ರದ ‘ಅರಗಿಣಿಯೇ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕ್ರೈಂ ಥ್ರಿಲ್ಲರ್ ಜಾನರ್‌ನಲ್ಲಿ ಸಿನಿಮಾವಿದ್ದು, ವಿವೇಕ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಈ ಹಾಡಿಗೆ ಚರಣ್ ರಾಜ್ ಸಂಗೀತ ಸಂಯೋಜನೆ ಮಾಡಿದ್ದು, ಸಾನ್ವಿ ಸುದೀಪ್ ಮತ್ತು ಕಪಿಲ್ ಕಪಿಲನ್ ಧ್ವನಿಯಾಗಿದ್ದಾರೆ. ಧನಂಜಯ ರಂಜನ್ ಸಾಹಿತ್ಯವಿದೆ.

ಚಿತ್ರವನ್ನು ಕೆಆರ್‌ಜಿ ಮತ್ತು ಸುದೀಪ್ ಅವರ ಸುಪ್ರಿಯಾನ್ವಿ ಪ್ರೊಡಕ್ಷನ್ಸ್ ಜಂಟಿಯಾಗಿ ನಿರ್ಮಾಣ ಮಾಡಿದೆ. ಮೈಸೂರು ಭಾಗದ ಕಥೆಯಾಗಿದ್ದು, ಸಂಚಿತ್ ರೆಟ್ರೋ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಕಾಜಲ್ ಕುಂದರ್, ಮಯೂರ್ ಪಟೇಲ್, ಮಾಲಾಶ್ರೀ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಶೇಖರ್ ಚಂದ್ರ ಛಾಯಾಚಿತ್ರಗ್ರಹಣವಿದೆ.


ವಿರಾಜ್ ಕೊಲಾಟ್ಲು, ಕಾವ್ಯ ಭಗವಂತ್

ಹೊಸಬರ ‘ನೆನಪಾದಳು ಶಾಕುಂತಲೆ’

ಬಹುತೇಕ ಹೊಸಬರಿಂದಲೇ ಕೂಡಿರುವ ‘ನೆನಪಾದಳು ಶಾಕುಂತಲೆ’ ಚಿತ್ರದ ಫಸ್ಟ್‌ಲುಕ್ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಪೌರಾಣಿಕ ಕಾವ್ಯ ಹಾಗೂ ಆಧುನಿಕ ಕಾಲದ ಪ್ರೇಮವನ್ನು ಒಟ್ಟಾಗಿಸುವ ಕಥೆ ಹೊಂದಿರುವ ಚಿತ್ರಕ್ಕೆ ವಿನಯ್ ಚಂದ್ರಹಾಸ ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ಈ ಚಿತ್ರವು ಪಾರ್ಥಸಾರಥಿ ಎಂಬ ಸ್ಟಾರ್ಟ್‌ಅಪ್ ಸಂಸ್ಥಾಪಕನ ಕಥೆಯನ್ನು ಹೊಂದಿದೆ. ತನ್ನ ಮೊದಲ ಪ್ರೀತಿಯ ನೋವಿನಿಂದ ಹೊರಬರಲು ಹಂಬಲಿಸುವ ನಾಯಕ, ಸಾಂತ್ವನ ಹುಡುಕುತ್ತಾ ತನ್ನ ಅಕ್ಕನ ಊರಿಗೆ ಪ್ರಯಾಣಿಸುತ್ತಾನೆ. ಅಲ್ಲಿನ ಒಂದು ಹಳೆಯ ಗ್ರಂಥಾಲಯದಲ್ಲಿ ಆತನಿಗೆ ಓರ್ವ ಯುವತಿಯ ಪರಿಚಯವಾಗುತ್ತದೆ. ಆಕೆಯ ಸಾನ್ನಿಧ್ಯ ಆತನ ಜೀವನದ ದಿಕ್ಕನ್ನೇ ಬದಲಿಸುತ್ತದೆ. ಪ್ರಾಚೀನ ಕಾಲದ ದುಷ್ಯಂತ-ಶಕುಂತಲೆಯರ ಗಾಂಧರ್ವ ವಿವಾಹದ ಸಾದೃಶ್ಯವನ್ನು ಹೊತ್ತ ಈ ಕಥೆಯು, ನೆನಪು ಮತ್ತು ಹಂಬಲಗಳ ನಡುವೆ ಸಾಗುವ ಸುಂದರ ಕಾವ್ಯದಂತಿದೆ’ ಎಂದಿದ್ದಾರೆ ನಿರ್ದೇಶಕ.

ವಿರಾಜ್ ಕೊಲಾಟ್ಲು ಅವರಿಗೆ ಕಾವ್ಯ ಭಗವಂತ್ ಜೋಡಿಯಾಗಿದ್ದಾರೆ. ವಿಸ್ಮಯ ಕೆ. ಚಿತ್ರಕ್ಕೆ ಬಂಡವಾಳ ಹೂಡಿದ್ದು, ಪ್ರಸನ್ನಕುಮಾರ್ ಎಂ.ಎಸ್. ಸಂಗೀತ, ವಿಶಾಲ್ ಕುಮಾರ್ ಗೌಡ ಛಾಯಾಚಿತ್ರಗ್ರಹಣ, ಮಧು ತುಂಬಕೆರೆ ಸಂಕಲನವಿದೆ.

‘ಕೊನೆಹಳ್ಳಿ’ ಹುಡುಗಿಯ ಚಿನ್ನದ ಸಂಭ್ರಮ

ಅಂತರ ವಿಶ್ವವಿದ್ಯಾಲಯ ಅಥ್ಲೆಟಿಕ್ಸ್: ಮಿಶ್ರ ರಿಲೆಯಲ್ಲಿ ಮಂಗಳೂರು ವಿವಿಗೆ ಬಂಗಾರ

• ವಿಕ್ರಂ ಕಾಂತಿಕೆರೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಭಾರತದ ಕೊನೆಯ ಹಳ್ಳಿ ಮಾಣಾ ನಿವಾಸಿ ಕೆ.ಎಂ ಭಾಗೀರಥಿ ಅವರು ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಅಥ್ಲೆಟಿಕ್ಸ್‌ನಲ್ಲಿ ಮಂಗಳೂರು ವಿ.ವಿಗೆ ಚಿನ್ನದ ಪದಕ ಗೆದ್ದುಕೊಟ್ಟರು. ಈ ಹಳ್ಳಿ ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿದೆ.


ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಹಯೋಗದಲ್ಲಿ ರಾಜೀವಗಾಂಧಿ ಆರೋಗ್ಯ ವಿವಿ ಇಲ್ಲಿನ ಸ್ವರಾಜ್ಯ ಮೈದಾನದಲ್ಲಿ ಆಯೋಜಿಸಿರುವ ಕೂಟದ ಮೂರನೇ ದಿನವಾದ ಬುಧವಾರ ಹಾಫ್ ಮ್ಯಾರಥಾನ್‌ನ ಮಹಿಳೆಯರ ವಿಭಾಗದಲ್ಲಿ ಭಾಗೀರಥಿ 1ತಾಸು 21 ನಿಮಿಷ 49.95ಸೆಕೆಂಡುಗಳಲ್ಲಿ ಗುರಿ ತಲುಪಿದರು.

‘ಡೆಲ್ಲಿ ಮ್ಯಾರಥಾನ್’ ಜಯಶಾಲಿ, ರಾಷ್ಟ್ರೀಯ ಚಾಂಪಿಯನ್ ಭಾಗೀರಥಿ ಅವರು ಚಂಡೀಗಢ, ಕಾಶ್ಮೀರ, ಅಮೃತಸರ, ಹೈದರಾಬಾದ್ ಮ್ಯಾರಥಾನ್ ವಿಜೇತೆಯೂ ಆಗಿದ್ದಾರೆ. ಭಾರತ-ಟಿಬೆಟ್ ಗಡಿ ಗ್ರಾಮದ ನಿವಾಸಿ ಭಾಗೀರಥಿ ಅವರು ದತ್ತು ಯೋಜನೆಯಡಿ ಕಳೆದ ವರ್ಷ ಮೂಡುಬಿದಿರೆಯ ಆಳ್ವಾಸ್ ಕಾಲೇಜು ಸೇರಿದ್ದರು. 3ನೇ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡ ಅವರಿಗೆ ಶಾಲೆಯಲ್ಲಿ ಬಿಸಿಯೂಟ ಬಡಿಸುವ ತಾಯಿಯೇ ಆಸರೆ.

‘ಬಡ ಕುಟುಂಬದಲ್ಲಿ ಭಾಗೀರಥಿ ಸೇರಿ ಐವರು ಮಕ್ಕಳನ್ನು ಸಾಕುವ ಜವಾಬ್ದಾರಿ ತಾಯಿಯ ಹೆಗಲ ಮೇಲಿದೆ. ಭಾಗೀರಥಿ ಸಾಧನೆಗಳೇ ಇಡೀ ಕುಟುಂಬಕ್ಕೆ ಈಗ ಸಂತಸ ತರುತ್ತಿರುವ ವಿಷಯ’ ಎಂದು ಕೋಚ್, ಅಲ್ಟ್ರಾ ಮ್ಯಾರಥಾನ್ ಅಥ್ಲೀಟ್ ಸುನಿಲ್ ಶರ್ಮಾ ‘ಪ್ರಜಾವಾಣಿ’ಗೆ ತಿಳಿಸಿದರು.

ರಿಲೆಯಲ್ಲಿ ಪಾರಮ್ಯ: ಸಂಜೆ ನಡೆದ ಮಿಶ್ರ ರಿಲೆಯಲ್ಲಿ ಮಂಗಳೂರು ವಿವಿ ಪಾರಮ್ಯ ಮೆರೆಯಿತು. ಮೂರನೇ ಲೇನ್‌ನಲ್ಲಿ ಓಟ ಆರಂಭಿಸಿದ ಸಾಕೇತ್ ಅವರು ತಂದುಕೊಟ್ಟ ಅಮೋಘ


ಭಾಗೀರಥಿ


ನಾಗೇಂದ್ರ ಅಣ್ಣಪ್ಪ

ಮುನ್ನಡೆಯನ್ನು ಉಳಿಸಿಕೊಂಡು ರೇಖಾ ಬಸಪ್ಪ ಮತ್ತು ಆಕಾಶ್ ಮುನ್ನುಗ್ಗಿದರು. ಕೊನೆಯ ಲ್ಯಾಪ್‌ನಲ್ಲಿ ಪಂಬಾಬಿ ವಿವಿ ಓಟಗಾರ್ತಿ ಭಾರಿ ಪೈಪೋಟಿ ನೀಡಿದರು. ಅಂತಿಮ 100 ಮೀಟರ್‌ನಲ್ಲಿ ಮಿಂಚು ಹರಿಸಿದ ಮನೀಶಾ 4 ಸೆಮಿ ಸೆಕೆಂಡುಗಳಲ್ಲಿ ರೇಸ್ ಗೆದ್ದರು.

ಮೂರನೇ ದಿನದ ಅಂತ್ಯಕ್ಕೆ ಮಂಗಳೂರು ವಿವಿ 74 ಪಾಯಿಂಟ್‌ಗಳೊಂದಿಗೆ ಮುನ್ನಡೆಯಲ್ಲಿದೆ. ಮದ್ರಾಸ್ ವಿವಿ (60) ಮತ್ತು ಚಂಡೀಗಢ ವಿವಿ (57) ಕ್ರಮವಾಗಿ 2 ಮತ್ತು 3ನೇ ಸ್ಥಾನದಲ್ಲಿವೆ.

3ನೇ ದಿನದ ಫಲಿತಾಂಶಗಳು: **ಪುರುಷರು:** 400ಮೀ ಓಟ: ಅಜಯ್ ಡಿ (ಮದ್ರಾಸ್)-1. ಕಾಲ: 46.83ಸೆ, ತರಣ್‌ದೀಪ್ ಸಿಂಗ್ (ಪಂಜಾಬಿ)-2, ಆಕಾಶ್ ರಾಜ್ (ಮಂಗಳೂರು)-3; ಹಾಫ್ ಮ್ಯಾರಥಾನ್: ರವಿ ಕುಮಾರ್ ಪಾಲ್ (ಲಖನೌ)-1. ಕಾಲ: 1ತಾಸು 6 ನಿಮಿಷ 52.42 ಸೆಕೆಂಡು, ಪ್ರವೀಣ್‌ಬಾಬನ್ ಕಾಂಬ್ಳೆ (ಶಿವಾಜಿ)-2, ಸತೀಶ್ ಕುಮಾರ್ ವರ್ಮಾ (ವೀರ್ ಬಹದ್ದೂರ್)-3; 3000 ಮೀ ಸ್ಟೀಪಲ್ ಚೇಸ್: ರಣವೀರ್ ಸಿಂಗ್ (ಸ್ವರ್ಣಿಮ್ ಗುಜರಾತ್)-1. ಕಾಲ: 8ನಿ 45.94ಸೆ, ಮನೋಜ್ ಕುಮಾರ್ (ಕ್ಯಾಲಿಕಟ್)-2, ನವರತನ್ (ವೀರ್ ಬಹದ್ದೂರ್ ಸಿಂಗ್)-3; ಟ್ರಿಪಲ್ ಜಂಪ್: ಮೋಹನ್ ರಾಜ್ (ಮದ್ರಾಸ್)-1. ಅಂತರ: 16.09ಮೀ, ವಿಕಾಸ್ ಕಣ್ಣನ್ (ಮದುರೈ ಕಾಮರಾಜ್)-2, ಡೊನಾಲ್ಡ್ ಎಂ (ಕ್ಯಾಲಿಕಟ್)-3; ಡಿಸ್ಕಸ್ ಥ್ರೋ: ಉಜ್ವಲ್ ಚೌಧರಿ (ಮಂಗಳೂರು)-1. ದೂರ: 54.16ಮೀ, ಋತಿಕ್ (ಚಂಡೀಗಢ)-2, ನಾಗೇಂದ್ರ ಅಣ್ಣಪ್ಪ (ಮಂಗಳೂರು)-3. **ಮಹಿಳೆಯರು:** 400ಮೀ ಓಟ: ಪ್ರಿಯಾ ಠಾಕೂರ್ (ಚಂಡೀಗಢ)-1. ಕಾಲ: 53.33ಸೆ, ಅಂಜಲಿ (ಎಂ.ಡಿ, ರೋಹ್ಟಕ್)-2, ಆಯುಷಿ (ಮಾ ಶಾಕಾಂಬರಿ)-3; ಹಾಫ್ ಮ್ಯಾರಥಾನ್: ಕೆ.ಎಂ ಭಾಗೀರಥಿ (ಮಂಗಳೂರು)-1. ಕಾಲ 1ತಾಸು 21ನಿ 49.95ಸೆಕೆಂಡು, ಮಾಯಾ (ಸೋಬನ್‌ಸಿಂಗ್)-2, ಗಂಗಾ (ಚೌಧರಿ ಚರಣ್‌ಸಿಂಗ್)-3; ಜಾವೆಲಿನ್ ಥ್ರೋ: ದೀಪಿಕಾ (ಚಂಡೀಗಢ)-1. ದೂರ: 54.64ಮೀ, ಜ್ಯೋತಿ (ಗುರುಕಾಶಿ)-2, ಪೂನಂ (ಚಂಡೀಗಢ)-3; ಡೆಕಾಥ್ಲಾನ್: ಮನೋಜ್ ಕುಮಾರ್ (ಮದ್ರಾಸ್)-1. ಪಾಯಿಂಟ್ಸ್ 6872, ಹರೀಶ್ (ಜೈನ್ ಬೆಂಗಳೂರು)-2, ಚಮನ್‌ಜ್ಯೋತ್ ಸಿಂಗ್ (ಮಂಗಳೂರು)-3. 4x400 ಮೀ ಮಿಶ್ರ ರಿಲೆ: ಮಂಗಳೂರು ವಿವಿ-1. ಕಾಲ: 3ನಿಮಿಷ 24.83ಸೆ, ಪಂಜಾಬ್ ವಿವಿ-2, ಗುರುನಾನಕ್ ದೇವ್ ವಿವಿ-3.

ರಾಯಪುರ, ನವಿಮುಂಬೈನಲ್ಲಿ ಆರ್‌ಸಿಬಿ ಪಂದ್ಯ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ 19ನೇ ಆವೃತ್ತಿಯು ಮಾರ್ಚ್ 26ರಿಂದ ಆರಂಭವಾಗಲಿದೆ. ಆದರೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ತವರಿನ ಪಂದ್ಯಗಳನ್ನು ರಾಯಪುರ ಮತ್ತು ನವಿಮುಂಬೈನಲ್ಲಿ ಆಡುವುದು ಬಹುತೇಕ ಖಚಿತವಾಗಿದೆ.

ಎಂ.ಚಿನ್ನಸ್ವಾಮಿ ಕ್ರೀಡಾಂಗಣವು ಆರ್‌ಸಿಬಿಗೆ ತವರಿನ ಅಂಗಳ. ಆದರೆ ರಾಜ್ಯ ಸರ್ಕಾರವು ಇಲ್ಲಿ ಪಂದ್ಯ ನಡೆಸಲು ಅನುಮತಿ ನೀಡುವುದು ಖಚಿತವಾಗಿಲ್ಲದ ಕಾರಣ ಬೇರೆ ನಗರಗಳತ್ತ ಆರ್‌ಸಿಬಿ ಮುಖ ಮಾಡಿದೆ ಎನ್ನಲಾಗಿದೆ. ಈಚೆಗಷ್ಟೇ ಪುಣೆಗೂ ತೆರಳಿದ್ದ ಆರ್‌ಸಿಬಿ ನಿಯೋಗವು ಕ್ರೀಡಾಂಗಣ ಪರಿಶೀಲನೆ ಮಾಡಿತ್ತು. ಆದರೆ ಬುಧವಾರ ಛತ್ತೀಸಗಡದ ಮುಖ್ಯಮಂತ್ರಿ ವಿಷ್ಣುದೇವ್ ಸಾಯಿ ಅವರನ್ನು ರಾಯಪುರದಲ್ಲಿ ಭೇಟಿ ಮಾಡಿದ ಆರ್‌ಸಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಮೆನನ್ ಮಾತುಕತೆ ನಡೆಸಿದರು. ಆರ್‌ಸಿಬಿ ಜೆರ್ಸಿಯನ್ನೂ ಕಾಣಿಕೆಯಾಗಿ ನೀಡಿದರು.

‘ರಾಜೇಶ್ ಮೆನನ್ ಅವರು ನನ್ನನ್ನು ಭೇಟಿಯಾಗಿದ್ದರು. ಅವರೊಂದಿಗೆ ಮಾತುಕತೆ ನಡೆಸಲಾಯಿತು’ ಎಂದು ಸಾಯಿ ಅವರು ಎಕ್ಸ್‌ನಲ್ಲಿ ಚಿತ್ರಸಹಿತ ಸಂದೇಶ ಹಾಕಿದ್ದಾರೆ.

ತಂಡವು ಪ್ರತಿ ವರ್ಷ ತನ್ನ ತವರಿನಂಗಳದಲ್ಲಿ ಏಳು ಪಂದ್ಯಗಳನ್ನು ಆಯೋಜಿಸುವುದು ವಾಡಿಕೆ. ಆದ್ದರಿಂದ ಎರಡು ರಾಯಪುರದಲ್ಲಿ ನಡೆದರೆ, ಇನ್ನೂ ಐದು ಪಂದ್ಯಗಳು ನವಿ ಮುಂಬೈನ ಡಿವೈ ಪಾಟೀಲ ಕ್ರೀಡಾಂಗಣದಲ್ಲಿ ನಡೆಯಲಿವೆ ಎಂದು ಕೆಲವು ವೆಬ್‌ಸೈಟ್‌ಗಳಲ್ಲಿ ಪ್ರಕಟವಾಗಿವೆ.

ಕೆಎಸ್‌ಸಿಎ ಸಭೆ: ಈ ನಡುವೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯಗಳ ಆಯೋಜನೆಗೆ ರಾಜ್ಯ ಸರ್ಕಾರವು ರಚಿಸಿರುವ ಪರಿಶೀಲನಾ ಸಮಿತಿಯಿಂದ ಅನುಮತಿ ಪಡೆಯಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಪ್ರಯತ್ನ ಮುಂದುವರಿಸಿದೆ.

ಕಳೆದ ಜೂನ್ 4ರಂದು ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಕಾಲ್ತುಳಿತ ಪ್ರಕರಣ ನಡೆದಿತ್ತು. ಅದರಲ್ಲಿ 11 ಜನ ಅಭಿಮಾನಿಗಳು ಸಾವಿಗೀಡಾಗಿದ್ದರು. ಅದರ ನಂತರದ ಬೆಳವಣಿಗೆಯಲ್ಲಿ ರಾಜ್ಯ ಸರ್ಕಾರ ನೇಮಕ ಮಾಡಿದ್ದ ನ್ಯಾಯಮೂರ್ತಿ ಮೈಕೆಲ್ ಡಿಕುನ್ಹಾ ಸಮಿತಿಯು ಕ್ರೀಡಾಂಗಣದಲ್ಲಿ ಕೆಲವು ಬದಲಾವಣೆಗಳನ್ನು ಶಿಫಾರಸು ಮಾಡಿತ್ತು.

‘ಕ್ರೀಡಾಂಗಣದಲ್ಲಿ ಇವತ್ತು ಪರಿಶೀಲನಾ ಸಮಿತಿಯೊಂದಿಗೆ ಸಭೆ ನಡೆಸಲಾಯಿತು. ಸರ್ಕಾರದ ಶಿಫಾರಸುಗಳ ಮೇರೆಗೆ ಕೆಲವು ನವೀಕರಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಅವುಗಳನ್ನು ಸಮಿತಿಯು ಪರಿಶೀಲಿಸಿತು. ಅದರ ಆಧಾರದಲ್ಲಿ ಸಮಿತಿಯು ಪಂದ್ಯಗಳನ್ನು ಆಯೋಜಿಸಲು ಹಸಿರು ನಿಶಾನೆ ನೀಡಿದರೆ ಮುಂದಿನ ಕ್ರಮಗಳ ಬಗ್ಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ‘ಪ್ರಜಾವಾಣಿ’ಗೆ ತಿಳಿಸಿದರು.

ಬೇರೆ ಫ್ರ್ಯಾಂಚೈಸಿಗಳ ಪಂದ್ಯ?: ಒಂದೊಮ್ಮೆ ಸರ್ಕಾರವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳ ಆಯೋಜನೆಗೆ ಅವಕಾಶ ನೀಡಿದರೂ ಆರ್‌ಸಿಬಿಯು ಇಲ್ಲಿ ಆಡುವುದು ಅನುಮಾನ ಎನ್ನಲಾಗಿದೆ. ಆದ್ದರಿಂದ ಬೇರೆ ಫ್ರ್ಯಾಂಚೈಸಿಗಳ ಪಂದ್ಯಗಳನ್ನು ಇಲ್ಲಿ ಆಯೋಜಿಸುವ ಕುರಿತು ಚಿಂತನೆ ನಡೆಸುತ್ತಿದೆ ಎನ್ನಲಾಗಿದೆ. ಐಪಿಎಲ್‌ನಲ್ಲಿ ಆಡುವ ಕೆಲವು ತಂಡಗಳು ತಮ್ಮ ಎರಡನೇ ತವರಾಗಿ ಬೇರೆ ಊರಿನ ತಾಣಗಳಲ್ಲಿ ಆಡುತ್ತವೆ. ಅಂತಹ ತಂಡಗಳನ್ನು ಆಹ್ವಾನಿಸಲು ಕೆಎಸ್‌ಸಿಎ ಚಿಂತನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಭಾರತ ಮಹಿಳಾ ಹಾಕಿ ತಂಡವನ್ನು ಸೇರಿಕೊಂಡ ಶ್ಯೂರ್ಡ್ ಮರಾಯ್ನೆ



ನವದೆಹಲಿ (ಪಿಟಿಐ): ಭಾರತ ಮಹಿಳಾ ಹಾಕಿ ತಂಡದ ಮುಖ್ಯ ಕೋಚ್ ಆಗಿ ಮರು ನೇಮಕಗೊಂಡಿರುವ ನೆದರ್ಲೆಂಡ್ಸ್‌ನ ಶ್ಯೂರ್ಡ್ ಮರಾಯ್ನೆ ಅವರು ಬುಧವಾರ ತಂಡವನ್ನು ಸೇರಿಕೊಂಡರು.

51 ವರ್ಷದ ಮರಾಯ್ನೆ ಅವರು 2017ರಿಂದ 2021ರವರೆಗೆ ಭಾರತ ಮಹಿಳಾ ತಂಡಕ್ಕೆ ಕೋಚ್ ಆಗಿದ್ದರು. ಅವರ ಮಾರ್ಗದರ್ಶನದಲ್ಲಿ ತಂಡವು 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಾರಿತ್ರಿಕ ನಾಲ್ಕನೇ ಸ್ಥಾನ ಗಳಿಸಿತ್ತು. ಹಾಕಿ ಇಂಡಿಯಾ ಎರಡು ವಾರಗಳ ಹಿಂದೆ ಅವರನ್ನು ಕೋಚ್ ಹುದ್ದೆಗೆ ಮರು ನೇಮಕ ಮಾಡಿತ್ತು.

ಕಳಪೆ ಫಲಿತಾಂಶದ ಕಾರಣಕ್ಕೆ ಕಳೆದ ಡಿಸೆಂಬರ್‌ನಲ್ಲಿ ರಾಜೀನಾಮೆ ನೀಡಿದ ಕೋಚ್ ಹರೇಂದ್ರ ಸಿಂಗ್ ಅವರ ಉತ್ತರಾಧಿಕಾರಿಯಾಗಿ ಮರಾಯ್ನೆ ಕಾರ್ಯ ನಿರ್ವಹಿಸುವರು. ನೂತನ ಕೋಚ್ ಮಾರ್ಗದರ್ಶನದಲ್ಲಿ ರಾಷ್ಟ್ರೀಯ ತರಬೇತಿ ಶಿಬಿರವು ಇದೇ 19ರಂದು ಬೆಂಗಳೂರಿನ ಸಾಯ್ ಕೇಂದ್ರದಲ್ಲಿ ಪ್ರಾರಂಭವಾಗಲಿದೆ.

ಶ್ರೀಕಾಂತ್, ಪ್ರಣಯ್ ಶುಭಾರಂಭ

ನವದೆಹಲಿ (ಪಿಟಿಐ): ಭಾರತದ ತಾರೆಯರಾದ ಕಿದಂಬಿ ಶ್ರೀಕಾಂತ್ ಮತ್ತು ಎಚ್.ಎಸ್. ಪ್ರಣಯ್ ಅವರು ಬುಧವಾರ ಇಂಡಿಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಗೆಲುವಿನೊಡನೆ ಅಭಿಯಾನ ಆರಂಭಿಸಿದರು.

ವೃತ್ತಿಬದುಕಿನ ಸಂಧ್ಯಾ ಕಾಲದಲ್ಲಿರುವ ಈ ಅನುಭವಿಗಳು ಋತುವಿನ ತಮ್ಮ ಮೊದಲ ಟೂರ್ನಿಯಲ್ಲಿ ಶುಭಾರಂಭ ಮಾಡುವ ಮೂಲಕ ಆತ್ಮಸ್ಥೈರ್ಯ ಹೆಚ್ಚಿಸಿಕೊಂಡರು. 2022ರ ಐತಿಹಾಸಿಕ ಥಾಮಸ್ ಕಪ್ ಗೆಲುವು ಸೇರಿದಂತೆ ಭಾರತದ ಪುರುಷರ ಬ್ಯಾಡ್ಮಿಂಟನ್‌ನಲ್ಲಿ ಸಂಚಲನ ಮೂಡಿಸಿದ್ದ ಇವರು ಪ್ರಸ್ತುತ ಲಯಕ್ಕೆ ಪರದಾಡುತ್ತಿದ್ದಾರೆ.

ಶ್ರೀಕಾಂತ್ ಅವರು 15-21, 21-6, 21-19ರಿಂದ ಸ್ವದೇಶದ ತರುಣ್ ಮನ್ನೇಪಳ್ಳಿ ಅವರನ್ನು ಮಣಿಸಿ ಪ್ರಿಕ್ವಾರ್ಟರ್ ಫೈನಲ್ ಪ್ರವೇಶಿಸಿದರು. 32 ವರ್ಷದ ಶ್ರೀಕಾಂತ್ ಮುಂದಿನ ಸುತ್ತಿನಲ್ಲಿ ಫ್ರಾನ್ಸ್‌ನ ಕ್ರಿಸ್ಟೋ ಪೊಪೊವ್ ಅವರನ್ನು ಎದುರಿಸುವರು. ತೆಲಂಗಾಣದ ಯುವ ಆಟಗಾರ ತರುಣ್ ಮೊದಲ ಗೇಮ್‌ನಲ್ಲಿ ಪಾರಮ್ಯ ಮೆರೆದರು. ಆದರೆ, ನಂತರದಲ್ಲಿ ಪುಟಿದೆದ್ದ ಶ್ರೀಕಾಂತ್ ಗೇಮ್ ಸಮಬಲ ಸಾಧಿಸಿದರು. ರೋಚಕವಾಗಿ ಸಾಗಿದ ನಿರ್ಣಾಯಕ ಗೇಮ್‌ನಲ್ಲಿ 17–19ರ ಹಿನ್ನಡೆಯಿಂದ ಚೇತರಿಸಿಕೊಂಡು ಮೋಡಿ ಮಾಡಿದರು.

ವಿಶ್ವ ಕ್ರಮಾಂಕದಲ್ಲಿ 38ನೇ ಸ್ಥಾನ ದಲ್ಲಿರುವ ಪ್ರಣಯ್ 22-20, 21-18ರ ನೇರ ಗೇಮ್‌ಗಳಿಂದ ಕಳೆದ ವರ್ಷದ ರನ್ನರ್ ಅಪ್ ಲೀ ಚೆಯುಕ್ ಯಿಯು ಅವರಿಗೆ ಆಘಾತ ನೀಡಿದರು. ದೆಹಲಿಯ ಪ್ರತಿಕೂಲ ವಾತಾವರಣ ದಿಂದಾಗಿ ಡೆನ್ಮಾರ್ಕ್‌ನ ಆ್ಯಂಡರ್ಸ್ ಆಂಟೊನ್ಸೆನ್ ಟೂರ್ನಿಯಿಂದ ಹಿಂದೆ ಸರಿದ ಕಾರಣ ಪ್ರಣಯ್ ಕೊನೆಯ ಕ್ಷಣದಲ್ಲಿ ಅವಕಾಶ ಪಡೆದರು. 33 ವರ್ಷದ ಪ್ರಣಯ್ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಸಿಂಗಪುರದ ಲೋಹ್ ಕೀನ್ ಯೂ ಅವರನ್ನು ಎದುರಿಸಲಿದ್ದಾರೆ.

ಸಿಂಧುಗೆ ನಿರಾಸೆ: ಕಳೆದ ವಾರ ಮಲೇಷ್ಯಾ ಸೂಪರ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದ ಭಾರತದ ತಾರೆ ಪಿ.ವಿ. ಸಿಂಧು ಮಹಿಳೆಯರ ಸಿಂಗಲ್ಸ್ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು. ಮೊದಲ ಗೇಮ್‌ನಲ್ಲಿ ಪ್ರಾಬಲ್ಯ ಸಾಧಿಸಿದ್ದ ಸಿಂಧು 22-20, 12-21, 15-21ರಿಂದ ವಿಯೆಟ್ನಾಂನ ಥುಯ್ ಲಿನ್ ನ್ಗುಯೆನ್ ವಿರುದ್ಧ ಸೋತರು. ಉದಯೋನ್ಮುಖ ಆಟಗಾರ್ತಿ ಮಾಳವಿಕಾ ಬನ್ಸೋಡ್ 21-18, 21-19ರಿಂದ ತೈವಾನ್‌ನ ಪೈ ಯು ಪೊ ವಿರುದ್ಧ ಗೆಲುವು ಸಾಧಿಸಿದರು. ತನ್ವಿ ಶರ್ಮಾ 20–22, 21–18, 13–21 ರಿಂದ ಚೀನಾದ ವಾಂಗ್ ಝಿಯಿ ಅವರಿಗೆ ಮಣಿದರು.

ಮಿಚೆಲ್ ಶತಕಕ್ಕೆ ಒಲಿದ ಗೆಲುವು

ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿ 1–1 ಸಮಬಲ

• ಕನ್ನಡಿಗ ರಾಹುಲ್ ಶತಕ • ಶುಭಮನ್ ಅರ್ಧಶತಕ

ರಾಜ್‌ಕೋಟ್ (ಪಿಟಿಐ): ಬುಧವಾರ ಇಲ್ಲಿ ನಡೆದ ಏಕದಿನ ಪಂದ್ಯದಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ಮತ್ತು ಕಿವೀಸ್ ಬ್ಯಾಟರ್ ಡ್ಯಾರಿಲ್ ಮಿಚೆಲ್ ಅವರಿಬ್ಬರೂ ಸೊಗಸಾದ ಶತಕಗಳನ್ನು ಗಳಿಸಿದರು. ಇಬ್ಬರೂ ತಮ್ಮ ತಂಡಗಳು ಕುಸಿಯುವ ಆತಂಕ ದಲ್ಲಿದ್ದಾಗ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದರು. ಆದರೆ ಜಯ ಮಿಚೆಲ್ ಅವರ ಶತಕಕ್ಕೆ ಒಲಿಯಿತು.

ನಿರಂಜನ್ ಶಾ ಕ್ರೀಡಾಂಗಣದಲ್ಲಿ ನಡೆದ ಎರಡನೇ ಏಕದಿನ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವು ಭಾರತದ ಎದುರು 7 ವಿಕೆಟ್‌ಗಳಿಂದ ಜಯಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1–1ರ ಸಮಬಲ ಸಾಧಿಸಿತು.

ಟಾಸ್ ಗೆದ್ದ ನ್ಯೂಜಿಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರೋಹಿತ್ ಶರ್ಮಾ (24; 38ಎ, 4X4) ಮತ್ತು ನಾಯಕ ಶುಭಮನ್ ಗಿಲ್ (56; 53ಎ, 4X9, 6X1) ಅವರು ಮೊದಲ ವಿಕೆಟ್‌ಗೆ 70 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಆದರೆ, 13ನೇ ಓವರ್‌ನಲ್ಲಿ ಕ್ರಿಸ್ಟನ್ ಕ್ಲಾರ್ಕ್ (56ಕ್ಕೆ3) ಅವರು ರೋಹಿತ್ ಶರ್ಮಾ ಅವರ ವಿಕೆಟ್ ಗಳಿಸಿದರು. ನಂತರದ 48 ರನ್‌ಗಳು ಸೇರುವಷ್ಟರಲ್ಲಿ ಗಿಲ್, ಶ್ರೇಯಸ್ ಅಯ್ಯರ್ ಮತ್ತು ವಿರಾಟ್ ಕೊಹ್ಲಿ ಅವರು ಔಟಾದರು. ಇದರಲ್ಲಿ ಗಿಲ್ ವಿಕೆಟ್ ಕೈಲ್ ಜೆಮಿಸನ್ ಪಾಲಾಯಿತು. ವಿರಾಟ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದ ಕ್ಲಾರ್ಕ್, ಅಯ್ಯರ್ ವಿಕೆಟ್ ಕೂಡ ಕಬಳಿಸಿದರು. ಈ ಹೊತ್ತಿನಲ್ಲಿ ಕ್ರೀಸ್‌ಗೆ ಬಂದ ರಾಹುಲ್ (ಅಜೇಯ 112; 92ಎ, 4X11, 6X1) ಹಾಗೂ ರವೀಂದ್ರ ಜಡೇಜ (27; 44ಎ) ಜೊತೆಗೂಡಿ ವಿಕೆಟ್ ಪತನ ತಡೆದರು. ಜಡೇಜ ನಂತರ ನಿತೀಶ್ ಕುಮಾರ್ ರೆಡ್ಡಿ (20; 21ಎ) ಅವರು ಒಂದಿಷ್ಟು ಹೊತ್ತು ಕ್ರೀಸ್‌ನಲ್ಲಿದ್ದರು.

ಆದರೆ ಏಕಾಂಗಿ ಹೋರಾಟ ನಡೆಸಿದ ರಾಹುಲ್ ಏಕದಿನ ಕ್ರಿಕೆಟ್‌ನಲ್ಲಿ ಏಳನೇ ಶತಕ ದಾಖಲಿಸಿದರು. ಐದನೇ ಕ್ರಮಾಂಕದಲ್ಲಿ ಆಡಿದ ಅವರ ಆಟವು ತಾಳ್ಮೆ ಹಾಗೂ ಸೊಗಸಾದ ಹೊಡೆತಗಳಿಂದ ಕೂಡಿತ್ತು. ಅವರು ಶತಕದ ಗಡಿ ದಾಟಲು ಸಿಕ್ಸರ್ ಎತ್ತಿದರು. ಅವರ ಆಟದ ಬಲದಿಂದ ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 284 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಪೇರಿಸಿತು.

ಮಿಚೆಲ್ ಮಿಂಚು: ಕಿವೀಸ್ ಬಳಗಕ್ಕೆ ಭಾರತದ ವೇಗಿ ಪ್ರಸಿದ್ಧಕೃಷ್ಣ ಮತ್ತು ಹರ್ಷಿತ್ ರಾಣಾ ಅವರು ಆರಂಭದಲ್ಲಿಯೇ ಪೆಟ್ಟುಕೊಟ್ಟರು. ಡವೊನ್ ಕಾನ್ವೆ ಮತ್ತು ಹೆನ್ರಿ ನಿಕೊಲ್ಸ್ ಬೇಗನೆ ಔಟಾದಾಗ ತಂಡವು ಕೇವಲ 24 ರನ್ ಗಳಿಸಿತ್ತು. ಈ ಸಂದರ್ಭದಲ್ಲಿ ಜೊತೆಯಾದ ವಿಲ್ ಯಂಗ್ (87; 98ಎ, 4X7) ಮತ್ತು ಡ್ಯಾರಿಲ್ ಮಿಚೆಲ್ (ಔಟಾಗದೇ 131; 117ಎ, 4X11, 6X2) ಕಿವೀಸ್ ಆತಂಕವನ್ನು ದೂರ ಮಾಡಿದರು. ಅವರ ಆಟದ ನೆರವಿನಿಂದ ತಂಡವು 47.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 286 ರನ್ ಗಳಿಸಿತು.

ಮಿಚೆಲ್ ಅವರು ಟಿ20 ಪಂದ್ಯಗಳ ಮಾದರಿಯ ಬ್ಯಾಟಿಂಗ್ ಪ್ರದರ್ಶಿಸಿದರು. ಆರಂಭದಲ್ಲಿ ಉತ್ತಮವಾಗಿ ಬೌಲಿಂಗ್ ಮಾಡುತ್ತಿದ್ದ ಭಾರತ ಬೌಲರ್‌ಗಳು ಇವರಿಬ್ಬರ ಮುಂದೆ ನಿರುತ್ತರರಾದರು. ಯಂಗ್ ವಿಕೆಟ್ ಗಳಿಸುವಲ್ಲಿ ಸ್ಪಿನ್ನರ್ ಕುಲದೀಪ್ ಯಾದವ್ ಯಶಸ್ವಿಯಾದರು. ಆದರೆ ಕ್ರೀಸ್‌ಗೆ ಬಂದ ಗ್ಲೆನ್ ಫಿಲಿಪ್ಸ್ (ಅಜೇಯ 32; 25ಎ) ಕೂಡ ಬೌಲರ್‌ಗಳನ್ನು ದಂಡಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 7ಕ್ಕೆ284 (ರೋಹಿತ್ ಶರ್ಮಾ 24, ಶುಭಮನ್ ಗಿಲ್ 56, ವಿರಾಟ್ ಕೊಹ್ಲಿ 23, ಕೆ.ಎಲ್. ರಾಹುಲ್ ಔಟಾಗದೇ 112, ರವೀಂದ್ರ ಜಡೇಜ 27, ನಿತೀಶ್ ಕುಮಾರ್ ರೆಡ್ಡಿ 20, ಕ್ರಿಸ್ಟನ್ ಕ್ಲಾರ್ಕ್ 56ಕ್ಕೆ3, ಕೈಲ್ ಜೆಮಿಸನ್ 70ಕ್ಕೆ1, ಜೈಡನ್ ಲೆನಾಕ್ಸ್ 42ಕ್ಕೆ1) ನ್ಯೂಜಿಲೆಂಡ್: 47.3 ಓವರ್‌ಗಳಲ್ಲಿ 3ಕ್ಕೆ286 (ವಿಲ್ ಯಂಗ್ 87, ಡ್ಯಾರಿಲ್ ಮಿಚೆಲ್ ಔಟಾಗದೇ 131, ಗ್ಲೆನ್ ಫಿಲಿಪ್ಸ್ ಔಟಾಗದೇ 32, ಹರ್ಷಿತ್ ರಾಣಾ 52ಕ್ಕೆ1, ಪ್ರಸಿದ್ಧಕೃಷ್ಣ 49ಕ್ಕೆ1, ಕುಲದೀಪ್ ಯಾದವ್ 82ಕ್ಕೆ1)

ಫಲಿತಾಂಶ: ನ್ಯೂಜಿಲೆಂಡ್ ತಂಡಕ್ಕೆ 7 ವಿಕೆಟ್‌ಗಳ ಜಯ.
ಪಂದ್ಯದ ಆಟಗಾರ: ಡ್ಯಾರಿಲ್ ಮಿಚೆಲ್



ಡ್ಯಾರಿಲ್ ಮಿಚೆಲ್
ರನ್ 131*
ಎಸೆತ 117
ಬೌಂಡರಿ 11
ಸಿಕ್ಸರ್ 2



ಕೆ.ಎಲ್.ರಾಹುಲ್
ರನ್ 112*
ಎಸೆತ 92
ಬೌಂಡರಿ 11
ಸಿಕ್ಸರ್ 1

ಪಿಟಿಐ ಚಿತ್ರಗಳು

ಟಿ20 ಸರಣಿಯಿಂದ ಹೊರಬಿದ್ದ ವಾಷಿಂಗ್ಟನ್

ನವದೆಹಲಿ (ಪಿಟಿಐ): ಭಾರತದ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರು ನ್ಯೂಜಿಲೆಂಡ್ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿಯಿಂದಲೂ ಹೊರಬಿದ್ದಿದ್ದಾರೆ.



ನ್ಯೂಜಿಲೆಂಡ್ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ ಬೌಲಿಂಗ್ ಮಾಡುವಾಗ ವಾಷಿಂಗ್ಟನ್ ಎಡ ಪಕ್ಕೆಲುಬು ನೋವು ಅನುಭವಿಸಿದ್ದರು. ನಂತರ, ಅವರನ್ನು ಏಕದಿನ ಸರಣಿಯಿಂದ ಹೊರಗಿಡಲಾಯಿತು. ಟಿ20 ಸರಣಿಯು ಇದೇ 21ರಂದು ನಾಗ್ಪುರದಲ್ಲಿ ಆರಂಭವಾಗಲಿದೆ.

ತೊಡೆಸಂದು ಗಾಯದಿಂದ ಬಳಲುತ್ತಿರುವ ತಿಲಕ್ ವರ್ಮಾ ಅವರಿಗೆ ಶಸ್ತ್ರಚಿಕಿತ್ಸೆಯ ಅಗತ್ಯವಿರುವುದರಿಂದ ಅವರೂ ನ್ಯೂಜಿಲೆಂಡ್ ವಿರುದ್ಧದ ಮೊದಲ ಮೂರು ಟಿ20 ಪಂದ್ಯಗಳಿಂದ ಹೊರಗುಳಿದಿದ್ದಾರೆ.

ವಿಜಯ್ ಹಜಾರೆ ಟ್ರೋಫಿ: ಮಯಂಕ್ ಪಡೆಗೆ ವಿದರ್ಭ ಸವಾಲು

ಪಡಿಕ್ಕಲ್ ಮೇಲೆ ನಿರೀಕ್ಷೆ: ಕರ್ನಾಟಕಕ್ಕೆ ಫೈನಲ್ ಆಸೆ

• ಗಿರೀಶ ದೊಡ್ಡಮನಿ

ಬೆಂಗಳೂರು: ಒಂದು ವರ್ಷದ ಹಿಂದೆ ವಡೋದರಾದಲ್ಲಿ ನಡೆದಿದ್ದ ವಿಜಯ್ ಹಜಾರೆ ಟ್ರೋಫಿ ಫೈನಲ್‌ನಲ್ಲಿ ವಿದರ್ಭ ತಂಡದಲ್ಲಿ ಆಡಿದ್ದ ಕರುಣ್ ನಾಯರ್ ಕರ್ನಾಟಕದ ಬೌಲರ್‌ಗಳನ್ನು ಎದುರಿಸಿದ್ದರು. ಈಗ ಅದೇ ಕರುಣ್, ಗುರುವಾರ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ನಡೆಯಲಿರುವ ಸೆಮಿಫೈನಲ್ ಪಂದ್ಯದಲ್ಲಿ ವಿದರ್ಭ ಬೌಲರ್‌ಗಳ ಎದುರು ಬ್ಯಾಟ್ ಬೀಸಲು ಸಿದ್ಧರಾಗಿದ್ದಾರೆ. ಅಷ್ಟೇ ಅಲ್ಲ; ದೇವದತ್ತ ಪಡಿಕ್ಕಲ್ ಅವರನ್ನೂ ಕಟ್ಟಿಹಾಕುವ ಸವಾಲು ಎದುರಾಳಿ ಬಳಗಕ್ಕಿದೆ.

ಆ ಫೈನಲ್‌ನಲ್ಲಿ ಕರ್ನಾಟಕ ಜಯಿಸಿತ್ತು. ಈಗ ಪ್ರಶಸ್ತಿ ಉಳಿಸಿಕೊಳ್ಳುವತ್ತ ಮಯಂಕ್ ಅಗರವಾಲ್ ಬಳಗ ಚಿತ್ತ ನೆಟ್ಟಿದೆ. ಆದರೆ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿ ವಿದರ್ಭ ತಂಡವಿದೆ. ಆ ಟೂರ್ನಿಯಲ್ಲಿಯೂ ಕರ್ನಾಟಕದ ದೇವದತ್ತ ಪಡಿಕ್ಕಲ್ ಅವರು 600ಕ್ಕೂ ಹೆಚ್ಚು ರನ್‌ಗಳನ್ನು ಪೇರಿಸಿದ್ದರು. ಈ ಸಲವಂತೂ ಎಂಟು ಪಂದ್ಯಗಳಿಂದ 721 ರನ್‌ಗಳನ್ನು ಕಲೆಹಾಕಿದ್ದಾರೆ. ಅದರಲ್ಲಿ ನಾಲ್ಕು ಶತಕಗಳೂ ಇವೆ. ಭಾರತ ತಂಡದಲ್ಲಿ ಆಡುವ ಅವಕಾಶ ಸಿಗದಿದ್ದರೂ ಎದೆಗುಂದದ ದೇವದತ್ತ ಇಲ್ಲಿ ಆರಂಭಿಕ ಬ್ಯಾಟರ್ ಆಗಿ ಅಮೋಘವಾಗಿ ಆಡುತ್ತಿದ್ದಾರೆ. ನಾಯಕ ಮಯಂಕ್ ಅವರೊಂದಿಗೆ ಹಲವು ಪಂದ್ಯಗಳಲ್ಲಿ ಉತ್ತಮ ಆರಂಭ ನೀಡಿದ್ದಾರೆ. ಮಯಂಕ್ ಅವರೂ ಎರಡು ಶತಕಗಳೊಂದಿಗೆ ಒಟ್ಟು 411 ರನ್‌ಗಳಿಸಿದ್ದಾರೆ.



ದೇವದತ್ತ ಪಡಿಕ್ಕಲ್

ಇನ್ನು ಮಧ್ಯಮ ಕ್ರಮಾಂಕವೂ ಬಲಿಷ್ಠವಾಗಿದೆ. ಕರುಣ್ ನಾಯರ್ (330 ರನ್), ಸ್ಮರಣ್ ರವಿಚಂದ್ರನ್ (171 ರನ್), ಕೆ.ಎಲ್. ಶ್ರೀಜಿತ್, ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಹಾಗೂ ಅಭಿನವ್ ಮನೋಹರ್ ಅವರು ಉತ್ತಮ ಲಯದಲ್ಲಿದ್ದಾರೆ. ಗುಂಪು ಹಂತದಲ್ಲಿ ಅಗ್ರಸ್ಥಾನ ಪಡೆದು ನಾಕೌಟ್ ಪ್ರವೇಶಿಸಿದ್ದ ಕರ್ನಾಟಕವು ಕ್ವಾರ್ಟರ್‌ಫೈನಲ್‌ನಲ್ಲಿ ಮುಂಬೈ ಎದುರು ಜಯ ಸಾಧಿಸಿತ್ತು. ಆ ಪಂದ್ಯದಲ್ಲಿಯೂ ಅಗ್ರ ಮೂರು ಬ್ಯಾಟರ್‌ಗಳೇ ಮಿಂಚಿದ್ದರು. ವಿದ್ಯಾಧರ್ ಪಾಟೀಲ ಪರಿಣಾಮಕಾರಿ ದಾಳಿ ನಡೆಸಿದ್ದರು. ಅವರಿಗೆ ವಿದ್ವತ್ ಕಾವೇರಪ್ಪ ಮತ್ತು ಎಡಗೈ ವೇಗಿ ಅಭಿಲಾಷ್ ಶೆಟ್ಟಿ ಉತ್ತಮ ಜೊತೆ ನೀಡಿದ್ದರು. ಈ ಪಂದ್ಯದಲ್ಲಿ ಒಟ್ಟು ನಾಲ್ವರು ವೇಗಿಗಳು ಆಡಿದ್ದರು.

ಆದರೆ ನಾಲ್ಕರ ಘಟ್ಟದ ಪಂದ್ಯವು ಹೊನಲು ಬೆಳಕಿನಲ್ಲಿ ನಡೆಯಲಿದೆ. ಮುಸ್ಸಂಜೆಯ ಹೊತ್ತಿನಲ್ಲಿ ಇಬ್ಬನಿ ಬೀಳುವ ಸಾಧ್ಯತೆಗಳು ಇವೆ. ಆದ್ದರಿಂದ ಒಬ್ಬ ಹೆಚ್ಚುವರಿ ಸ್ಪಿನ್ನರ್ ಆಗಿ ಶ್ರೀಶ ಆಚಾರ್ ಕಣಕ್ಕಿಳಿಯಬಹುದು. ವಿದರ್ಭ ತಂಡವೂ ಸಮತೋಲನ ಕಾಯ್ದುಕೊಂಡಿದೆ. ಪಡಿಕ್ಕಲ್ ನಂತರ ಅತ್ಯಧಿಕ ರನ್ ಗಳಿಸಿರುವ ಬ್ಯಾಟರ್ ಅಮನ್ ಮೊಖಡೆ (643), ಧ್ರುವ ಶೋರೆ (468) ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ದೆಹಲಿ ವಿರುದ್ಧದ ಕ್ವಾರ್ಟರ್ ಫೈನಲ್‌ನಲ್ಲಿ ಅವರು ಮಿಂಚಿದ್ದರು. ಆರಂಭಿಕ ಬ್ಯಾಟರ್ ಅಥರ್ವ ತೈಡೆ (262) ಮತ್ತು ಕನ್ನಡಿಗ ಆರ್. ಸಮರ್ಥ್ ಕೂಡ ಉತ್ತಮ ಲಯದಲ್ಲಿದ್ದಾರೆ.

ಟೂರ್ನಿಯ ಇತಿಹಾಸದಲ್ಲಿ ಕರ್ನಾಟಕವು ವಿದರ್ಭ ತಂಡವನ್ನು ಎದುರಿಸಿದ ಎಲ್ಲ ನಾಲ್ಕು ಪಂದ್ಯಗಳಲ್ಲಿಯೂ ಜಯಿಸಿದೆ. ಆದ್ದರಿಂದ ಗೆಲುವಿನ ಓಟ ಮುಂದುವರಿಸುವ ಹುಮ್ಮಸ್ಸಿನಲ್ಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್

19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್: ಭಾರತಕ್ಕೆ ಅಮೆರಿಕ ಸವಾಲು

ಬುಲವಾಯೊ (ಜಿಂಬಾಬ್ವೆ) (ಪಿಟಿಐ): ಆಯುಷ್ ಮ್ಹಾತ್ರೆ ನಾಯಕತ್ವದ ಭಾರತ ತಂಡವು 19 ವರ್ಷದೊಳಗಿನವರ ವಿಶ್ವಕಪ್ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಗುರುವಾರ ಅಮೆರಿಕ ತಂಡದ ವಿರುದ್ಧ ಅಭಿಯಾನ ಆರಂಭಿಸಲಿದೆ.

ಪ್ರತಿಭಾನ್ವಿತ ಆಟಗಾರರನ್ನು ಒಳಗೊಂಡ ಭಾರತ ತಂಡವು ದಾಖಲೆಯ ಆರನೇ ಬಾರಿ ಕಿರೀಟವನ್ನು ಜಯಿಸುವ ಛಲದಲ್ಲಿದೆ. 1988ರಿಂದ ನಡೆದ 16 ಆವೃತ್ತಿಗಳಲ್ಲಿ ಐದು ಬಾರಿ ಚಾಂಪಿಯನ್ ಆಗಿರುವ ಭಾರತವು ಈ ಬಾರಿಯೂ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವೆನಿಸಿದೆ.

2000, 2008, 2012, 2018 ಮತ್ತು 2022ರಲ್ಲಿ ಭಾರತ ಪ್ರಶಸ್ತಿ ಗೆದ್ದಿದೆ. 2024ರ ಕೊನೆಯ ಆವೃತ್ತಿಯಲ್ಲಿ ಭಾರತ ತಂಡವು ಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ 79 ರನ್‌ಗಳಿಂದ ಸೋತಿತ್ತು.

ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ, ಕೇನ್ ವಿಲಿಯಮ್ಸನ್, ಜೋ ರೂಟ್ ಮತ್ತು ಸ್ಟೀವ್ ಸ್ಮಿತ್‌ರಂತಹ ಸ್ಟಾರ್ ಆಟಗಾರರು ಈ ಟೂರ್ನಿಯ ಮೂಲಕವೇ ಆರಂಭದಲ್ಲಿ ಗಮನ ಸೆಳೆದವರು. ಈ ವೇದಿಕೆಯು ಕ್ರಿಕೆಟ್ ಜಗತ್ತಿಗೆ ಅವರ ಅಸಾಧಾರಣ ಪ್ರತಿಭೆಯ ಆರಂಭಿಕ ನೋಟವನ್ನು ನೀಡಿತು.

ಭಾರತದ ಪ್ರಸ್ತುತ ಟೆಸ್ಟ್ ಮತ್ತು ಏಕದಿನ ನಾಯಕ ಶುಭಮನ್ ಗಿಲ್ ಕೂಡ 2018ರ ಆವೃತ್ತಿಯಲ್ಲಿ ಗಮನ ಸೆಳೆದಿದ್ದರು. ಪೃಥ್ವಿ ಶಾ ನಾಯಕತ್ವದಲ್ಲಿ ಭಾರತ ತಂಡ ಕಿರೀಟ ಗೆದ್ದಿತ್ತು.

14ರ ಪೋರ ವೈಭವ್ ಸೂರ್ಯವಂಶಿ, ಆಯುಷ್ ಮ್ಹಾತ್ರೆ, ಉಪನಾಯಕ ವಿಹಾನ್ ಮಲ್ಹೋತ್ರಾ, ಅಗ್ರ ಕ್ರಮಾಂಕದ ಬ್ಯಾಟರ್ ಆರನ್ ಜಾರ್ಜ್ ಮತ್ತು ಅಭಿಗ್ಯಾನ್ ಕುಂದು ಭಾರತದ ಬ್ಯಾಟಿಂಗ್ ಶಕ್ತಿಯಾಗಿದ್ದಾರೆ. ಉತ್ಕರ್ಷ್ ಶ್ರೀವಾಸ್ತವ ನಾಯಕತ್ವದ ಅಮೆರಿಕ ತಂಡವು ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದೆ.



ವೈಭವ್ ಸೂರ್ಯವಂಶಿ

ಭಾರತ ತಂಡವು ನ್ಯೂಜಿಲೆಂಡ್, ಅಮೆರಿಕ ಮತ್ತು ಬಾಂಗ್ಲಾದೇಶದೊಂದಿಗೆ ‘ಬಿ’ ಗುಂಪಿನಲ್ಲಿ ಸ್ಥಾನ ಪಡೆದಿದೆ. ಭಾರತವು ಅಮೆರಿಕ ವಿರುದ್ಧದ ಪಂದ್ಯದ ನಂತರ, 17ರಂದು ಬಾಂಗ್ಲಾ ವಿರುದ್ಧ ಮತ್ತು 24ರಂದು ನ್ಯೂಜಿಲೆಂಡ್ ವಿರುದ್ಧ ಆಡಲಿದೆ.

ಜಿಂಬಾಬ್ವೆ ಮತ್ತು ನಮೀಬಿಯಾ ಜಂಟಿಯಾಗಿ 16 ತಂಡಗಳ ಟೂರ್ನಿಯನ್ನು ಆಯೋಜಿಸುತ್ತಿವೆ.

ಪಂದ್ಯ ಆರಂಭ: ಮಧ್ಯಾಹ್ನ 1
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ವಾರಿಯರ್ಸ್ ವಿರುದ್ಧ ಕ್ಯಾಪಿಟಲ್ಸ್‌ಗೆ ರೋಚಕ ಜಯ

ನವಿ ಮುಂಬೈ (ಪಿಟಿಐ): ಕೊನೆಯ ಎಸೆತದವರೆಗೆ ಬೆಳೆದ ರೋಚಕ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಬುಧವಾರ ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಯು.ಪಿ. ವಾರಿಯರ್ಸ್ ತಂಡವನ್ನು 7 ವಿಕೆಟ್‌ಗಳಿಂದ ಮಣಿಸಿತು.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 155 ರನ್‌ಗಳ ಸವಾಲಿನ ಗುರಿಯನ್ನು ಬೆನ್ನಟ್ಟಿದ ಡೆಲ್ಲಿ ತಂಡವು 20 ಓವರ್‌ಗಳಲ್ಲಿ ಮೂರು ವಿಕೆಟ್‌ಗೆ 158 ರನ್ ಗಳಿಸಿ ಸಂಭ್ರಮಿಸಿತು. ಆಲ್‌ರೌಂಡ್ ಆಟ ಪ್ರದರ್ಶಿಸಿದ ಶಫಾಲಿ ವರ್ಮಾ (16ಕ್ಕೆ 2 ಮತ್ತು 36 ರನ್) ಮತ್ತು ಅರ್ಧಶತಕ ದಾಖಲಿಸಿದ ಲಿಜೆಲ್ ಲೀ (67;44ಎ, 4x8, 6x3) ತಂಡದ ಗೆಲುವಿನಲ್ಲಿ ಮಿಂಚಿದರು.

ಜೆಮಿಮಾ ರಾಡ್ರಿಗಸ್ ನಾಯಕತ್ವದ ಡೆಲ್ಲಿ ತಂಡವು ಹಾಲಿ ಆವೃತ್ತಿಯಲ್ಲಿ ಎರಡು ಸೋಲುಗಳ ಬಳಿಕ ಗೆಲುವಿನ ಖಾತೆ ತೆರೆಯಿತು. ವಾರಿಯರ್ಸ್‌ಗೆ ಇದು ಹ್ಯಾಟ್ರಿಕ್ ಸೋಲು.

ಸ್ಫೋಟಕ ಬ್ಯಾಟರ್ ಶಫಾಲಿ ವರ್ಮಾ (36;32ಎ) ಮತ್ತು ಲಿಜೆಲ್ ಅವರು ಮೊದಲ ವಿಕೆಟ್‌ಗೆ ಬಿರುಸಿನ 94 ರನ್ (69ಎ) ಸೇರಿಸಿ ತಂಡಕ್ಕೆ ಉತ್ತಮ ಅಡಿಪಾಯ ಹಾಕಿದರು. ಅವರಿಬ್ಬರ ವಿಕೆಟ್‌ಗಳು ಉರುಳುತ್ತಿದ್ದಂತೆ ರನ್ ವೇಗಕ್ಕೆ ಕಡಿವಾಣ ಬಿತ್ತು. ಸ್ಪಿನ್ನರ್ ದೀಪ್ತಿ ಶರ್ಮಾ ಅವರು ಲಿಜೆಲ್ ಮತ್ತು ಜೆಮಿಮಾ (21;14ಎ) ಅವರ ವಿಕೆಟ್‌ಗಳನ್ನು ಪಡೆದರು. ಮತ್ತೊಂದೆಡೆ ತಾಳ್ಮೆಯ ಆಟ ಪ್ರದರ್ಶಿಸಿದ ಲಾರಾ ವೋಲ್ವಾರ್ಟ್ (ಔಟಾಗದೇ 25; 24ಎ) ತಂಡವನ್ನು ಗೆಲುವಿನ ದಡ ಸೇರಿಸಿದರು.



ಎರಡು ವಿಕೆಟ್ ಪಡೆದ ಶಫಾಲಿ ವರ್ಮಾ

ಇಂದಿನ ಪಂದ್ಯ
ಮುಂಬೈ ಇಂಡಿಯನ್ಸ್ Vs ಯು.ಪಿ. ವಾರಿಯರ್ಸ್
ಸಮಯ: ರಾತ್ರಿ 7.30
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಇದಕ್ಕೂ ಮೊದಲು ಟಾಸ್ ಗೆದ್ದ ಡೆಲ್ಲಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕಿ ಮೆಗ್ ಲ್ಯಾನಿಂಗ್ (54; 38ಎ, 4X9, 6X1) ಮತ್ತು ಹರ್ಲೀನ್ ಡಿಯೊಲ್ (47; 36ಎ) ಅವರ ಬ್ಯಾಟಿಂಗ್ ಬಲದಿಂದ 8 ವಿಕೆಟ್‌ಗಳಿಗೆ 154 ರನ್ ಗಳಿಸಿತು.

ಯುಪಿ ತಂಡಕ್ಕೆ ಆರಂಭಿಕ ಓವರ್‌ನಲ್ಲಿಯೇ ಮರೈಝಾನ್ ಕಾಪ್ ಪೆಟ್ಟು ಕೊಟ್ಟರು. ಕಿರಣ್ ನವಿಗೆರೆ ವಿಕೆಟ್ ಗಳಿಸಿದರು. ಬಳಿಕ ಲ್ಯಾನಿಂಗ್ (54; 38ಎ, 4X9, 6X1) ಮತ್ತು ಫೋಬಿ ಲಿಚ್‌ಫೀಲ್ಡ್ (27; 29ಎ) ಅವರು ಇನಿಂಗ್ಸ್‌ಗೆ ಜೀವ ತುಂಬಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 47 ರನ್ ಸೇರಿಸಿದರು. ಲ್ಯಾನಿಂಗ್ ಮತ್ತು ಹರ್ಲೀನ್ (47; 36ಎ) ಜೊತೆಯಾಟದಲ್ಲಿ 85 ರನ್ ಸೇರಿದವು. ಶಫಾಲಿ ಎರಡು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಯುಪಿ ವಾರಿಯರ್ಸ್: 20 ಓವರ್‌ಗಳಲ್ಲಿ 8ಕ್ಕೆ154 (ಮೆಗ್ ಲ್ಯಾನಿಂಗ್ 54, ಫೋಬಿ ಲಿಚ್‌ಫೀಲ್ಡ್ 27, ಹರ್ಲೀನ್ ಡಿಯೊಲ್ ಔಟಾಗದೇ 47, ಮರೈಝಾನ್ ಕಾಪ್ 24ಕ್ಕೆ2, ಶಫಾಲಿ ವರ್ಮಾ 16ಕ್ಕೆ2). ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 3ಕ್ಕೆ 158 (ಶಫಾಲಿ ವರ್ಮಾ 36, ಲಿಜೆಲ್ ಲೀ 67, ಲಾರಾ ವೋಲ್ವಾರ್ಟ್ ಔಟಾಗದೇ 25; ದೀಪ್ತಿ ಶರ್ಮಾ 26ಕ್ಕೆ 2). ಪಂದ್ಯದ ಆಟಗಾರ್ತಿ: ಶಫಾಲಿ ವರ್ಮಾ

ಮತ್ತೆ ಅಗ್ರಸ್ಥಾನಕ್ಕೆ ವಿರಾಟ್ ಕೊಹ್ಲಿ



ದುಬೈ (ಪಿಟಿಐ): ಭಾರತದ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ ಅವರು ಐಸಿಸಿ ಏಕದಿನ ಬ್ಯಾಟಿಂಗ್ ರ್‍ಯಾಂಕಿಂಗ್‌ನಲ್ಲಿ ರೋಹಿತ್ ಶರ್ಮಾ ಅವರನ್ನು ಹಿಂದಿಕ್ಕಿ ಮತ್ತೆ ಅಗ್ರಸ್ಥಾನಕ್ಕೇರಿದ್ದಾರೆ.

ನ್ಯೂಜಿಲೆಂಡ್ ವಿರುದ್ಧದ ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯದಲ್ಲಿ ಕೊಹ್ಲಿ ಅಮೋಘ ಅರ್ಧಶತಕ ದಾಖಲಿಸಿದ ಬಳಿಕ ಕೊಹ್ಲಿಗೆ ಬಡ್ತಿ ದೊರಕಿದೆ. 37 ವರ್ಷದ ಕೊಹ್ಲಿ 2021ರ ಜುಲೈ ನಂತರ ಮೊದಲ ಬಾರಿಗೆ ಅಗ್ರಸ್ಥಾನ ಕ್ಕೆ ಮರಳಿದ್ದಾರೆ. ಭಾರತ ತಂಡದ ಮಾಜಿ ನಾಯಕ ರೋಹಿತ್ ಮೂರನೇ ಸ್ಥಾನಕ್ಕೆ ಕುಸಿದಿದ್ದಾರೆ. ವಡೋದರಾದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಕೊಹ್ಲಿ 91 ಎಸೆತಗಳಲ್ಲಿ 93 ರನ್ ಗಳಿಸುವುದರೊಂದಿಗೆ ಭಾರತ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕೊಹ್ಲಿ ಅವರು ಸಚಿನ್ ತೆಂಡೂಲ್ಕರ್ ನಂತರ ಪುರುಷರ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಎರಡನೇ ಆಟಗಾರ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದರು.

ಭಾರತದ ತಂಡದ ನಾಯಕ ಶುಭಮನ್ ಗಿಲ್ ಐದನೇ ಸ್ಥಾನವನ್ನು ಕಾಯ್ದುಕೊಂಡಿದ್ದಾರೆ. ಶ್ರೇಯಸ್ ಅಯ್ಯರ್ ಅಗ್ರ ಹತ್ತರಲ್ಲಿ ಸ್ಥಾನ ಪಡೆದಿರುವ ಮತ್ತೊಬ್ಬ ಭಾರತದ ಬ್ಯಾಟರ್. ಕನ್ನಡಿಗ ಕೆ.ಎಲ್.ರಾಹುಲ್ 11ನೇ ಸ್ಥಾನದಲ್ಲಿದ್ದಾರೆ. ಭಾರತ ವಿರುದ್ಧ ಮೊದಲ ಏಕದಿನ ಪಂದ್ಯದಲ್ಲಿ 71 ಎಸೆತಗಳಲ್ಲಿ 84 ರನ್ ಗಳಿಸಿದ ನ್ಯೂಜಿಲೆಂಡ್ ಆಲ್‌ರೌಂಡರ್ ಡ್ಯಾರಿಲ್ ಮಿಚೆಲ್ ಬ್ಯಾಟರ್‌ಗಳ ರ್‍ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ.

ಭಾರತದ ವೇಗಿ ಮೊಹಮ್ಮದ್ ಸಿರಾಜ್ ಏಕದಿನ ಬೌಲರ್‌ಗಳ ಕ್ರಮಾಂಕದಲ್ಲಿ ಐದು ಸ್ಥಾನಗಳ ಬಡ್ತಿಯೊಂದಿಗೆ 15ನೇ ಸ್ಥಾನದಲ್ಲಿದ್ದಾರೆ. ಅಫ್ಗಾನಿಸ್ತಾನದ ರಶೀದ್ ಖಾನ್ ಅಗ್ರಸ್ಥಾನದಲ್ಲಿದ್ದಾರೆ. ಸ್ಪಿನ್ನರ್ ಕುಲದೀಪ್ ಯಾದವ್ (ಮೂರನೇ ಸ್ಥಾನ) ಅಗ್ರ ಹತ್ತರಲ್ಲಿರುವ ಭಾರತದ ಏಕೈಕ ಬೌಲರ್ ಆಗಿದ್ದಾರೆ.